(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು
ಸಭಾತ್ಯಾಗ ಮಾಡಿದರು)

(ಅಡಚಣೆ)

ಅಧ್ಯಕ್ಷರು : ಮಾನ್ಯ ಕಿನೇಕರ್‌ರವರೆ, ತಮ್ಮ ಸ್ಥಾನಕ್ಕೆ ಹೋಗಿ. ತಾವು ಸದನದ ಬಾವಿಯಲ್ಲಿ ಇರುವುದು ಸರಿಯಲ್ಲ. ನಿಮಗೆ clarification ಕೇಳುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ಇದು ಚೆನ್ನಾಗಿ ಇರುವುದಿಲ್ಲ. ದಯವಿಟ್ಟು ಧರಣಿ ವಾಪಸ್ ತೆಗೆದುಕೊಳ್ಳಿ.

(ಅಡಚಣೆ)

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೇ, ಎಂ.ಇ.ಎಸ್ ಸದಸ್ಯರು ಸದನಕ್ಕೆ ಬಹಿಷ್ಕಾರ ಹಾಕಿ ಹೋದರು. ಅವರಿಗೆ ಭಾಷೆ ಬೇಡ, ಎಲ್ಲಾ ಸೌಲಭ್ಯಗಳೂ ಬೇಕು. ಅವರು ಅಡ್ಡಿಪಡಿಸುವುದು ಸರಿಯೇ? ಅದನ್ನು ನೋಡಿಕೊಂಡು ಅದಕ್ಕೆ ನಾವು ಸಾಕ್ಷಿಯಾಗಿ ಇರಬೇಕೇ? ಐತಿಹಾಸಿಕ ಅಧಿವೇಶನದಲ್ಲಿ ಈ ರೀತಿ ನಡೆಯಬೇಕೆ? ಅವರು ಬೇಕಾದರೆ ಕನ್ನಡ ಭಾಷೆಯಲ್ಲಿ ಮಾತನಾಡಲಿ. ಅದನ್ನು ನಾವು ಸಂತೋಷವಾಗಿ ಸ್ವಾಗತಿಸುತ್ತೇವೆ.

(ಅಡಚಣೆ)

ಅಧ್ಯಕ್ಷರು : ಮಾನ್ಯ ಕಿನೇಕರ್‌ರವರೆ, ಇದು ಚೆನ್ನಾಗಿರುವುದಿಲ್ಲ. ಧರಣಿಯಿಂದ ವಾಪಸ್ ಹೋಗಿ.

(ಅಡಚಣೆ)

ಅಧ್ಯಕ್ಷರು : ಸಭೆ ಒಂದು ತೀರ್ಮಾನ ತೆಗೆದುಕೊಂಡ ಮೇಲೆ ಎಲ್ಲರೂ ಅದಕ್ಕೆ ತಲೆಬಾಗಬೇಕಾಗುತ್ತದೆ. ಈಗ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಇಷ್ಟವಿರಲಿಲ್ಲ, ಅವರು ಹೊರಗಡೆ ಹೋದರು. ಒಂದು ರೀತಿಯಲ್ಲಿ ಅವರು ಸಭೆಯ ತೀರ್ಮಾನಕ್ಕೆ ತಲೆ ಬಾಗಿದರು. ಮಾನ್ಯ ಕಿನೇಕರ್‌ರವರೆ, ನೀವು ನಿಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ. ನಿಮಗೆ clarification ಕೇಳುವುದಕ್ಕೆ ಅಥವಾ ನಿಮ್ಮ constituency ಸಮಸ್ಯೆ ಬಗ್ಗೆ ಏನಾದರೂ ಕೇಳುವುದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಂ.ಪಿ ರೇಣುಕಾಚಾರ್ಯ : ಸನ್ಮಾನ್ಯ ಅಧ್ಯಕ್ಷರೆ, ಈ ಐತಿಹಾಸಿಕ ಅಧಿವೇಶನ ಮುಗಿಸಿ ನಾವೆಲ್ಲರೂ ಹೋಗುತ್ತಿದ್ದೇವೆ. ಸನ್ಮಾನ್ಯ ಕಿನೇಕರ್‌ರವರು ನಮಗೆಲ್ಲರಿಗೂ ಚಹಾ ಕೂಟ ಏರ್ಪಡಿಸಲಿ. ದಯಮಾಡಿ ಅವರು ಹೊರಗಡೆ ಹೋಗಿ ಅದನ್ನು ಏರ್ಪಡಿಸಿ ಎಂದು ಕೇಳಿಕೊಳ್ಳುತ್ತೇವೆ.

ಅಧ್ಯಕ್ಷರು : ಅದನ್ನು ಮಾಡುತ್ತಾರೆ, ಅದಕ್ಕೇನೂ ಇಲ್ಲ. ಒಂದು ಚಹಾ ಕುಡಿಸಲಿಕ್ಕೆ ಅವರಿಗೇನೂ ತೊಂದರೆ ಇಲ್ಲ.

(ಅಡಚಣೆ)

9. ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಬೆಳಗಾವಿ ನಗರದಲ್ಲಿ ಐದು ದಿನಗಳ ಕಾಲ ಜರುಗಿರತಕ್ಕಂಥ ಈ ಒಂದು ಐತಿಹಾಸಿಕ ಕರ್ನಾಟಕ ವಿಧಾನ

ಮಂಡಲದ ಅಧಿವೇಶನ ಹಲವಾರು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದಿದೆ. ಈ ಸಂದರ್ಭದಲ್ಲಿ ಸದನದ ಎರಡು ಮನೆಗಳ ಸದಸ್ಯರುಗಳು ಹಲವಾರು ವಿಷಯಗಳನ್ನು, ವಿಶೇಷವಾಗಿ ಉತ್ತರ ಕರ್ನಾಟಕದ ಸಮಸ್ಯೆಗಳು ಮತ್ತು ಅಭಿವೃದ್ಧಿಗಳ ಬಗ್ಗೆ ಈ ಸದನದಲ್ಲಿ ಬೆಳಕನ್ನು ಚೆಲ್ಲಿರುತ್ತಾರೆ. ಅದಕ್ಕಾಗಿ ನಾನು ಎಲ್ಲಾ ಸದಸ್ಯ ಮಿತ್ರರಿಗೆ ಮೊದಲನೆಯದಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸಲಿಕ್ಕೆ ಬಯಸುತ್ತೇನೆ. ಅವರುಗಳು ಮಾತನಾಡತಕ್ಕಂಥ ಸಂದರ್ಭದಲ್ಲಿ ಅವರದೇ ಆದಂತಹ ಧಾಟಿಗಳಲ್ಲಿ ಅವರ ಭಾವನೆಗಳನ್ನುವ್ಯಕ್ತಪಡಿಸಿದ್ದಾರೆ. ಅವರಿಗೆ ಇರತಕ್ಕಂಥ ಕಳಕಳಿಯನ್ನು ಸದಸ್ಯರುಗಳು ವ್ಯಕ್ತಪಡಿಸಿದ್ದಾರೆ ಮತ್ತು ಅನೇಕ ವಿಷಯಗಳ ಬಗ್ಗೆ ಈ ಸದನದಲ್ಲಿ ಬೆಳಕನ್ನು ಚೆಲ್ಲಿದ್ದಾರೆ. ಆ ವಿಷಯಗಳ ಬಗ್ಗೆ ಸರ್ಕಾರದ ಅನಿಸಿಕೆಗಳನ್ನು ಈ ಸಂದರ್ಭದಲ್ಲಿ ಹಂಚಿಕೊಳ್ಳಲಿಕ್ಕೆ ಬಯಸುತ್ತೇನೆ. ಈ ಒಂದು ಸದನವನ್ನು ಕರೆದಂತಹ ಸಂದರ್ಭದಲ್ಲಿ, ಇದು ಕೇವಲ ಪ್ರಚಾರಕ್ಕಾಗಿ ಕರೆದಿರತಕ್ಕಂಥ ಸದನ, ಕೆಲವು ವಿಷಯಗಳನ್ನು ಜನರಿಂದ ಮರೆಮಾಚುವುದಕ್ಕೆ ಕರೆದಿರತಕ್ಕಂಥ ಸನ್ನಿವೇಶ ಎನ್ನುವ ರೀತಿಯ ಕೆಲವು ಭಾವನೆಗಳನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ಈ ಸದನದ ಮುಖಾಂತರ ಯಾವುದೇ ರೀತಿಯ ಪ್ರಚಾರವನ್ನು ನಮ್ಮ ಸರ್ಕಾರ ಪಡಯಬೇಕಾದಂತಹ ಅವಶ್ಯಕತೆ ಇಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಪಕ್ಕದ ರಾಜ್ಯವಾದ ಮಹಾರಾಷ್ಟ್ರ ಮಹಾಜನ್ ವರದಿಯ ವಿಷಯದಲ್ಲಿ ಗೊಂದಲವನ್ನು ಸೃಷ್ಟಿ ಮಾಡಲಿಕ್ಕೆ ಹೊರಟಂತಹ ಸನ್ನಿವೇಶದ ಹಿನ್ನೆಲೆ ಹಾಗೂ ಹಲವಾರು ವರ್ಷಗಳಿಂದ ಈ ಭಾಗದ ಪ್ರಮುಖರುಗಳು ವಿಧಾನಸಭೆಯ ಕಲಾಪಗಳನ್ನು ಬೆಳಗಾವಿಯಲ್ಲಿ ನಡೆಸಬೇಕು ಎನ್ನುವಂತಹ ಬೇಡಿಕೆಗಳನ್ನು ಎಲ್ಲಾ ಸರ್ಕಾರಗಳ ಮುಂದೆ ಮಂಡಿಸುತ್ತಾ ಬಂದಿದ್ದರು, ಆ ಸನ್ನಿವೇಶದಲ್ಲಿ ಇವತ್ತು ಮಹಾರಾಷ್ಟ್ರಕ್ಕೆ ನಮ್ಮ ಸರ್ಕಾರದ ಭಾವನೆಗಳು ಮತ್ತು ನಮ್ಮ ಸರ್ಕಾರಕ್ಕೆ ಇರತಕ್ಕಂಥ ಬದ್ಧತೆಯನ್ನು ಹೇಳಬೇಕು ಹಾಗೂ ಮಹಾಜನ್ ವರದಿಯೇ ಅಂತಿಮ ಎನ್ನುವುದನ್ನು ಪುನ: ಕೇಂದ್ರ ಸರ್ಕಾರ ಮತ್ತು ಮಹಾರಾಷ್ಟ್ರ ಸರ್ಕಾರದ ಗಮನಕ್ಕೆ ತರುವುದಕ್ಕೆ ಈ ಒಂದು ಸನ್ನಿವೇಶ ಬಹುಶ: ಪ್ರಯೋಜನಕಾರಿ ಆಗಬಹುದು ಅನ್ನುವ ದೃಷ್ಟಿಯಿಂದ ಈ ಸದನವನ್ನು ಕರೆಯಲು ತೀರ್ಮಾನ ಮಾಡಲಾಯಿತು ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ಹಲವಾರು ವಿಷಯಗಳ ಬಗ್ಗೆ ಚರ್ಚೆಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಪ್ರಮುಖವಾಗಿ ಡಾ: ನಂಜುಂಡಪ್ಪ ವರದಿಯ ಬಗ್ಗೆ ಸದನದ ಸದಸ್ಯರುಗಳ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. 2002ನೇ ಇಸವಿಯಲ್ಲಿ ನಂಜುಂಡಪ್ಪನವರು ಕೊಟ್ಟಿರತಕ್ಕಂಥ ವರದಿಯನ್ನು ಇವತ್ತು ಕಾರ್ಯರೂಪಕ್ಕೆ ತರುವುದಕ್ಕೆ ಸರ್ಕಾರಗಳು ಗಮನವನ್ನು ಹರಿಸುತ್ತಿಲ್ಲ ಎನ್ನುವಂತಹ ವಿಷಯವನ್ನು ಪ್ರಮುಖವಾಗಿ ಎಲ್ಲಾ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಅದೇ ರೀತಿ ಇವತ್ತಿನ ಬರಗಾಲ ಮತ್ತು ಪ್ರವಾಹಕ್ಕೆ ಸಂಬಂಧಪಟ್ಟಂತೆ ಈ ಒಂದು ಮೈತ್ರಿ ಸರ್ಕಾರ ಸರಿಯಾದ ರೀತಿಯಲ್ಲಿ ನಿರ್ಧಾರಗಳನ್ನು ಮಾಡಿಲ್ಲ, ಯಾವುದೇ

ಕಾಮಗಾರಿಗಳಿಗೆ ಸರ್ಕಾರ ಕಾರ್ಯೋನ್ಮುಖವಾಗಿಲ್ಲ ಎನ್ನುವಂತಹ ಮಾತುಗಳನ್ನು ಪ್ರಮುಖರು ಪ್ರಸ್ತಾಪ ಮಾಡಿದ್ದಾರೆ. ಅದರ ಜೊತೆಗೆ ಹಲವರು ಈ ಭಾಗದ ನಿರ್ಧಾರಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಯಾವ ಯಾವ ರೀತಿಯಲ್ಲಿ ಕೆಲಸಗಳಾಗಿದೆ ಎನ್ನುವುದನ್ನೂ ಸರ್ಕಾರದ ಗಮನಕ್ಕೆ ತಂದಿದ್ದಾರೆ. ನಾನು ಕೆಲವು ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಿ, ನಂತರ ಸರ್ಕಾರ ಈ ಬರಗಾಲ ಮತ್ತು ಪ್ರವಾಹದ ಬಗ್ಗೆ ಕಳೆದ 3–4 ತಿಂಗಳಿನಿಂದ ಏನು ಕ್ರಮವನ್ನು ತೆಗೆದುಕೊಂಡಿದ್ದೇವೆ ಎನ್ನುವುದನ್ನು ನಂತರ ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಪ್ರಮುಖವಾಗಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಆಲಮಟ್ಟಿ ಜಲಾಶಯವನ್ನು ರಾಷ್ಟ್ರಕ್ಕೆ ಸಮರ್ಪಣೆ ಮಾಡತಕ್ಕಂಥ ಸಂದರ್ಭದಲ್ಲಿ ಸನ್ಮಾನ್ಯ ಪ್ರಧಾನ ಮಂತ್ರಿಗಳನ್ನು ಕರೆಯಲಿಲ್ಲ. ಅದು ತಪ್ಪು ಕಲ್ಪನೆಗೆ ಅವಕಾಶವಾಯಿತು, ಹಾಗೂ ಆ ಕಾರ್ಯಕ್ರಮವನ್ನು ಈ ಹೊಸ ಮೈತ್ರಿ ಸರ್ಕಾರ ಬಂದ ನಂತರ ಮುಗಿಸಿರತಕ್ಕಂಥ ಯೋಜನೆ ಎನ್ನುವಂತಹ ರೀತಿಯ ಪ್ರಚಾರವನ್ನು ಬಿಂಬಿಸಲಿಕ್ಕೆ ಹೊರಟರು ಎನ್ನುವಂತಹ ಮಾತನ್ನು ಹೇಳಿದರು. ರಾಷ್ಟ್ರಪತಿಗಳು ಆ ಕಾರ್ಯಕ್ರಮಕ್ಕೆ ಬರಲಿಕ್ಕೆ ಅವರ ಅನುಮತಿಯನ್ನು ಕೊಟ್ಟರು. ಮಾನ್ಯ ಪ್ರಧಾನ ಮಂತ್ರಿಗಳು ಮತ್ತು ರಾಷ್ಟ್ರಪತಿಗಳು ಒಂದೇ ಕಾರ್ಯಕ್ರಮಕ್ಕೆ ಬರತಕ್ಕಂಥದ್ದು ಹಲವಾರು ಸನ್ನಿವೇಶಗಳಲ್ಲಿ ವಿರಳವಾಗಿದೆ. ಆ ದೃಷ್ಟಿಯಿಂದ ಗೌರವಾನ್ವಿತ ರಾಷ್ಟ್ರಪತಿಗಳ ಮುಖಾಂತರವೇ ನಾವು ಈ ಒಂದು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ್ದೇವೆಂದು ಸ್ಪಷ್ಟಪಡಿಸಬಯಸುತ್ತೇನೆ. ಅದರ ಜೊತೆಗೆ ನಮ್ಮ ಸರ್ಕಾರದಲ್ಲಿ ಮಾಡಿದಂತಹ ಹಲವಾರು ಅಭಿವೃದ್ಧಿ ಕೆಲಸಗಳನ್ನು ಅವರು ಉದ್ಘಾಟಿಸಿ, ಈ ಎಲ್ಲಾ ಉದ್ಘಾಟನೆಗಳಲ್ಲೂ ಈ ಮೈತ್ರಿ ಸರ್ಕಾರ ಬಂದ ಆರು ತಿಂಗಳಿನಲ್ಲಿ ಕೆಲಸಗಳು ಆಗಿರತಕ್ಕಂಥದ್ದು ಎನ್ನುವುದನ್ನು ಪ್ರತಿಬಿಂಬಿಸಲಿಕ್ಕೆ ಹೊರಟರು ಎನ್ನುವಂತಹ ಮಾತನ್ನೇನು ಹೇಳಿದ್ದಾರೆ, ಆ ವಿಷಯದಲ್ಲಿ ಇವತ್ತು ಸರ್ಕಾರಗಳು ಬರುತ್ತವೆ, ಸರ್ಕಾರಗಳು ಹೋಗುತ್ತದೆ. ಆ ಒಂದು ಸನ್ನಿವೇಶಗಳಲ್ಲಿ ಸರ್ಕಾರ ಕಾರ್ಯಕ್ರಮವನ್ನು ನಿರೂಪಿಸತಕ್ಕಂಥ ಸಂದರ್ಭದಲ್ಲಿ ಯಾವುದೇ ರೀತಿಯಲ್ಲಿ ನಾವು ಅವರನ್ನು ದೂರ ಇಡಬೇಕು ಎಂಬ ಪ್ರಶ್ನೆಯಲ್ಲ. ನಾನು ಕೆಲವು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ. ಕೆಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದಾಗ ಹಿಂದಿನ ಸರ್ಕಾರಗಳು ಮಾಡಿರತಕ್ಕಂಥ ಕೆಲಸಗಳ ಬಗ್ಗೆ, ಅವರು ತೆಗೆದುಕೊಂಡಿರತಕ್ಕಂಥ ನಿರ್ಧಾರಗಳ ಬಗ್ಗೆ ನಾನು ಪ್ರತಿಯೊಂದು ಸಮಾರಂಭದಲ್ಲೂ ಸ್ಮರಿಸತಕ್ಕಂಥ ಕೆಲಸವನ್ನು ಮಾಡಿದ್ದೇನೆ ಎಂದು ನಾನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇತ್ತೀಚೆಗೆ ಬೆಂಗಳೂರು–ಮೈಸೂರು ರಸ್ತೆಯು ಉದ್ಘಾಟನೆಯ ಸಂದರ್ಭದಲ್ಲಿ ಆಗ ಮುಖ್ಯಮಂತ್ರಿಗಳಾಗಿದ್ದಂತಹ ಸನ್ಮಾನ್ಯ ಕೃಷ್ಣರವರನ್ನು ಆ ಸಂದರ್ಭದಲ್ಲಿ ನಾನು ನೆನಸಿಕೊಂಡಿದ್ದೇನೆ. ವಿರೋಧ ಪಕ್ಷದ ನಾಯಕರಾದಂತಹ ಧರ್ಮಸಿಂಗ್‌ರವರನ್ನೂ ಕೂಡ ನಾನು ನೆನಪಿಸಿಕೊಂಡಿದ್ದೇನೆ. ಆ ಒಂದು ಕಾರ್ಯವನ್ನು ಮಾಡುವುದಕ್ಕೆ ಏನು ತೀರ್ಮಾನವನ್ನು ಮಾಡಿದರು, ಆ ಒಂದು ಸಂದರ್ಭದಲ್ಲಿ ಉದ್ಘಾಟನೆಯನ್ನು ಮಾಡಬೇಕಾದರೆ ನಾನು ಅವರುಗಳ ಹೆಸರುಗಳನ್ನು ಪ್ರಸ್ತಾಪ ಮಾಡಿದ್ದೇನೆ.

3.30PM

ಅದೇ ರೀತಿ ಗುಲ್ಬರ್ಗಾದಲ್ಲಿ ಪೋಲಿಸ್ ಭವನದ ಉದ್ಘಾಟನೆಯ ಸಂಧರ್ಭದಲ್ಲಿ ಮಾನ್ಯ ಧರ್ಮಸಿಂಗ್‌ರವರನ್ನು ಮತ್ತು ಮಾನ್ಯ ಖರ್ಗೆಯವರನ್ನು ನಾನು ನೆನಪಿಸಿಕೊಂಡು ಮಾತನಾಡಿದ್ದೇನೆ. ಇವೊತ್ತು ಉತ್ತರ ಕರ್ನಾಟಕದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಪ್ರಮುಖವಾಗಿ ನೀರಾವರಿ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಬೇಕಾದರೆ ಎರಡ್ಮೂರು ಯೋಜನೆಗಳನ್ನು ರಾಷ್ಟಕ್ಕೆ ಸಮರ್ಪಣೆ ಮಾಡಿದಂಥ ಸಂದರ್ಭದಲ್ಲಿ ನಮ್ಮ ನಿರ್ಧಾರಗಳ ಬಗ್ಗೆ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆ ಕಾರ್ಯಕ್ರಮಗಳಿಗೆ ನಾವು ಚಾಲನೆಯನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. 1966ನೆಯ ಇಸವಿಯಲ್ಲಿ ಈ ಒಂದು ಭಾಗದ ನೀರಾವರಿಯ ಕಾರ್ಯಕ್ರಮಗಳನ್ನು ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಶಂಕುಸ್ಥಾಪನೆಯನ್ನು ಮಾಡಿದ ನಂತರ ಈ ಕಾರ್ಯಕ್ರಮಗಳು ಪ್ರಾರಂಭವಾದುವು. 1966ನೆಯ ಇಸವಿಯಲ್ಲಿ ಶಂಕುಸ್ಥಾಪನೆಯಾದ ಬಳಿಕ ಈ ಕೆಲಸಗಳ ವಿಷಯದಲ್ಲಿ 1995ನೆಯವರೆಗೆ ಅಂದರೆ ಸುಮಾರು 30 ವರ್ಷಗಳ ಕಾಲ ಹಣವನ್ನು ಖರ್ಚು ಮಾಡಿರುವುದು ಕೇವಲ 1430 ಕೋಟಿ ರೂಪಾಯಿಗಳು ಮಾತ್ರ. ನಂತರ ಬಂದಂಥ ಸರ್ಕಾರಗಳು ಪ್ರತಿ ವರ್ಷ ಈ ಕಾಮಗಾರಿಗಳಿಗೆ 1000 ಕೋಟಿ ರೂಪಾಯಿಗಳನ್ನು ನೇಮಿಸಲು ಇಡಬೇಕೆನ್ನುವ ನಿರ್ಧಾರವನ್ನು ಆ ಸಂದರ್ಭದಲ್ಲಿ ಮಾಡಿದರು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಕೃಷ್ಣಾ ಭಾಗ್ಯ ಜಲ ನಿಗಮದ ಬಗ್ಗೆ ಪ್ರಸ್ತಾಪವನ್ನು ಸಭೆಯಲ್ಲಿ ಮಾಡಿದರು. ಮಾನ್ಯ ಎಸ್ ಎಂ. ಕೃಷ್ಣಾರವರ ಕಾಲದಲ್ಲಿ ಸಮಾರು 4 ಸಾವಿರ ಕೋಟಿ ರೂಪಾಯಿಗಳ ಹಣವನ್ನು ಕೃಷ್ಣಾ ಭಾಗ್ಯ ಜಲ ನಿಗಮದ ಮೂಲಕ ಈ ಒಂದು ಕಾಮಗಾರಿಗೆ ವಿನಿಯೋಗ ಮಾಡಿದ್ದೇವೆ ಎನ್ನುವಂಥ ಮಾತನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ, ಈ ಕೃಷ್ಣಾ ಭಾಗ್ಯ ಜಲ ನಿಗಮ ಪ್ರಾರಂಭವಾಗಬೇಕೆಂದು ವೀರಪ್ಪಮೊಯ್ಲಿಯವರು ನಿರ್ಧಾರ ಮಾಡಿದರು. ಆದರೆ ಆ ಒಂದು ಕೃಷ್ಣ ಭಾಗ್ಯ ಜಲ ನಿಗಮವನ್ನು ಸ್ಥಾಪನೆಯನ್ನು ಮಾಡಬೇಕಾದರೆ ಯಾವುದೇ ಒಂದು ರೀತಿ ನಿಯಮಗಳನ್ನು ರೂಪಿಸಿರಲಿಲ್ಲ. 1995ನೆಯ ಇಸವಿಯಲ್ಲಿ ಬಂದಂಥ ಸರ್ಕಾರದಲ್ಲಿ ಸನ್ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಗಳಾಗಿ ಪ್ರಮುಖವಾಗಿ ಮೂರು ವಿಷಯಗಳ ಬಗ್ಗೆ ಕೆಲವು ತೀರ್ಮಾನಗಳನ್ನು ಮಾಡಿದರು, ಆ ತೀರ್ಮಾನಗಳನ್ನು ಮಾಡಿದ ಹಿನ್ನೆಲೆಯಲ್ಲಿ ಈ ಕಾಮಗಾರಿಗಳಿಗೆ ಹೆಚ್ಚಿನ ವೇಗವನ್ನು ದೊರಕಿಸುವುದಕ್ಕೆ ತೀರ್ಮಾನ ಮಾಡಿದ್ದಾರೆ ಎಂಬುದನ್ನು ಒಂದು ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ಈ ಒಂದು ಭಾಗದಲ್ಲಿ ಒಂದು ರೀತಿಯ ಕೂಗನ್ನು ಎಬ್ಬಿಸಿದರು. ಸನ್ಮಾನ್ಯ ದೇವೇಗೌಡರು ಈ ಭಾಗದ ನೀರಾವರಿ ಕೆಲಸಗಳಿಗೆ ಅಡಚಣೆಯನ್ನು ಮಾಡಿದ್ದಾರೆ, ಈ ಭಾಗದ ಅಭಿವೃದ್ಧಿಗೆ ಅವರು ವಿರೋಧಿ ಎನ್ನುವ ರೀತಿಯ ಭಾವನೆಯನ್ನು ಮೂಡಿಸುವುದಕ್ಕೆ ಕೆಲವರು ಪ್ರಯತ್ನವನ್ನು ಪಟ್ಟರು, ಅಧ್ಯಕ್ಷರೆ, ಇವೊತ್ತು ಹಿರಿಯರಾಗಿರತಕ್ಕಂಥ ಮಾನ್ಯ ಖರ್ಗೆಯವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಹಿಪ್ಪರಗಿಯ ಜಲಾಶಯದ ಹಿನ್ನೀರಿನಲ್ಲಿ ಮುಳುಗಿರತಕ್ಕಂಥ

ಗ್ರಾಮಗಳ ಪುನರ್ವಸತಿ ಸೌಕರ್ಯವನ್ನು ಕಲ್ಪಿಸಬೇಕೆಂದು ನಮ್ಮ ಗಮನಕ್ಕೆ ತಂದಿದ್ದಾರೆ. ಅವರು ಆ ರೀತಿ ಮಾತನಾಡಿರುವುದನ್ನು ನಾನು ಈ ಸಂದರ್ಭದಲ್ಲಿ ಮೆಚ್ಚಿಕೊಳ್ಳಲು ಸಿದ್ಧನಿದ್ದೇನೆ. ಇವೊತ್ತು ಬಾಗಲಕೋಟೆಯ ಹಿನ್ನೀರಿನಿಂದ ಮುಳುಗಿದ ಹಲವಾರು ಹಳ್ಳಿಗಳಿಗೆ ಪುನರ್ವಸತಿಯನ್ನು ಕಲ್ಪಿಸಬೇಕಾಗಿತ್ತು. 1995ನೇ ಇಸವಿಯಲ್ಲಿ ಸುಮಾರು 136 ಗ್ರಾಮಗಳಿಗೆ ಪುನರ್ ಸೌಕರ್ಯವನ್ನು ಕಲ್ಪಿಸತಕ್ಕಂಥ ವಿಷಯದಲ್ಲಿ, ಅದು ಆ ಸಂದರ್ಭದಲ್ಲಿ ನೆನೆಗುದಿಗೆ ಏನು ಬಿದ್ದಿತ್ತೋ, ಆ ಬಗ್ಗೆ ಒಬ್ಬ ವಿಶೇಷ ಅಧಿಕಾರಿಯನ್ನು ನೇಮಕ ಮಾಡುವುದರ ಮುಖಾಂತರ ಆ 136 ಗ್ರಾಮಗಳಿಗೆ ವಿಶೇಷವಾಗಿ ಹಣವನ್ನು ಕೊಡುವುದರ ಜೊತೆಗೆ ಆ ಗ್ರಾಮಗಳ ಪುನರ್ವಸತಿಗೆ ಸೌಕರ್ಯವನ್ನು ಕಲ್ಪಿಸತಕ್ಕಂಥ ಕೆಲಸಕ್ಕೆ ಚಾಲನೆಯನ್ನು ಅವೊತ್ತು ಏನು ಕೊಟ್ಟರು, ಆ ಕೆಲಸಗಳನ್ನು ಮಾಡಲು ಅವೊತ್ತು ಆ ರೀತಿಯ ದಿಟ್ಟ ನಿರ್ಧಾರವನ್ನು ಮಾಡಿ ಬಹುಶ: ಆ ಕೆಲಸವನ್ನು ಮಾಡದೇ ಇದ್ದಿದ್ದರೆ ಇವೊತ್ತು ಈ ಕಾಮಗಾರಿಗಳು ಇನ್ನೂ ನಿಧಾನಗತಿಯಲ್ಲಿ ಅಗತಕ್ಕಂಥದ್ದಕ್ಕೆ ಅವಕಾಶಗಳಾಗುತ್ತಿತ್ತು. ದಿವಂಗತ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ದಿವಂಗತ ನಿಜಲಿಂಗಪ್ಪನವರು ಏನು ಬಿಜಾಪುರದಲ್ಲಿ ಒಂದು ದೊಡ್ಡ ಸಭೆಯನ್ನು ಮಾಡಿದರು. ಅಂದಿನ ಪ್ರಧಾನ ಮಂತ್ರಿಗಳನ್ನು ಕರೆಸಿ ಸುಮಾರು 135 ಕೆ.ಜಿ.ಯ ಚಿನ್ನದಲ್ಲಿ ಅವರನ್ನು ತೂಗಿ, ಆ ಸಂದರ್ಭದಲ್ಲಿ ಆ ಭಾಗದ ಜನತೆ ಏನು ಈ ಒಂದು ಕಾಮಗಾರಿಗಳಿಗೆ ಹಣವನ್ನು ಕೊಡಬೇಕೆಂದು ಮನವಿಯನ್ನು ಮಾಡಿದರು, ಕೇಂದ್ರ ಸರ್ಕಾರ ಆ ಸಂದರ್ಭದಲ್ಲಿ ಯಾವ ರೀತಿ ಸ್ಪಂದಿಸಿದ್ದಾರೆ ಎಂಬ ಬಗ್ಗೆ ಈ ಸಂದರ್ಭದಲ್ಲಿ ನಾನು ಚರ್ಚೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಅದೇ ರೀತಿ ದೇವೇಗೌಡರು ಪ್ರಧಾನ ಮಂತ್ರಿಗಳಾದಾಗ Accelerated Irrigation Scheme ನಲ್ಲಿ ನೀರಾವರಿಗೆ ಹಣವನ್ನು ಕೊಡತಕ್ಕಂಥದ್ದಕ್ಕೆ ಪ್ರಥಮವಾಗಿ ದೇಶದಲ್ಲಿ ಈ ಒಂದು ಕಾರ್ಯಕ್ರಮವನ್ನು ನಿರೂಪಿಸಿದರು. ಅದರ ಮುಖಾಂತರ ಸುಮಾರು 2 ಸಾವಿರ ಕೋಟಿ ರೂಪಾಯಿಗಳವರೆಗೆ ಹಣ ಈವರೆಗೆ ಆ ಸ್ಕೀಂನಲ್ಲಿ ರಾಜ್ಯಕ್ಕೆ ಬರುವುದಕ್ಕೆ ಚಾಲನೆಯನ್ನು ಕೊಟ್ಟಿದ್ದಾರೆ. ಇದನ್ನು ಈ ಸಂದರ್ಭದಲ್ಲಿ ನಾನು ಸನ್ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಏಕೆಂದರೆ ಆಲಮಟ್ಟಿ ವಿಷಯದಲ್ಲಿ ಅವರು ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದರಿಂದ ನಾನು ಈ ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ಇವೊತ್ತು ಪ್ರಧಾನ ಮಂತ್ರಿಗಳನ್ನು ಕರೆಯಲಿಲ್ಲ ಎಂದು ಹೇಳಿದರು. ಆದರೆ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಾರಾಯಣಪುರ ಜಲಾಶಯದ ಉದ್ಘಾಟನೆಯನ್ನು ಅಂದಿನ ಮುಖ್ಯಮಂತ್ರಿಗಳಾಗಿದ್ದಂಥ ಮಾನ್ಯ ಎಸ್.ಎಂ.ಕೃಷ್ಣಾರವರು ಮಾಡಿ ದೇಶಕ್ಕೆ ಈ ಯೋಜನೆಯ ಸಮರ್ಪಣೆಯನ್ನು ಮಾಡಿದರು. ಬಹುಶ: ನಾರಾಯಣಪುರದ ಬಲದಂಡೆ ಕಾಲುವೆ ವಿಷಯದಲ್ಲಿ ಆ ಸಂದರ್ಭದಲ್ಲಿ ಮಾನ್ಯ ದೇವೇಗೌಡರು ಕೆಲವೊಂದು ನಿರ್ಧಾರಗಳನ್ನು ಮಾಡದೇ ಹೋಗಿದ್ದರೆ ಬಲದಂಡೆ ಕಾಮಗಾರಿಗಳ ಕೆಲಸ ಯಾವ ಮಟ್ಟಕ್ಕೆ ಇವೊತ್ತು ಆಗುತ್ತಿತ್ತು

ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸುವುದಕ್ಕೆ ಬಯಸುತ್ತೇನೆ. ಆ ಸಂದರ್ಭದಲ್ಲಿ ಮಾನ್ಯ ದೇವೇಗೌಡರನ್ನು ಯಾರೂ ಸ್ಮರಿಸಿಕೊಳ್ಳಲಿಲ್ಲ. ಆದರೆ ನಾನು ಅದರ ಬಗ್ಗೆ ಟೀಕೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಇವೊತ್ತು ಸರ್ಕಾರಗಳ ಕಾರ್ಯಕ್ರಮಗಳು ಉದ್ಘಾಟನೆಯಾಗಬೇಕಾದರೆ ಆಯಾ ಸರ್ಕಾರಗಳು ಏನು ಆ ಸಂದರ್ಭದಲ್ಲಿ ಸರ್ಕಾರವನ್ನು ನಡೆಸುತ್ತಿರುತ್ತಾರೆ, ಆ ಒಂದು ಸನ್ನಿವೇಶದಲ್ಲಿ ಈ ರೀತಿಯ ಒಂದು ಕಾರ್ಯಕ್ರಮಗಳನ್ನು ಏರ್ಪಾಡು ಮಾಡತಕ್ಕಂಥ ಸಂದರ್ಭದಲ್ಲಿ ಹಿಂದಿನ ಹಲವಾರು ಸರ್ಕಾರಗಳು ಮಾಡಿರತಕ್ಕಂಥ ಕಾಮಗಾರಿಗಳೇನಿದ್ದಾವೆ, ಆ ಕಾಮಗಾರಿಗಳ ವಿಷಯದಲ್ಲಿ ಅವರಿಗೆ ಉದ್ಘಾಟನೆಯನ್ನು ಮಾಡುವುದಕ್ಕೆ ಅವಕಾಶಗಳು ಸಿಗುವುದಿಲ್ಲ. ಒಂದು ರೀತಿಯಲ್ಲಿ ಪ್ರತಿ ವರ್ಷಗಳಲ್ಲೂ ನಡೆದುಕೊಂಡು ಬಂದಿರತಕ್ಕಂಥ ದಾರಿ ಇದಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಆದುದರಿಂದ ಇವೊತ್ತು ಆಲಮಟ್ಟಿ ಜಲಾಶಯವಿರಬಹುದು, ಬೆಣ್ಣೆತೊರೆ ಜಲಾಶಯವಿರಬಹುದು, ಈ ಕಾರ್ಯಕ್ರಮಗಳಿಗೆ ದೇವೇಗೌಡರು ಸಲ್ಲಿಸಿರತಕ್ಕಂಥ ಕೊಡುಗೆ ಬಗ್ಗೆ ಮತ್ತು ಅವರ ಬಗ್ಗೆ ನಾನು ಸರ್ಟಿಫಿಕೇಟ್ ಕೊಟ್ಟು ಮಾತನಾಡಬೇಕಿಲ್ಲ. ಸರ್ಕಾರದ ಕಡತಗಳಲ್ಲಿಯೇ ಏನಿದ್ದಾವೆ, ಅದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಇವೊತ್ತು ಯಾವುದೋ ಒಂದು ಸುಯೋಗ, ಅವರ ಒಂದು ಹಲವಾರು ವರ್ಷಗಳ ಸೇವೆ, ಇವೊತ್ತು ನಾನು ಆಕಸ್ಮಿಕವಾಗಿ ಮುಖ್ಯಮಂತ್ರಿಯಾಗಿ ಈ ಕಾರ್ಯಕ್ರಮಗಳ ಉದ್ಘಾಟನೆಯನ್ನು ಮಾಡಿದ್ದೇನೆ. ಆದರೆ ಅವರು ಆ ಸಂದರ್ಭದಲ್ಲಿ ಕೆಲವು ಕಾಮಗಾರಿಗಳಿಗೆ ಶಂಕುಸ್ಥಾಪನೆಯನ್ನು ಏನು ನೆರವೇರಿಸಿದ್ದರು, ಅವುಗಳನ್ನು ನಾನು ಉದ್ಘಾಟನೆ ಮಾಡಿದ್ದೇನೆ. ಉದಾಹರಣೆಗೆ ಬೆಣ್ಣೆತೊರೆ ಯೋಜನೆ, ನಮ್ಮ ವಿಶ್ವನಾಥ್ ಪಾಟೀಲರು ಅವರು ಸಮಾರಂಭದಲ್ಲಿ ಹೇಳುತ್ತಿದ್ದರು, ದೇವೇಗೌಡರು ಶಂಕುಸ್ಥಾಪನೆಯನ್ನು ಮಾಡಿದರು. ನೀವು ಬಂದು ಉದ್ಘಾಟನೆಯನ್ನು ಮಾಡುತ್ತಿದ್ದೀರಿ ಎಂದು ಸರ್ಕಾರಗಳ ಕಾರ್ಯಕ್ರಮಗಳು ಅವಿರತವಾಗಿ ನಡೆಯತಕ್ಕಂಥ ಸಂದರ್ಭದಲ್ಲಿ ಈ ರೀತಿಯ ಘಟನೆಗಳು ಸ್ವಾಭಾವಿಕವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಬಸವರಾಜ ರಾಯರೆಡ್ಡಿಯವರು ನಿನ್ನೆ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದರು ಎಂಬುದು ನನ್ನ ಗಮನಕ್ಕೆ ಬಂತು. ಅದರಲ್ಲೂ ವಿಶೇಷವಾಗಿ ರೈಲ್ವೆ ಯೋಜನೆಗಳ ಬಗ್ಗೆ ಉತ್ತರ ಕರ್ನಾಟಕದ ಹುಬ್ಬಳ್ಳಿ–ಅಂಕೋಲಾ ರೈಲ್ವೆ ಮಾರ್ಗವಿರಬಹುದು, ಮುನಿರಾಬಾದ್ ರೈಲ್ವೆ ಮಾರ್ಗವಿರಬಹುದು, ಈ ಕಾಮಗಾರಿಗಳಿಗೆ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ಏನು ಹಣವನ್ನು ಮೀಸಲಿಟ್ಟರು, ಈ ಕಾರ್ಯಕ್ರಮಗಳನ್ನು ಚಾಲನೆ ಕೊಡುವುದಕ್ಕೆ ಅವರು ಏನು ತೀರ್ಮಾನಗಳನ್ನು ಮಾಡಿದ್ದರು ಎನ್ನುವುದರ ಬಗ್ಗೆ Railway think book ಏನಿದೆ ಅದರಲ್ಲಿ ಸಂಪೂರ್ಣ ವರದಿಗಳು ಸಿಗುತ್ತವೆ. ಆದರೆ ದೇವೇಗೌಡರು ಪ್ರಧಾನ ಮಂತ್ರಿ ಸ್ಥಾನದಿಂದ ಇಳಿದ ಮೇಲೆ ಕೇಂದ್ರ ಸರ್ಕಾರವನ್ನು ನಡೆಸತಕ್ಕಂಥವರು ಎಷ್ಟರಮಟ್ಟಿಗೆ ಈ ರಾಜ್ಯಕ್ಕೆ ರೈಲ್ವೆ ವಿಷಯದಲ್ಲಿ ಇವೊತ್ತು ಗಮನವನ್ನು ಕೊಟ್ಟಿದ್ದಾರೆ ಎನ್ನುವುದನ್ನು ಈ ಸದನದ

ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಾನು ಮುಖ್ಯಮಂತ್ರಿಯಾದ ನಂತರ ಹಲವಾರು ಬಾರಿ ರೈಲ್ವೆ ಮಂತ್ರಿಗಳನ್ನು ಭೇಟಿ ಮಾಡಿದೆ, ಈ ರಾಜ್ಯದಲ್ಲಿ ರೈಲ್ವೆ ವಿಷಯದಲ್ಲಿ ನೆನೆಗುದಿಗೆ ಬಿದ್ದಿರತಕ್ಕಂಥ ಯೋಜನೆಗಳ ಅಭಿವೃದ್ಧಿ ಬಗ್ಗೆ ನಾನು ಅವರ ಮುಂದೆ ಪ್ರಸ್ತಾಪವನ್ನು ಮಾಡಿದ್ದೇನೆ. ಅದಕ್ಕೆ ಸ್ಪಂದಿಸತಕ್ಕಂಥ ಒಂದು ವಿಷಯವೇನಿದೆ, ಅದು ನಮ್ಮ ನಿರೀಕ್ಷೆಗೆ ತಕ್ಕಂತೆ ಇಲ್ಲ ಹಾಗೂ ಆ ಒಂದು ಕೆಲಸವನ್ನು ಮಾಡತಕ್ಕಂಥದ್ದಕ್ಕೆ ಸ್ಪಂದಿಸತಕ್ಕಂಥದ್ದಕ್ಕೆ ರೈಲ್ವೆ ಇಲಾಖೆಯವರು ಸಮರ್ಪಕವಾಗಿ ನಮಗೆ ಗಮನವನ್ನು ಕೊಟ್ಟಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಾನು ಸಂದರ್ಭದಲ್ಲಿ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಹಲವಾರು ಸದಸ್ಯರುಗಳು ಈಗಾಗಲೇ ಅವರ ಮತಕ್ಷೇತ್ರಗಳಿಗೆ ಹೋಗುವ ಕಡೆಗೆ ಗಮನವನ್ನು ಕೊಟ್ಟಿದ್ದಾರೆ. ಆದುದರಿಂದ ಈ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದರ ಮುಖಾಂತರ ನಾನು ಯಾರ ಮನಸ್ಸಿಗೂ ಈ ಸಂದರ್ಭದಲ್ಲಿ ನೋವನ್ನು ಕೊಡುವುದಕ್ಕೆ ಬಯಸುವುದಿಲ್ಲ. ಇವೊತ್ತು ಈ ವಿಧಾನಸಭೆ ಅಧಿವೇಶನವನ್ನು ಈ ಭಾಗದಲ್ಲಿ ಕರೆಯುವುದರ ಮುಖಾಂತರ ಏನೊಂದು ಹೊಸ ಅಡಿಪಾಯವನ್ನು ಈ ಉತ್ತರ ಕರ್ನಾಟಕದ ಅಭಿವೃದ್ಧಿಗಳಿಗೆ ಚಾಲನೆಯನ್ನು ಕೊಡಬೇಕು ಎನ್ನುವ ದೃಷ್ಟಿಯಿಂದ ಇವೊತ್ತು ವಿಧಾನಸಭೆ ಕಾರ್ಯಕಲಾಪಗಳು ಪ್ರಾರಂಭವಾಗಿವೆ, ನಾನು ಸದನದ ಎಲ್ಲಾ ಹಿರಿಯ ಸದಸ್ಯರುಗಳಲ್ಲಿ ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದ ಎಲ್ಲಾ ಶಾಸಕರುಗಳಲ್ಲಿ ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಒಂದು ಮನವಿಯನ್ನು ಮಾಡುತ್ತೇನೆ. ನಂಜುಂಡಪ್ಪನವರ ವರದಿಯ ಬಗ್ಗೆ ವಿಶೇಷವಾದ ಕಾಳಜಿಯನ್ನು ವ್ಯಕ್ತಪಡಿಸಿದ್ದೀರಿ, ಮಾನ್ಯ ಶ್ರೀರಾಮರೆಡ್ಡಿಯವರು ಒಂದು ಮಾತನ್ನು ಹೇಳಿದರು. 2002ನೆಯ ಇಸವಿಯಲ್ಲಿ ವರದಿಯನ್ನು ಕೊಟ್ಟರೂ ವಿಧಾನಸಭೆಯಲ್ಲಿ ಯಾವುದೇ ರೀತಿಯ ಈ ಕಾರ್ಯಕ್ರಮವನ್ನು ಜಾರಿಗೆ ತರಕ್ಕಂಥದ್ದಕ್ಕೆ ಸರ್ಕಾರದಿಂದ ಆದೇಶಗಳನ್ನು ಮಾಡುವುದಕ್ಕೆ ತೀರ್ಮಾನಗಳು ಏನೂ ಆಗಿಲ್ಲ ಎಂದೂ ಇದು ಇನ್ನೂ ಕೇವಲ ವರದಿಯನ್ನೂ ಕೊಟ್ಟಿರತಕ್ಕಂಥ ಹಂತದಲ್ಲಿಯೇ ಇದೆ ಎಂದು ಅವರು ಹೇಳಿದ್ದಾರೆ. ಈ ಸದನದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅಧ್ಯಕ್ಷರೆ, ಇವೊತ್ತು ಡಾ: ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಯಾವ ತಾಲ್ಲೂಕುಗಳು ಹಿಂದೆ ಉಳಿದಿವೆ ಆ ತಾಲ್ಲೂಕುಗಳ ಅಭಿವೃದ್ಧಿಗೆ ಹೆಚ್ಚಿನ ಹಣವನ್ನು ಮೀಸಲಿಡತಕ್ಕಂಥಕ್ಕೆ ಒಂದು ಕಾರ್ಯಕ್ರಮವನ್ನು ಯಾವ ರೀತಿ ತರಬೇಕು ಎನ್ನುವುದರ ಬಗ್ಗೆ ವಿಶೇಷವಾದ ಒಂದು ಮಸೂದೆಯನ್ನು ಮುಂದಿನ ದಿನಗಳಲ್ಲಿ ತರುವುದು ಮುಖಾಂತರ ಯಾವುದೇ ಕಾರಣಕೂ ಆ ಹಣವನ್ನು ನಾವು ಕೊಡಬೇಕು ಎಂದು ಒಂದು ತೀರ್ಮಾನವನ್ನು ವಿಧಾನಸಭೆ ಮಾಡುತ್ತದೆ, ಯಾವುದೇ ಕಾರಣಕ್ಕೂ ಆ ಹಣ ಬೇರೆ ಕೆಲಸಗಳಿಗೆ ಡೈವರ್ಟ್ ಆಗದೇ ಇರತಕ್ಕಂಥದ್ದಕ್ಕೆ ತೀರ್ಮಾನವನ್ನು ಮಾಡುವುದರ ಬಗ್ಗೆ ಸದಸ್ಯರು ಏನು ಒಂದು ಮಾತನ್ನು ಸದನದಲ್ಲಿ ಆಡಿದ್ದಾರೆ ಅದಕ್ಕೆ ಸ್ಪಂದಿಸುವುದಕ್ಕೆ ಸಿದ್ಧರಿದ್ದೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ.

ಅದೇ ರೀತಿ ಇವತ್ತು ಬರಗಾಲ ಮತ್ತು ಪ್ರವಾಹದ ವಿಷಯದಲ್ಲಿ ಹಲವಾರು ಜನ ಈ ಸರ್ಕಾರ ಏನೂ ಕೆಲಸಗಳನ್ನು ಮಾಡುತ್ತಿಲ್ಲವೆಂದು ಪ್ರಸ್ತಾಪ ಮಾಡಿದ್ದಾರೆ, ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಧರ್ಮಸಿಂಗ್ ಅವರ ಜಿಲ್ಲೆಯಲ್ಲಿ ಒಂದು ಹಳ್ಳಿಯಲ್ಲಿ ವಾಸ ಮಾಡಿದಂತಹ ವಿಚಾರವನ್ನು ಈ ಸದನದ ಗಮನಕ್ಕೆ ತಂದಿದ್ದಾರೆ; ನಾನು ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಪ್ರಮುಖವಾಗಿ ಐದು ಜಿಲ್ಲೆಗಳಲ್ಲಿ ಬೆಳಗಾವಿ, ಗುಲ್ಬರ್ಗ, ರಾಯಚೂರು, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಪ್ರವಾಹದ ಹಿನ್ನೆಲೆಯಲ್ಲಿ ಹೋದವರ್ಷ ಆದಂತಹ ಘಟನೆಗಳು ನಡೆದಂತಹ ಸಂದರ್ಭದ ಹಿನ್ನೆಲೆಯನ್ನು ನೋಡಿದಾಗ, ಹೋದ ವರ್ಷ ಆದಂತಹ ಪ್ರವಾಹದ ಭೀತಿಯಿಂದ ಬಹಳ ಅನಾಹುತಗಳಾಗಿದ್ದವು, ಆ ಅನಾಹುತಗಳ ಹಿನ್ನೆಲೆಯಲ್ಲಿ ನಾವು ಮೊದಲೇ ಕೆಲವೊಂದು ನಿರ್ಧಾರಗಳನ್ನು ಮಾಡಿದ್ದರಿಂದ ಹೋದ ವರ್ಷ ಆದಂತಹ ಅನಾಹುತದ ನಷ್ಟ ಈ ವರ್ಷ ಆಗಲಿಲ್ಲವೆನ್ನುವಂತಹ ವಿಚಾರವನ್ನು ಈ ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಆ ಪ್ರವಾಹದಲ್ಲಿ ಬೆಳೆ ಏನು ನಾಶವಾಗಿದೆ ಅದರ ವರದಿಗಳನ್ನು ತರಿಸಿ, ಅದರ ಬಗ್ಗೆ ಮನವಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದೇವೆ. ಹೋದ ವರ್ಷ ಜೀವಹಾನಿಯಾದಂತಹ ಘಟನೆಗಳಿಂದ ನಮ್ಮ ಅಧಿಕಾರಿಗಳು ಮುನ್ನೆಚ್ಚರಿಕೆಯ ಕ್ರಮವನ್ನು ತೆಗೆದುಕೊಳ್ಳುವುದರ ಮುಖಾಂತರ ಈ ವರ್ಷ ಜೀವ ಹಾನಿಯಾಗಲು ಅವಕಾಶವಾಗಲಿಲ್ಲ. ಅದೇ ರೀತಿ ಈ ವರ್ಷ ಅನಾಹುತವಾಗುವಂತಹ ವಿಚಾರದಲ್ಲಿ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ; ಪ್ರವಾಹದಿಂದ ಆದಂತಹ ಬೆಳೆ ನಾಶಕ್ಕೆ ನಾವು ಹಣವನ್ನು ಬಿಡುಗಡೆ ಮಾಡಬೇಕು ಹಾಗೂ ಅದರ ಜೊತೆಗೆ ಪುನರ್ವಸತಿಯನ್ನು ಕಲ್ಪಿಸಿಕೊಡಬೇಕು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪುನರ್ವಸತಿ ಬಗ್ಗೆ ಕೂಡ ಸುದೀರ್ಘವಾಗಿ ಚರ್ಚೆಯನ್ನು ಮಾಡಿದ್ದಾರೆ. ನಮ್ಮ ಸರ್ಕಾರ ಬಂದ ನಂತರ ಈಗಾಗಲೇ ಪುನರ್ವಸತಿಗೆ ಹಣವನ್ನು ಬಿಡುಗಡೆ ಮಾಡಿ ಅದಕ್ಕೆ ಚಾಲನೆಯನ್ನು ಕೊಟ್ಟಿದ್ದೇವೆ. ಅದಕ್ಕೆ ಬೇಕಾದಂತಹ ಭೂಮಿಯನ್ನು ಖರೀದಿ ಮಾಡುವಂತಹ ವಿಚಾರದಲ್ಲಿ ಜಿಲ್ಲಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಅದಕ್ಕೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ನಾವು ಸರ್ಕಾರದ ಮುಖಾಂತರ ಪ್ರವಾಹದ ಕೆಲಸಗಳಿಗೆ ಎಲ್ಲಾ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸುವುದರ ವಿಚಾರದಲ್ಲಿ ಯಾವುದೇ ರೀತಿಯ ನಿರ್ಲಕ್ಷ ಭಾವನೆಯನ್ನು ತೋರಲಿಲ್ಲವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ನಾನು ನೇರವಾಗಿ ಹಲವಾರು ಗ್ರಾಮಗಳಿಗೆ ಭೇಟಿಯನ್ನು ಕೊಟ್ಟಿದ್ದೇನೆ. ಕೆಲವು ಹಳ್ಳಿಯಲ್ಲಿ ನಾನೇನು ವಾಸ್ತವ್ಯವನ್ನು ಹೂಡಿದ್ದೆ, ಆ ಹಳ್ಳಿಗಳ ಸಮಸ್ಯೆಗಳಿಗೆ ಸ್ಥಳದಲ್ಲೇ ಸ್ಪಂದಿಸುವಂತಹ ರೀತಿಯಲ್ಲಿ ಕೆಲವು ತೀರ್ಮಾನಗಳನ್ನು ಮಾಡಿದ್ದೇನೆ. ಇವತ್ತು ಪ್ರವಾಹಕ್ಕೆ ಸಂಬಂಧಪಟ್ಟ ಹಾಗೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರಾಗಿರುವವರು, ಹೋದ ವರ್ಷ ಏನು ಹಣವನ್ನು ಬಿಡುಗಡೆ ಮಾಡಿದರು, ಆ ವಿಷಯವನ್ನು ಸುಧೀರ್ಘವಾಗಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಹೋದ ವರ್ಷ ಅವರು ಹಣವನ್ನು ಬಿಡುಗಡೆ ಮಾಡಿದಂತಹ ಸಂದರ್ಭದಲ್ಲಿ ಅಲ್ಲಿ ಪ್ರವಾಹಕ್ಕೆ ಒಳಗಾಗಿದ್ದಂತಹ ಜನರಿಗೆ ಶಾಶ್ವತವಾದಂತಹ ಕೆಲಸವನ್ನು ಮಾಡಬೇಕಾಗಿದ್ದು, ಯಾವುದೇ ರೀತಿಯ

ಕೆಲಸಗಳು ಸಂಪೂರ್ಣವಾಗಿ ಆಗುವಂತಹ ತೀರ್ಮಾನಗಳು ಆಗಿರಲಿಲ್ಲ. ಹೋದ ವರ್ಷದ ಪ್ರವಾಹದ ಸಂದರ್ಭದಲ್ಲಿ ನೋವಿಗೆ ಒಳಗಾದಂತಹ ಜನರಿಗೆ ಅನುಕೂಲಕ್ಕಾಗಿ ಏನು ಗಂಜಿಕೇಂದ್ರಗಳನ್ನು ತೆರಿದಿದ್ದರು ಹಾಗೂ ವಾಸಕ್ಕೆ Zinc Sheetಗಳಲ್ಲಿ ಮನೆಗಳನ್ನು ಏನು ಕಟ್ಟಿದ್ದರು ಅಷ್ಟಕ್ಕೇ ಆ ಕೆಲಸ ನಿಂತಿದೆ. ಅದಕ್ಕಿಂತ ಹೆಚ್ಚಿನ ಕೆಲಸಗಳಾಗುವುದಕ್ಕೆ ಯಾವುದೇ ತೀರ್ಮಾನಗಳಾಗಿರಲಿಲ್ಲ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನಾನು ಬೆಳಗಾವಿ ಜಿಲ್ಲೆಯಲ್ಲಿ, ಬಾಗಲಕೋಟೆ, ಬಿಜಾಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಹಳ್ಳಿಗಳ ಪುನರ್ವಸತಿಗೆ ಇವತ್ತು ಹಣವನ್ನು ಬಿಡುಗಡೆ ಮಾಡಿ ಶಾಶ್ವತವಾದಂತಹ ವ್ಯವಸ್ಥೆಯನ್ನು ಮಾಡುವುದಕ್ಕೆ ತೀರ್ಮಾನವನ್ನು ಮಾಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಾನು ಕೆಲವು ಪುನರ್ವಸತಿ ಕಲ್ಪಿಸುವುದಕ್ಕೆ ಹಳ್ಳಿಗಳ ಕೇಂದ್ರಗಳನ್ನು ಏನು ಪ್ರಾರಂಭ ಮಾಡಿದ್ದರು. ಆ ಎಲ್ಲಾ ಕೇಂದ್ರಗಳಿಗೂ ಭೇಟಿ ಕೊಟ್ಟಿದ್ದೇನೆ. ಆ ಕೇಂದ್ರಗಳಲ್ಲಿರುವ ಜನರ ಸಮಸ್ಯೆಗಳನ್ನೂ ಕೂಡ ಆಲಿಸಿದ್ದೇನೆ. ಕೆಲವರು ಗಂಜಿ ಕೇಂದ್ರಗಳನ್ನು ತೆರೆಯಲಿಲ್ಲವೆನ್ನುವಂತಹ ಮಾತನ್ನು ಹೇಳಿದರು. ಆದರೆ ಎಷ್ಟೋ ಕಡೆ ಗಂಜಿ ಕೇಂದ್ರಗಳನ್ನು ನಾವು ಪ್ರಾರಂಭ ಮಾಡಿದನಂತರ ಅನಾಹುತದಲ್ಲಿ ಸಿಲುಕಿರುವವರು ಆ ಗಂಜಿ ಕೇಂದ್ರಕ್ಕೆ ಬಂದಿರುವುದು ಕಡಿಮೆ. ಅಲ್ಲಿಗೆ ನಾವೇ ಕರೆದುಕೊಂಡು ಬರಬೇಕಾದಂತಹ ಸನ್ನಿವೇಶವನ್ನು ನಾವು ನೋಡಿದ್ದೇವೆ. ಆ ಗಂಜಿ ಕೇಂದ್ರಗಳಿಗೆ ಜನ ಬರಲಿಲ್ಲ. ಇನ್ನು ಮೇವಿನ ವಿಷಯದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ, ಈಗಾಗಲೇ ಸುಮಾರು ಎಂಟು ಜಿಲ್ಲೆಗಳಲ್ಲಿ ಏಳು ವಾರಗಳಿಗೆ ಬೇಕಾಗುವಷ್ಟು ಮೇವನ್ನು ಇವತ್ತು ಸಂಗ್ರಹ ಮಾಡಿಟ್ಟಿದ್ದೇವೆ. ಇನ್ನು 20 ಜಿಲ್ಲೆಗಳಲ್ಲಿ 20 ವಾರಗಳಿಗೆ ಮೇವಿನ ಅವಶ್ಯಕತೆ, ಅನಾವೃಷ್ಟಿಯಿಂದ ನಿರ್ಮಾಣವಾಗಿದೆ. ಅದಕ್ಕೂ ಕೂಡ ನಾವು ಸಂಪರ್ಣವಾಗಿ ಗಮನ ಕೊಟ್ಟು ಸಂಗ್ರಹವನ್ನು ಮಾಡಿಟ್ಟಿದ್ದೇವೆ. ಅದರ ಜೊತೆಗೆ ಎಂಟು ಗೋಶಾಲೆಗಳನ್ನು ಇವತ್ತು ಪ್ರಾರಂಭ ಮಾಡಿದ್ದೇವೆಂದು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇವತ್ತು ನಮ್ಮ ಸರ್ಕಾರ ಹಣವನ್ನು ಸರಿಯಾಗಿ ಉಪಯೋಗ ಮಾಡುತ್ತಿಲ್ಲವೆಂದು ಹೇಳಿದ್ದಾರೆ. 158 ಕೋಟಿ ರೂಪಾಯಿ ಹಣ ಕೇಂದ್ರ ಸರ್ಕಾರದಿಂದ ಬಂದಿದ್ದು ಅದರ ಉಪಯೋಗ ಮಾಡಲಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ, ಆ 158 ಕೋಟಿ ರೂಪಾಯಿ ಹಣವನ್ನು ತಮ್ಮ ಆದೇಶ ಬರುವವರೆಗೆ ಉಪಯೋಗ ಮಾಡಬಾರದೆಂದು ಕೇಂದ್ರದವರು ನಮ್ಮ ಗಮನಕ್ಕೆ ತಂದಿದ್ದರು. ಮಾನ್ಯ ಸದಸ್ಯರು ಏನು ಆ 158 ಕೋಟಿ ರೂಪಾಯಿಗಳನ್ನು ಉಪಯೋಗ ಮಾಡಿಲ್ಲವೆಂದು ದೋಷವನ್ನು ಹೇಳುತ್ತಿದ್ದಾರೆ, ಅದು ಅವರು ಹೇಳಿದಂತಹ ಕಾರಣದಿಂದ ಉಪಯೋಗ ಮಾಡಲಿಲ್ಲ. 'Accordingly, the Ministry of Finance vide their sanction letter No. F 2334 FCD/2516 dated 21st June 2006 had refunded the recovered amount of Rs. 158.15 crore to your State.' ಇದನ್ನು ಹೇಳಿ ಈ ಹಣವನ್ನು ಉಪಯೋಗ ಮಾಡುವಂಥಹ ವಿಚಾರದಲ್ಲಿ ತಮ್ಮ ಮುಂದಿನ ಆದೇಶ ಬರುವವರೆಗೂ ಮಾಡಬಾರದೆಂದು ನಮಗೆ ಇಲ್ಲಿ ತಿಳಿಸಿದ್ದಾರೆ. ಇದರ ಬಗ್ಗೆ ಕಳೆದವಾರ

ಒಂದು ಸಭೆಯನ್ನು ಕರೆದು ಒಂದು ತೀರ್ಮಾನವನ್ನು ಮಾಡುತ್ತಿದ್ದೇವೆ ಎಂದು ಇತ್ತೀಚೆಗೆ ನಮ್ಮ ಗಮನಕ್ಕೆ ತಂದಿದ್ದಾರೆ. ಆ ದೃಷ್ಟಿಯಿಂದ ಆ ಹಣವನ್ನು ಉಪಯೋಗ ಮಾಡುವುದಕ್ಕೆ ಸಾಧ್ಯವಾಗಿಲ್ಲ. ನಾನು ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ, ಈ ರೀತಿ ಬಂದಂತಹ ಪ್ರವಾಹ ಮತ್ತು ಬರಗಾಲದ ಹಿನ್ನೆಲೆಯಲ್ಲಿ ಹಿಂದಿನ ಸರ್ಕಾರ ಮಾಡಿರುವಂತಾದ್ದು ಮತ್ತು ನಾವು ಮಾಡಿರುವಂತಾದ್ದು ಏನೆಂಬುದನ್ನು ನಾನು ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. 2002–03ನೇ ಸಾಲಿನಲ್ಲಿ ಬರಗಾಲದ ಸಂದರ್ಭದಲ್ಲಿ 192 ಕೋಟಿ ರೂಪಾಯಿ ಹಣವನ್ನು ವಿನಿಯೋಗ ಮಾಡಿದ್ದಾರೆ. 2003–04 ರಲ್ಲಿ 414ಕೋಟಿ 71 ಲಕ್ಷ ರೂಪಾಯಿಗಳನ್ನು ವಿನಿಯೋಗ ಮಾಡಿದ್ದು 2004–05 ರಲ್ಲಿ 228 ಕೋಟಿ 38 ಲಕ್ಷ ರೂಪಾಯಿಗಳನ್ನು ಉಪಯೋಗ ಮಾಡಿದ್ದಾರೆ. 2005–06 ರಲ್ಲಿ 594.46 ಕೋಟಿ ರೂಪಾಯಿ ಹಣವನ್ನು ಉಪಯೋಗ ಮಾಡಿದ್ದಾರೆ. ಈ ಅವಧಿಯಲ್ಲಿ 2006–07 ರಲ್ಲಿ ಅಂದರೆ ನಾವಿನ್ನೂ ಸೆಪ್ಟೆಂಬರ್ ತಿಂಗಳಿನಲ್ಲಿದ್ದೇವೆ, ಇದಕ್ಕೆ ನಾವು ಸುಮಾರು 234.44 ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ನಮಗೆ ಸಿಆರ್‌ಎಫ್ ಮತ್ತು ಎನ್‌ಇಎಫ್ ನಲ್ಲಿ AVAILABILITY ಇರುವಂತಾದ್ದು 370 ಕೋಟಿ ರೂಪಾಯಿ ಹಣ ಏನಿದೆ, ಅದರಲ್ಲಿ ನಾವೀಗಾಗಲೇ 234.44 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇವತ್ತು ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಐದು ಜಿಲ್ಲೆಗಳಿಗೆ ಹಣವನ್ನು ಬಿಡುಗಡೆ ಮಾಡಲಿಲ್ಲವೆಂದು ಹೇಳಿದ್ದಾರೆ, ಅದಕ್ಕೆ ಆ ಜಿಲ್ಲೆಗಳಿಗೆ ಈಗಾಗಲೇ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಈ ಯೋಜನೆಯಲ್ಲಿ ಹಣದ ಕೊರತೆ ಇಲ್ಲ. ಇನ್ನು ಕಾಮಗಾರಿ ಪ್ರಾರಂಭ ಮಾಡುವುದಕ್ಕೆ ಹೊಸದಾಗಿ ಟಾಸ್ಕ್‌ಫೋರ್ಸ್ ಏನು ರಚನೆಯಾಗಿಲ್ಲ ಅದರ ಬಗ್ಗೆ ಗಮನ ಕೊಡುವುದಕ್ಕೆ ಈಗಾಗಲೇ ಅಧಿಕಾರಿಗಳಿಗೆ ಹೇಳಿದ್ದೇವೆ. ಕಳೆದ ಎಂಟು ಹತ್ತು ದಿವಸಗಳ ಹಿಂದೆ ಜಿಲ್ಲಾಧಿಕಾರಿಗಳ ಸಭೆ ಕರೆದು ಅನಾವೃಷ್ಟಿ ಹಾಗೂ ಪ್ರವಾಹದ ಹಿನ್ನೆಲೆ ಇರುವಂತಹ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿ, ಮಾನ್ಯ ಎಂ.ಪಿ. ಪ್ರಕಾಶ್ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ಈ ಕಾಮಗಾರಿಗಳನ್ನು ರಿವ್ಯೂ ಮಾಡುವಂತಹ ಕೆಲಸವನ್ನು ಕೂಡ ಕಂದಾಯ ಸಚಿವರ ಜೊತೆಗೂಡಿ ಗಮನ ಹರಿಸಿದ್ದಾರೆ. ನಮ್ಮ ಸರ್ಕಾರ ನಿರ್ಲಕ್ಷದಿಂದ ಕೆಲಸವನ್ನು ಮಾಡುತ್ತಿಲ್ಲ ಎಂಬ ವಾದ ಸರಿಯಿಲ್ಲ ಎಂಬ ವಿಚಾರವನ್ನು ಈ ಸಂದರ್ಭದಲ್ಲಿ ಎಲ್ಲರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಆಗಸ್ಟ್ ತಿಂಗಳಿನಲ್ಲಿ ಬರಗಾಲ ಹಾಗೂ ಅನಾವೃಷ್ಟಿಯಿಂದ ತೊಂದರೆಗೊಳಗಾದಂತಹ ತಾಲ್ಲೂಕುಗಳ ವರದಿಯನ್ನು ಕೊಟ್ಟಿದ್ದಾರೆ. ಅದಕ್ಕೆ ಹೋದ ತಿಂಗಳು ನಾವು ಹಣವನ್ನು ಬಿಡುಗಡೆ ಮಾಡುವುದಕ್ಕೆ ಸೂಚನೆಯನ್ನು ಕೊಟ್ಟಿದ್ದೇವೆ ಹಾಗೂ ಬೇಕಾದಂತಹ ಹಣವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ್ದೇವೆ. ಹಾಗೂ ಈ ಕಾಮಗಾರಿಗಳನ್ನು ಸಧ್ಯದಲ್ಲಿ ಪ್ರಾರಂಭ ಮಾಡುವುದಕ್ಕೆ ಯಾವುದೇ ತೊಂದರೆಗಳು ಇಲ್ಲ. ಪ್ರವಾಹ ಮತ್ತು ಅನಾವೃಷ್ಟಿಗೆ ಸಂಬಂಧಪಟ್ಟಂತಹ ಕಾಮಗಾರಿಗಳನ್ನು ಮಾಡಬೇಕಾದರೆ, ಕೆಲವರಿಗೆ ಒಂದು ರೀತಿಯ ಸುಗ್ಗಿ, ಪ್ರವಾಹ ಬಂದಂತಹ ಸಂದರ್ಭದಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾದರೆ, ಅದಕ್ಕೆ

ಕೊಟ್ಟಿರುವಂತಹ ಹಣ ಎಷ್ಟರ ಮಟ್ಟಿಗೆ ಉಪಯೋಗವಾಗುತ್ತದೆಂದು ಕೂಡ ಗಮನ ಹರಿಸಬೇಕಾದಂತಹ ಅಗತ್ಯವಿದೆ. ಕಳೆದ ವರ್ಷದಲ್ಲಿ ಕೂಡ ಕಾಮಗಾರಿಗಳನ್ನು ಮಾಡಬೇಕಾದರೆ ಹಲವು ನ್ಯೂನ್ಯತೆಗಳೇನಿವೆ, ಅದನ್ನು ಸರಿಪಡಿಸುವಂತಹ ದೃಷ್ಟಿಯಿಂದ ನಾವು ಜಿಲ್ಲಾಧಿಕಾರಿಗಳಲ್ಲಿ ಹಣ ಇದ್ದರೂ ಕೂಡ ಕೆಲಸ ಪ್ರಾರಂಭ ಮಾಡಬೇಕಾದರೆ ಆ ಹಣ ಸರಿಯಾದ ರೀತಿಯಲ್ಲಿ ಉಪಯೋಗವಾಗಬೇಕೆನ್ನುವ ದೃಷ್ಟಿಯಿಂದ ಕೆಲವು ತೀರ್ಮಾನಗಳನ್ನು ಮಾಡುವಂತಹ ಸಂದರ್ಭದಲ್ಲಿ ಕಾಮಗಾರಿಗಳನ್ನು ಪ್ರಾರಂಭ ಮಾಡಲಿಲ್ಲವೆನ್ನುವ ಭಾವನೆ ಏನಿದೆ, ಅದಕ್ಕೆ ಕಾರಣ ಆ ಒಂದು ದೃಷ್ಟಿಯಿಂದ ಎಂದು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ದೇಶಪಾಂಡೆಯವರು ನಿನ್ನೆ ಮಾತನಾಡುವಂತಹ ಸಂದರ್ಭದಲ್ಲಿ ಹಾಗೂ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಕಡೆಯ ಮಾನ್ಯ ಸದಸ್ಯರುಗಳು ತಮ್ಮ ಜಿಲ್ಲೆಗಳಿಗೆ ಹಣ ಬಂದಿಲ್ಲವೆಂಬ ಮಾತುಗಳನ್ನಾಡಿದರು; ನಾವು ಎಲ್ಲಾ ಜಿಲ್ಲೆಗಳಿಗೂ ಹಣವನ್ನು ಬಿಡುಗಡೆ ಮಾಡಿದ್ದೇವೆ. ಉದಾಹರಣೆಗೆ ಮಂಗಳೂರಿಗೆ 12 ಕೋಟಿ ರೂಪಾಯಿಗಳ ಹಣಕ್ಕೆ ಜಿಲ್ಲಾಧಿಕಾರಿಗಳು ಪ್ರಸ್ತಾವನೆಯನ್ನು ಸಲ್ಲಿಸಿದ್ದರು, ಅದಕ್ಕೆ ಸುಮಾರು 7 ಕೋಟಿ ರೂಪಾಯಿ ಹಣವನ್ನು ಮಂಗಳೂರಿಗೆ ಬಿಡುಗಡೆ ಮಾಡಿದ್ದೇವೆ ಎಂದು ಸದನದ ಗಮನಕ್ಕೆ ತರವುದಕ್ಕೆ ಬಯಸುತ್ತೇನೆ. ಇವತ್ತು ಪ್ರತಿಯೊಂದು ಜಿಲ್ಲೆಗಳಿಗೆ ಭೇಟಿ ಕೊಟ್ಟಾಗ, ಅದರಲ್ಲೂ ಪ್ರವಾಹ ಪೀಡಿತ ಜಿಲ್ಲೆಗಳಿಗೆ ಭೇಟಿ ಕೊಟ್ಟಾಗ, ನಾನು ಜಿಲ್ಲಾಧಿಕಾರಿಗಳು ಮತ್ತು ಆ ಭಾಗದ ಇನ್‌ಚಾರ್ಜ್ ಸೆಕ್ರೆಟರೀಸ್ ಜೊತೆ ಸಭೆಗಳನ್ನು ಮಾಡಿದ್ದೇನೆ. ಹಣದ ವಿಷಯದಲ್ಲಿ ಯಾವುದೇ ಕೊರತೆಗಳನ್ನು ತಂದಿರಲಿಲ್ಲ. ಜಿಲ್ಲಾಧಿಕಾರಿಗಳಿಗೆ ಮೊದಲೇ ಹಣವನ್ನು ಕೊಡುವಂಥಹ ತೀರ್ಮಾನವನ್ನು ಕೊಟ್ಟಿದ್ದೇವೆ. ಹಣವನ್ನು ಉಪಯೋಗ ಮಾಡಬೇಕಾದರೆ ಅವರು ಹಣ ದುರುಪಯೋಗವಾಗದೇ ಇರುವಂಥ ಒಂದು ನಿರ್ಧಾರವನ್ನು ಮಾಡುವ ಮುಖಾಂತರ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದೇವೆ. ಕೇಂದ್ರ ಸರ್ಕಾರದಿಂದ ಒಂದು ನಿಯೋಗ ಇಲ್ಲಿಗೆ ಬಂತು, ಇಲ್ಲಿಯ ವರದಿಯನ್ನು ಕೊಡಲು ಬಂದಂಥ ನಿಯೋಗದ ಅಧಿಕಾರಿಗಳು ಇದರ ಬಗ್ಗೆ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಪ್ರವಾಹಕ್ಕೆ ಒಳಗಾದಂತಹ ಈ ಒಂದು ಸನ್ನಿವೇಶದಲ್ಲಿ ಅಧಿಕಾರಿಗಳ ಕೆಲಸದ ಬಗ್ಗೆ ಪ್ರಶಂಸೆಯನ್ನು ಮಾಡಿದ್ದಾರೆ. ಇವತ್ತು ಪ್ರತಿಯೊಂದು ಜಿಲ್ಲೆಗೆ ಏನು ಹಣವನ್ನು ಬಿಡುಗಡೆ ಮಾಡಿದ್ದೇವೆ, ಈ 231 ಕೋಟಿ ರೂಪಾಯಿಗಳ ಬಿಡುಗಡೆ ಮಾಡಿರುವ ಸಂಪೂರ್ಣ ಮಾಹಿತಿ ಇದೆ, ಅದರ ಸಂಪೂರ್ಣ ಜಿಲ್ಲಾವಾರು ಮಾಹಿತಿಯನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಸರ್ಕಾರ ಸರಿಯಾಗಿ ಸ್ಪಂದಿಸಿಲ್ಲವೆಂಬ ಮಾತನ್ನು ಏನು ಹೇಳಿದ್ದಾರೆ ಇದರಲ್ಲಿ ಕೇಂದ್ರ ಸರ್ಕಾರದ ಕೆಲವೊಂದು guidelines ಏನು ಇತ್ತು ಆ guidelines ಅನ್ನು implement ಮಾಡತಕ್ಕಂಥ ಸಂದರ್ಭದಲ್ಲಿ ಈ ಕಾಮಗಾರಿಗಳನ್ನು ತ್ವರಿತ ಗತಿಯಲ್ಲಿ ಮಾಡುವುದಕ್ಕೆ ಸ್ವಲ್ಪ ಹಿನ್ನಡೆ ಆಗಿದೆ, ಆ guidelines ಗಳನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರುವುದರ ಕಡೆಗೆ ಅಧಿಕಾರಿಗಳು ಗಮನವನ್ನು ಕೊಟ್ಟಿದ್ದಾರೆ.

ಇವತ್ತು ಬಿಡುಗಡೆಯಾಗಿರುವಂಥ 74 ಕೋಟಿ ರೂಪಾಯಿಗಳಲ್ಲಿ 53 ಕೋಟಿ ರೂಪಾಯಿಗಳನ್ನು ಈಗಾಗಲೇ ಉಪಯೋಗ ಮಾಡಿದ್ದೇವೆ. ಚಿತ್ರದುರ್ಗ ಜಿಲ್ಲೆಗೆ ನಿನ್ನೆ 50 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಈ ಒಂದು ಯೋಜನೆಗೆ ಪುನ: ಹಣವನ್ನು ಬಿಡುಗಡೆ ಮಾಡಿದ್ದಾರೆಂದು ನಾನು ಹೇಳಬಯಸುತ್ತೇನೆ. ಈ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಬ್ಯಾಂಕ್‌ಗಳಲ್ಲಿ ಕೂಲಿಕಾರರ ಹೆಸರನ್ನು ನೋಂದಾಯಿಸಬೇಕಾಗಿತ್ತು. ಈ ವಿಷಯದಲ್ಲಿ ಕೆಲಸವನ್ನು ಮಾಡುವಂಥದಕ್ಕೆ ಕೆಲವೊಂದು ತೊಂದರೆಗಳು ಏನು ಆಗಿತ್ತು, ಈ ನೊಂದಾವಣಿ ಮಾಡುವಂಥದ್ದಕ್ಕೆ ಸಂಪೂರ್ಣವಾಗಿ ಕ್ರಮವನ್ನು ತೆಗೆದುಕೊಳ್ಳುವ ಮುಖಾಂತರ ಕೆಲಸಗಳು ಪ್ರಾರಂಭವಾಗಿದೆ. ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ಕೇವಲ 25 ರೂಪಾಯಿ ಮತ್ತು 45 ರೂಪಾಯಿಗಳ ದಿನಗೂಲಿಯನ್ನು ಕೊಡುವಂಥ ಒಂದು ವ್ಯವಸ್ಥೆ ಇತ್ತು. ಈ ಒಂದು ಕಾರ್ಯಕ್ರಮದ ಅಡಿಯಲ್ಲಿ ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ಒಂದು ವಾರ, ಹತ್ತು ದಿವಸಗಳಲ್ಲಿಯೇ ಕೆಲಸ ಒಳ್ಳೆಯ ರೀತಿಯಲ್ಲಿ ಪ್ರಾರಂಭವಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಈಗ SGRY ಅಡಿಯಲ್ಲಿ ನಮ್ಮ ಸರ್ಕಾರ ಬಂದ ನಂತರ ಕಳೆದ ಸರ್ಕಾರ ಆಗಸ್ಟ್ ತಿಂಗಳವರೆಗೆ 62 ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡಿದ್ದರು. ನಮ್ಮ ಸರ್ಕಾರ 80 ಕೋಟಿ ರೂಪಾಯಿಗಳನ್ನು ಈ ಒಂದು ಅವಧಿಯಲ್ಲಿ ಈ ಒಂದು ಕಾಮಗಾರಿಗಳಿಗೆ ಉಪಯೋಗ ಮಾಡಿರತಕ್ಕಂಥದ್ದನ್ನೂ ಈ ಸದನದ ಗಮನಕ್ಕೆ ತರಲಿಚ್ಛಿಸುತ್ತೇನೆ. ಅದೇ ರೀತಿಯಲ್ಲಿ ನೀರಾವರಿ ವಿಷಯದಲ್ಲಿರಬಹುದು ಹಾಗೂ ಡಾ. ನಂಜುಂಡಪ್ಪನವರ ವರದಿ ಆಧಾರದ ಮೇಲೆ ಇವತ್ತು ಅಭಿವೃದ್ಧಿಯ ಬಗ್ಗೆ ಸದನದಲ್ಲಿಸಸಸಸಸಸ ಸದಸ್ಯರು ಮಾತನಾಡಿದ್ದಾರೆ. ಈ ಭಾಗದಲ್ಲಿ ನಗರ ಪ್ರದೇಶಗಳಲ್ಲಿ Housing Board ಯೋಜನೆಯೆಂದು ತಯಾರು ಮಾಡಿದ್ದೇವೆ. ಇವತ್ತು ಕಡಿಮೆ ವೆಚ್ಚದಲ್ಲಿ ಉತ್ತರ ಕರ್ನಾಟಕ ಭಾಗದ ನಗರ ಪ್ರದೇಶಗಳಲ್ಲಿ ಒಂದು ವಿಶೇಷವಾದ ಯೋಜನೆಯನ್ನು ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ ಹೊಸದಾಗಿ ಮನೆಗಳನ್ನು ಕಟ್ಟುವಂಥ ಕಾರ್ಯಕ್ರಮವನ್ನು ಈಗಾಗಲೇ Housing Board ನಿಂದ ನಿರೂಪಿಸುತ್ತಿದ್ದೇವೆ. ಇವತ್ತು ವಿಧಾನಸಭೆಯ ಕಾರ್ಯಕಲಾಪವನ್ನು ಇಲ್ಲಿ ಏನು ನಡೆಸುತ್ತಿದ್ದೇವೆ ಮುಂದಿನ ದಿವಸಗಳಲ್ಲಿ ವಿಧಾನ ಸಭೆಯ ಕಲಾಪಗಳಿಗೆ ಸಂಪೂರ್ಣವಾದ ಸೌಲಭ್ಯಗಳನ್ನು ಕಲ್ಪಿಸುವಂಥದ್ದಕ್ಕೂ ನಾವು ಇವತ್ತು ತೀರ್ಮಾನವನ್ನು ಮಾಡುತ್ತಿದ್ದೇವೆ. ಇವತ್ತು ಕೆಲವು ಕಾಮಗಾರಿಗಳಿಗೆ 100 ಕೋಟಿ ರೂ. 200 ಕೋಟಿ ರೂಪಾಯಿಗಳೆಂದು ಇವರಿಗೆ ಇಷ್ಟ ಬಂದಹಾಗೆ announce ಮಾಡಿಕೊಂಡು ಹೋಗುತ್ತಿದ್ದಾರೆ ಎಂಬ ಮಾತನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆ ಯವರು ಬೆಳಿಗ್ಗೆ ಹೇಳಿದ್ದಾರೆ. ನಾನು ಯಾವುದೇ ಕಾಮಗಾರಿಗೆ ಶಂಕು ಸ್ಥಾಪನೆಯನ್ನು ಮಾಡಬೇಕಾದರೆ 1/3rd Grant ಹಣವನ್ನು ಇಡದೇ ನಾನು ಯಾವ ಕಾಮಗಾರಿಗಳಿಗೂ ಚಾಲನೆಯನ್ನು ಕೊಟ್ಟಿಲ್ಲ ಎನ್ನುವ ವಿಚಾರವನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಇನ್ನು packageಗಳ ವಿಷಯದಲ್ಲಿ ನನಗೆ ನಂಬಿಕೆಯಿಲ್ಲ. ಏಕೆಂದರೆ ಈಗಾಗಲೇ ಹಲವಾರು ರೀತಿಯ

package ಗಳನ್ನು ಘೋಷಣೆ ಮಾಡಿದರು. ಇವತ್ತು ನಿಮ್ಮ ಜಿಲ್ಲೆಯಲ್ಲೇ ಕೆಲವೊಂದು ಶಾಸಕರು ನಿಮ್ಮ ಗಮನಕ್ಕೆ ತಂದಿರಬಹುದು. ಕಳೆದ ಸರ್ಕಾರ ಹಿಂದೆ 300 ಕೋಟಿ ರೂಪಾಯಿಗಳ package ಅನ್ನು announce ಮಾಡಿದರು. ಇವತ್ತು ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹೇಳಿರುವಂಥದ್ದು ನೆನಪಿಸಕೊಳ್ಳಬಯಸುತ್ತೇನೆ. ಇವತ್ತು ಸರ್ಕಾರ ಎಲ್ಲಾ ರೀತಿಯ ಯೋಜನೆಗಳನ್ನು ಘೋಷಣೆ ಮಾಡಿ, ಮುಂದೆ ಬರುವಂಥ ಸರ್ಕಾರಗಳನ್ನು ಇಕ್ಕಟ್ಟಿಗೆ ಸಿಕ್ಕಿಸುವಂಥ ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದಾರೆ ಎಂದು ಪ್ರಸ್ತಾಪ ಮಾಡಿದರು. ನಾನು ಮುಂದೆ ಬರುವಂಥ ಸರ್ಕಾರಗಳಿಗೆ ನಮ್ಮ ಘೋಷಣೆಯಿಂದ ಯಾವುದೇ ರೀತಿಯ ಇಕ್ಕಟ್ಟು ಬರುವುದಕ್ಕೆ ಅವಕಾಶ ಕೊಡುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಮಂಡ್ಯ ಜಿಲ್ಲೆಯಲ್ಲಿ 300 ಕೋಟಿ ರೂಪಾಯಿಗಳ ಘೋಷಣೆಯನ್ನು ಏನು ಮಾಡಿದರು, ಅಲ್ಲಿ ಹಣವನ್ನು ಕೊಡುವುದಕ್ಕೆ ಯಾವ ರೀತಿ ಸಾಧ್ಯವಾಯಿತು ಅಲ್ಲಿ ಯಾವ ರೀತಿ ತೊಂದರೆಗಳನ್ನು ನೀವು ಅನುಭವಿಸುತ್ತಿದ್ದೀರಿ, ಎಂಬುದು ಎಲ್ಲರಿಗೂ ಗೊತ್ತಿದೆ. ಅಧ್ಯಕ್ಷರೆ, ನಿಮ್ಮ ಕ್ಷೇತ್ರದಲ್ಲೂ ಇವತ್ತು ಜನಗಳ ಒಂದು ಪ್ರಶ್ನೆಯನ್ನು ನೀವು ಎದುರಿಸುತ್ತಿದ್ದೀರಿ ಎಂಬುದು ನನ್ನ ಗಮನಕ್ಕೆ ಬಂದಿದೆ. ಅದೇ ರೀತಿಯಲ್ಲಿ ಬಾಗಲಕೋಟೆ package ಈ packageನ ಹಣೆಬರಹವೇನಾಗಿದೆ? ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ಗುಲ್ಬರ್ಗಗೆ 500 ಕೋಟಿ ರೂಪಾಯಿಗಳ package ಅನ್ನು ಘೋಷಣೆ ಮಾಡಿದರು. ಈ package ಗಳನ್ನು ಘೋಷಣೆ ಮಾಡುವುದರಿಂದ ಏನು ತೊಂದರೆಗಳಾಗುತ್ತದೆ ಎನ್ನುವಂಥದ್ದು ನನ್ನ ಗಮನಕ್ಕೆ ಬಂದಿದೆ. ಹಿಂದಿನ ಸರ್ಕಾರದ ಅನುಭವಗಳು ಏನು ಇವೆ, ಆ ಅನುಭವಗಳಿಂದ ಆ ರೀತಿಯ ವಿಷಯಗಳಲ್ಲಿ ದುಡುಕಿ ನಾನು ಯಾವುದೇ ರೀತಿಯ ಆತುರದ ನಿರ್ಧಾರಗಳನ್ನು ಮಾಡುತ್ತಿಲ್ಲ. ನಾನು ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದಾಗ ಆ ಕಾರ್ಯಕ್ರಮಗಳಿಗೆ ತಕ್ಷಣ ಸರ್ಕಾರದ ಮಂಜೂರಾತಿ ಮತ್ತು ಹಣಕಾಸು ಇಲಾಖೆಯಿಂದ ಮಂಜೂರಾತಿ ಆಗಬೇಕಾಗುತ್ತದೆ. ಅದನ್ನು ತೀರ್ಮಾನ ಮಾಡಿದ ನಂತರವೇ ಆ ಕಾರ್ಯಕ್ರಮಗಳನ್ನು ಮಾಡುವಂಥದ್ದಕ್ಕೆ ಗಮನ ಹರಿಸುತ್ತೇವೆ. ಇವತ್ತು ಉದಾಹರಣೆಗೆ ಸುವರ್ಣ ಕರ್ನಾಟಕ ವರ್ಷದ ಆಚರಣೆಯನ್ನು ಮಾಡುತ್ತಿದ್ದೇವೆ, ಇವತ್ತು 1000 ಗ್ರಾಮಗಳನ್ನು ಗ್ರಾಮೋದಯದ ಗ್ರಾಮದ ಅಡಿಯಲ್ಲಿ ತರಬೇಕೆಂದು ಹೊರಟಿದ್ದೇವೆ, ಅದಕ್ಕೆ 750 ಕೋಟಿ ರೂಪಾಯಿಗಳನ್ನು ಈ ವರ್ಷ ವಿನಿಯೋಗ ಮಾಡುವಂಥದ್ದಕ್ಕೂ ತೀರ್ಮಾನ ಮಾಡಿ ಆ ಹಣವನ್ನು ಕ್ರೋಢೀಕರಿಸಿದ್ದೇವೆ. ಯಾವುದೇ ರೀತಿಯ ಪ್ರಚಾರಕ್ಕೆ ನಾವು ಈ ಕಾರ್ಯಕ್ರಮಗಳನ್ನು ಘೋಷಣೆ ಮಾಡುತ್ತಿಲ್ಲ. ಯಾವುದೇ ಕಾರ್ಯಕ್ರಮವನ್ನು ಘೋಷಣೆ ಮಾಡಿದರೂ ಆ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವಂಥದ್ದಕ್ಕೆ ಬಯಸುತ್ತೇನೆ. ಇವತ್ತು ಹಲವಾರು ವಿಷಯಗಳ ಬಗ್ಗೆ ಚರ್ಚೆ ಮಾಡಿದರು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಶ್ರೀಮತಿ ಇಂದಿರಾ ಗಾಂಧಿಯವರ ಕಾಲದಲ್ಲಿ social welfare benefits ಗಳನ್ನು ಏನು ಕೊಟ್ಟರು, ಸಾಮಾಜಿಕ ನ್ಯಾಯವನ್ನು ತರುವಂಥದ್ದಕ್ಕೆ ಪ್ರಾಮಾಣಿಕವಾದಂಥ ಕಾರ್ಯಕ್ರಮಗಳನ್ನು

ಕೊಟ್ಟರು ಎಂದು ಹೇಳಿದರು. ಸರ್ಕಾರಗಳು ಹಲವಾರು ರೀತಿಯ ಕಾರ್ಯಕ್ರಮಗಳನ್ನು ಹಿಂದೆ ತಂದಿರತಕ್ಕಂಥ ಸಂದರ್ಭದಲ್ಲಿ ಇವತ್ತು ಅವರದೇ ಆದ ಕಾರ್ಯಕ್ರಮವನ್ನು ತಂದಿದ್ದಾರೆ. ನಾನು ಅದರ ಬಗ್ಗೆ ಸಣ್ಣತನದಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ನಾವು ಅಭಿವೃದ್ಧಿಯಾಗಲೇ ಇಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಈ 58 ವರ್ಷಗಳಲ್ಲಿ ಹಲವಾರು ಸರ್ಕಾರಗಳು ಮಾಡಿರತಕ್ಕಂಥ ಕಾರ್ಯಕ್ರಮಗಳು, ಜನತೆಯ ನಿರೀಕ್ಷೆಯಂತೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇದರ ಬಗ್ಗೆ ನಾವು ಯಾವ ರೀತಿ ಮುಂದುವರಿಯಬೇಕು, ಹಿಂದೆ ಆಗಿರುವಂಥ ಲೋಪದೋಷಗಳನ್ನು ಸರಿಪಡಿಸಿ ಯಾವ ರೀತಿಯ ಕಾರ್ಯಕ್ರಮಗಳನ್ನು ತರಬೇಕು ಎಂಬ ಬಗ್ಗೆ ಇವತ್ತು ಚಿಂತನೆಯನ್ನು ಮಾಡುತ್ತಿದ್ದೇವೆ. ಉದಾಹರಣೆಗೆ ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ ನಾನು ಹಳ್ಳಿಗಳಿಗೆ ಭೇಟಿ ಕೊಡುತ್ತಿದ್ದೇನೆ ನಾವು ಇವತ್ತು ಸಾಮಾಜಿಕ ನ್ಯಾಯವನ್ನು ಕೊಟ್ಟಿದ್ದೇವೆ ಎಂದು ಹೇಳುತ್ತೇವೆ. ಇವತ್ತು ಕೆಲವು ಹಳ್ಳಿಗೆ ಹೋದಾಗ ಶೇಕಡ 20–30 ಭಾಗ ಎರಡು ಹೊತ್ತಿನ ಊಟಕ್ಕೂ ಗತಿ ಇಲ್ಲದ ಜನಗಳ ಬವಣೆಯನ್ನು ನಾನು ನೋಡಿದ್ದೇನೆ. ಇವತ್ತು ಕೆಲವು ಹೆಣ್ಣು ಮಕ್ಕಳ ನೋವನ್ನು ನೋಡುತ್ತಿದ್ದೇನೆ. ಇವತ್ತು ಅವರು ಎರಡು ಹೊತ್ತಿನ ಊಟಕ್ಕೂ ಗತಿಯಿಲ್ಲದೆ ಗೌರವಯುತವಾಗಿ ಜೀವನವನ್ನು ನಡೆಸುವುದಕ್ಕೆ ತೊಂದರೆ ಅನುಭವಿಸುವಂಥ ಘಟನೆಗಳು ಏನು ಇದೆ ಇದೆಲ್ಲವನ್ನೂ ನಾನು ಗಮನಿಸಿಯೇ ಇವತ್ತು ಸಾಮಾಜಿಕ ನ್ಯಾಯವನ್ನು ಕೊಡುವಂಥ ಸಂದರ್ಭದಲ್ಲಿ ತಾವು ಎತ್ತಿರುವಂಥ ಲೋಪಗಳನ್ನೂ ಸಹ ಯೋಚನೆ ಮಾಡಬೇಕಾಗುತ್ತದೆ. ಇವತ್ತು ಸರ್ಕಾರ ಏನು ಮಾಡಿದೆ ಎಂದು ಹೇಳುತ್ತಾರೆ. ಇವತ್ತು Social Welfare Department ನಿಂದ ಕಳೆದ 50 ವರ್ಷಗಳಲ್ಲಿ, ಎರಡು ಲಕ್ಷ ಜನ ವಿದ್ಯಾರ್ಥಿಗಳಿಗೆ Hostel facilities ಗಳನ್ನು ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ತಂದರು. ಈ ಆರು ತಿಂಗಳಲ್ಲಿ ಸುಮಾರು 35,000 ಜನ ವಿದ್ಯಾರ್ಥಿಗಳಿಗೆ hostel facilities ಕೊಡುವಂಥದ್ದರ ಬಗ್ಗೆ ಈ ಒಂದು ಶೈಕ್ಷಣಿಕ ವರ್ಷದಲ್ಲೇ ನಾವು ತೀರ್ಮಾನ ಮಾಡಿದ್ದೇವೆ. ಈ ಒಂದು ಕಾರ್ಯಕ್ರಮವನ್ನು ಟೀಕೆ ಮಾಡತಕ್ಕಂಥವರು ಇದನ್ನು ಗಮನಿಸಬೇಕು ಎಂದು ಹೇಳ ಬಯಸುತ್ತೇನೆ. ಇನ್ನು ಅಭಿವೃದ್ಧಿ ಬಗ್ಗೆ ಅನಾವೃಷ್ಟಿ ಮತ್ತು ಪ್ರವಾಹ ವಿಕೋಪದ ಹಿನ್ನೆಲೆಯಲ್ಲಿ ಆಗಿರತಕ್ಕಂಥ ಹಳ್ಳಿಗಳ ಮತ್ತು ತಾಲ್ಲೂಕುಗಳ ವಿಷಯದಲ್ಲಿ ಯಾವುದೇ ರೀತಿಯ ಲೋಪದೋಷಕ್ಕೆ ಎಡೆಕೊಡದ ರೀತಿಯಲ್ಲಿ ಶಾಶ್ವತವಾದ ಕೆಲಸಗಳನ್ನು, ಪುನರ್ವಸತಿ ಸೌಕರ್ಯಗಳನ್ನು ಕಲ್ಪಿಸಬೇಕಾಗಿದೆ. ಇವತ್ತು ಹಿಪ್ಪರಗಿ ವಿಷಯದಲ್ಲಿ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಇವತ್ತು ಸದನದ ಗಮನಕ್ಕೆ ಏನು ತಂದಿದ್ದಾರೆ ಅದರ ಬಗ್ಗೆಯೂ ಕೆಲವೇ ದಿವಸಗಳಲ್ಲಿ ತೀರ್ಮಾನ ಮಾಡಿ ಈ ಭಾಗದ ಜನರು ಪುನರ್ವಸತಿ ಸೌಕರ್ಯಗಳಿಗೆ ಶಾಶ್ವತವಾದ ಪರಿಹಾರವನ್ನು ಕಲ್ಪಿಸಿಕೊಡುವುದಾಗಿ ಬೆಳಗಾವಿಯ ವಿಶೇಷ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಜನರ ಗಮನಕ್ಕೆ ತರಬಯಸುತ್ತೇನೆ. ಅದೇ ರೀತಿ ಕಳೆದ ಐದು ದಿವಸಗಳಿಂದ ಕಬ್ಬು ಬೆಳೆಗಾರರು ಏನು ನೋವನ್ನು ಅನುಭವಿಸುತ್ತಿದ್ದಾರೆ ಆ ಬಗ್ಗೆ ಅವರು ನಮ್ಮ ಸರ್ಕಾರದ ಮುಂದೆ ಮನವಿಗಳನ್ನು ಕೊಡುತ್ತಿದ್ದಾರೆ. ನೆನ್ನೆಯ ದಿವಸ ಶ್ರೀ ಶಿವನಾಂದ

ಪಾಟೀಲ್ ಮತ್ತು ಕೆಲವು ಶಾಸಕರು ಚರ್ಚೆಯನ್ನು ಮಾಡಬೇಕಾದರೆ ಕಬ್ಬು ಬೆಳೆಗಾರರ ವಿಷಯದಲ್ಲಿ ಸುದೀರ್ಘವಾಗಿ ಚರ್ಚೆಯನ್ನು ಮಾಡಿದ್ದಾರೆ. ಅದನ್ನು ನಾನು ಗಮನಿಸಿದ್ದೇನೆ. ಇವತ್ತು ಈ ಕಬ್ಬು ಬೆಳೆಗಾರರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕಳೆದ 5–6 ವರ್ಷಗಳಿಂದ ಸರ್ಕಾರ ಯಾವುದೇ ಸಭೆಗಳನ್ನು ಕರೆದಿಲ್ಲ. ನಾನು ಆ ಸಭೆಯನ್ನು ತಕ್ಷಣವೇ ಕರೆಯಲು ತೀರ್ಮಾನ ಮಾಡಿದ್ದೇನೆ. ಅದಕ್ಕೆ ಕಾರಣ ಇವತ್ತು ಮಹಾರಾಷ್ಟ್ರದಲ್ಲಿ ಹೆಚ್ಚಿನ ಬೆಲೆಯನ್ನು ಕೊಡುತ್ತಾರೆ, ಇಲ್ಲಿ ನಮಗೆ ಕಡಿಮೆ ಬೆಲೆ ಕೊಡುತ್ತಿದ್ದಾರೆ, ನಮಗೆ ಕನಿಷ್ಟ 1,500 ರೂಪಾಯಿಗಳನ್ನಾದರೂ ನಮ್ಮ ರೈತರಿಗೆ ಕೊಡಬೇಕೆಂದು ಹೇಳಿದ್ದಾರೆ ಇದರಲ್ಲಿ ಕೆಲವು ಲೋಪದೋಷಗಳು ಇವೆ. ಇವತ್ತು ನಮ್ಮ ಸರ್ಕಾರ ಪ್ರತಿ ಟನ್‌ಗೆ 75 ರೂಪಾಯಿಗಳ ತೆರಿಗೆಯನ್ನು ಕಬ್ಬಿನ ಮಾರಾಟದ ಮೇಲೆ ಏನು ಸಂಗ್ರಹ ಮಾಡುತ್ತೇವೆ ಅದರ ಬಗ್ಗೆ ನಮ್ಮ ಆರ್ಥಿಕ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಬೇಕೆಂಬ ತೀರ್ಮಾನಕ್ಕೆ ಬಂದಿದ್ದೇನೆ. ಸದನದಲ್ಲಿ ನಾನು ಏನು ಮಾತು ಕೊಟ್ಟಿದ್ದೇನೆ ಅದನ್ನು ಉಳಿಸಿಕೊಳ್ಳಬೇಕಾಗುತ್ತದೆ. ಸರ್ಕಾರ 75 ರೂಪಾಯಿಗಳ ಮಾರಾಟ ತೆರಿಗೆಯನ್ನು ಸಂಗ್ರಹ ಮಾಡುತ್ತಿದ್ದು ಅದರಿಂದ ನಮಗೆ ವಿನಾಯಿತಿ ಕೊಡಬೇಕೆಂದು, ರೈತರು ನಮ್ಮ ಗಮನಕ್ಕೆ ತಂದರು. ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶ ಸರ್ಕಾರಗಳು ಆ ರೀತಿಯ ವಿನಾಯಿತಿಯನ್ನು ಕೊಟ್ಟಿದ್ದಾರೆ ಎನ್ನುವುದನ್ನು ನನ್ನ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ನಾನು ಲೆಕ್ಕವನ್ನು ಹಾಕಿಸಿದ್ದು ನಾವು ಈ ತೆರಿಗೆಯಿಂದ ಸುಮಾರು 175–180 ಕೋಟಿ ರೂಪಾಯಿಗಳ ಹಣವನ್ನು ಕಬ್ಬಿನ ಬೆಳೆಗಾರರಿಂದ ಸಂಗ್ರಹಿಸುತ್ತಿದ್ದು, ಇದರಿಂದ ವಿನಾಯಿತಿ ನೀಡಲು ನಮ್ಮ ಅಧಿಕಾರಿಗಳ ಜೊತೆ ಚರ್ಚೆಯನ್ನು ಮಾಡಿ ಮುಂದಿನ ದಿನಗಳಲ್ಲಿ ರೈತರ ಈ ಒಂದು ಬೇಡಿಕೆಯನ್ನು ಈಡೇರಿಸಲು ಪ್ರಾಮಾಣಿಕವಾಗಿ ಸ್ಪಂದಿಸತಕ್ಕಂಥಾದ್ದಕ್ಕೆ ಪ್ರಯತ್ನವನ್ನು ಮಾಡುತ್ತೇನೆಂದು ನಾನು ಈ ಸಂದರ್ಭದಲ್ಲಿ ಕಬ್ಬು ಬೆಳೆಗಾರರ ಪರವಾಗಿ ಘೋಷಣೆಯನ್ನು ಮಾಡಲಿಕ್ಕೆ ನಾನು ಬಯಸುತ್ತಿದ್ದೇನೆ. ಇವತ್ತು ಬೆಳಗ್ಗೆ ಕೆಲವರು ಚರ್ಚೆ ಮಾಡುತ್ತಿದ್ದರು, ಪ್ರಭಾಕರ ಕೋರೆಯವರೇ ಚರ್ಚೆ ಮಾಡುತ್ತಿದ್ದರು. ಕೇಂದ್ರ ಸರ್ಕಾರದಿಂದ ರಿಯಾಯಿತಿಯನ್ನು ತೆಗೆದುಕೊಳ್ಳತಕ್ಕಂಥಾದ್ದಕ್ಕೆ ನಮ್ಮ ರಾಜ್ಯದಿಂದ ಪ್ರಸ್ತಾವನೆಗಳನ್ನು ಕಳುಹಿಸಿಲ್ಲ. ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶಗಳಂಥ ಬೇರೆ ರಾಜ್ಯಗಳವರು ಕೇಂದ್ರ ಸರ್ಕಾರದಿಂದ ಕೆಲವು ಹಣಕಾಸಿನ ನೆರವನ್ನು ಪಡೆದಿದ್ದು, ಕೇವಲ ಎರಡು ಪರ್ಸೆಂಟ್ ಬಡ್ಡಿಗೆ ಕೇಂದ್ರ ಸರ್ಕಾರ ಅವರಿಗೆ ಹಣದ ಸಹಕಾರವನ್ನು ಕೊಟ್ಟಿದೆ, ನಮ್ಮ ರಾಜ್ಯ ಸರ್ಕಾರ ಈ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆಯನ್ನು ಕಳುಹಿಸತಕ್ಕಂಥಾದ್ದಕ್ಕೆ ಪ್ರಯತ್ನ ಪಟ್ಟಿಲ್ಲ, ಹಣಕಾಸು ಇಲಾಖೆ ಈ ವಿಷಯದಲ್ಲಿ ಗಮನ ಹರಿಸಿಲ್ಲ ಎನ್ನುವ ಮಾತನ್ನು ಇವತ್ತು ಬೆಳಗ್ಗೆ ನನ್ನ ಗಮನಕ್ಕೆ ತಂದಿದ್ದು, ಈ ವಿಷಯದ ಬಗ್ಗೆಯೂ ನಾನು ಚರ್ಚೆ ಮಾಡಿ ಈ ಭಾಗದಲ್ಲಿರುವ ಹೆಚ್ಚಿನ ಕಬ್ಬು ಬೆಳೆಗಾರರ ಸಮಸ್ಯೆಯನ್ನು ಬಗೆಹರಿಸುವಂಥಾದ್ದಕ್ಕೆ, ಅವರಿಗೆ ವೈಜ್ಞಾನಿಕ ಬೆಲೆಯನ್ನು ಕೊಡತಕ್ಕಂಥಾದ್ದಕ್ಕೆ ನಮ್ಮ ಸರ್ಕಾರದ ಮುಖಾಂತರ ನಾನು ಪ್ರಯತ್ನವನ್ನು ಪಡುತ್ತೇನೆ ಎಂದು ಈ

ಸಂದರ್ಭದಲ್ಲಿ ಹೇಳುತ್ತೇನೆ. ಅತಿವೃಷ್ಟಿ ಮತ್ತು ಅನಾವೃಷ್ಟಿ ವಿಷಯದಲ್ಲಿ ನಾವು ಎಲ್ಲೂ ಲೋಪವನ್ನು ಎಸಗಿಲ್ಲ, ನಮ್ಮ ಅಧಿಕಾರಿಗಳು ಕೆಲಸವನ್ನು ಮಾಡುತ್ತಿದ್ದಾರೆ. ನಮ್ಮ ಕಂದಾಯ ಸಚಿವರು ಮತ್ತು ಗೃಹ ಸಚಿವರು ಈ ವಿಷಯದಲ್ಲಿ ಯುದ್ಧೋಪಾದಿಯಲ್ಲಿ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ ಮತ್ತು ಅದಕ್ಕೆ ಈಗಾಗಲೇ ಹಣವನ್ನು ಬಿಡುಗಡೆ ಮಾಡಿದ್ದೇವೆ. ಈ ಬಗ್ಗೆ ನಮ್ಮ ಸದಸ್ಯರಲ್ಲಿ ಯಾವುದೇ ರೀತಿಯ ಅನುಮಾನಗಳು ಬೇಡ, ಸಂಕಷ್ಟಕ್ಕೆ ಒಳಗಾಗಿರತಕ್ಕಂಥ ಜನಗಳ ವಿಷಯದಲ್ಲಿ ಯಾವುದೇ ಕಾರಣಕ್ಕೂ ಅಸಡ್ಡೆಯನ್ನು ಮಾಡತಕ್ಕಂಥ ಪ್ರಶ್ನೆ ಇಲ್ಲ. ಈ ವಿಷಯದಲ್ಲಿ ಹಿಂದಿನ ಸರ್ಕಾರಗಳು ಯಾವ ಒಂದು ಮಟ್ಟದಲ್ಲಿ ಕೆಲಸವನ್ನು ಮಾಡಿವೆಯೋ ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ನಾವು ಕೆಲಸವನ್ನು ಮಾಡಲು ಸಿದ್ಧರಿದ್ದೇವೆ. ಕಳೆದ ವರ್ಷ ಐನೂರು ಚಿಲ್ಲರೆ ಕೋಟಿ ರೂಪಾಯಿಗಳ ಹಣ ವಿನಿಯೋಗವಾಗಿದೆ. ನಾವು ಈ September ತಿಂಗಳೊಳಗೆ 234 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ಇನ್ನೂ ಆರು ತಿಂಗಳ ಅವಧಿಯಲ್ಲಿ ನಾವು ಹೆಚ್ಚಿನ ಹಣವನ್ನು ಬಿಡುಗಡೆ ಮಾಡಲು ಸಿದ್ದರಿದ್ದೇವೆ. ಈ ಬಗ್ಗೆ ಹಣದ ಕೊರತೆಯಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿನ ಅಸಮತೋಲನದ ಬಗ್ಗೆ ಚರ್ಚೆಯನ್ನು ಮಾಡುತ್ತಾರೆ. ನಾನು ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಸರ್ಕಾರದಿಂದ ಕಾರ್ಯಕ್ರಮಗಳನ್ನು ಮಾಡಬೇಕಾದರೆ ಕೆಲವು ಇಲಾಖೆಗಳಿಂದ ಯಾವ ರೀತಿ ಹಣವನ್ನು ಕೊಟ್ಟಿದ್ದೇವೆ ಎನ್ನುವುದನ್ನು ಹೇಳಲು ಬಯಸುತ್ತೇನೆ. ಏಕೆಂದರೆ, ತಾರತಮ್ಯವಾಗಿದೆ ಎನ್ನುವ ಮಾತನ್ನು ಇಲ್ಲಿ ಕೆಲವು ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಕುಡಿಯುವ ನೀರಿನ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಸುಮಾರು 65% ಹಣವನ್ನು ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಿಗೆ, ಅಂದರೆ ಬೆಳಗಾವಿ ಮತ್ತು ಗುಲ್ಬರ್ಗ ಡಿವಿಷನ್‌ಗಳಿಗೆ ಕೊಟ್ಟಿದ್ದೇವೆ. ಬೆಳಗಾವಿ ಡಿವಿಷನ್‌ಗೆ 290.27 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಅದು 44.94% ಆಗಿದೆ. ನಾನು ಹೇಳುತ್ತಿರುವಂಥ ಈ ಅಂಕಿ ಅಂಶ ಹಣವನ್ನು ಮೀಸಲಿಟ್ಟಿರತಕ್ಕಂಥಾದ್ದಾಗಿದೆ. ಗುಲ್ಬರ್ಗ ಡಿವಿಷನ್‌ಗೆ 134.19 ಲಕ್ಷ ರೂ. ಗಳು ಹಾಗೂ ಬೆಂಗಳೂರು ಮತ್ತು ಮೈಸೂರು ಡಿವಿಷನ್‌ಗಳಿಗೆ ಮೀಸಲಿಟ್ಟಿರತಕ್ಕಂಥಾದ್ದು 221.51 ಲಕ್ಷ ರೂ.ಗಳು ಅಂದರೆ ಆ ಭಾಗಕ್ಕೆ 34.29% ಹಣವನ್ನು, ಈ ಭಾಗಕ್ಕೆ 65% ಹಣವನ್ನು ಮೀಸಲಿಟ್ಟಿದ್ದೇವೆ. ಅದೇ ರೀತಿ roads and bridges ವಿಷಯದಲ್ಲಿ ಬೆಳಗಾವಿ ಡಿವಿಷನ್‌ಗೆ 27.53%, ಗುಲ್ಬರ್ಗ ಡಿವಿಷನ್‌ಗೆ 20.42%, ಬೆಂಗಳೂರು ಮತ್ತು ಮೈಸೂರು ಡಿವಿಷನ್‌ಗೆ 52.05% ಹಣವನ್ನು ಇಟ್ಟಿದ್ದೇವೆ. ನಂಜುಂಡಪ್ಪ ವರದಿಯ ಆಧಾರದ ಮೇಲೆ ವಿಷಯವನ್ನು ಪ್ರಸ್ತಾಪ ಮಾಡುವುದಾದರೆ ಈ ಒಂದು ಭಾಗದಲ್ಲಿ ಹಿಂದುಳಿದಿರತಕ್ಕಂಥಾದ್ದು 58 ತಾಲ್ಲೂಕುಗಳು ಹಾಗೂ ದಕ್ಷಿಣ ಕರ್ನಾಟಕದಲ್ಲಿ 54 ತಾಲ್ಲೂಕುಗಳು, ಹಿಂದುಳಿದಿರುವಂಥ ಈ ಸಂದರ್ಭದಲ್ಲಿ, ನಂಜುಂಡಪ್ಪ ವರದಿಯ ಆಧಾರದ ಮೇಲೆಯೇ ಹಣವನ್ನು ಬಿಡುಗಡೆ ಮಾಡತಕ್ಕಂಥದ್ದಕ್ಕೂ ನಾವು ಗಮನವನ್ನು ಹರಿಸಿದ್ದೇವೆ. ನೀರಾವರಿ

ವಿಷಯದಲ್ಲೂ ಸಹ ಹೆಚ್ಚಿನ ಹಣವನ್ನು ಉತ್ತರ ಕರ್ನಾಟಕ ಭಾಗಕ್ಕೇ ಮೀಸಲಿಟ್ಟಿದ್ದೇವೆ. ನಂಜುಂಡಪ್ಪನವರ ವರದಿಯ ಆಧಾರದ ಮೇಲೆ, ಅದು ಆಸ್ಪತ್ರೆಗಳಿರಬಹುದು, ಶೈಕ್ಷಣಿಕ ರಂಗದಲ್ಲಿರಬಹುದು ಅಥವಾ ಬೇರೆಬೇರೆ ಕೆಲಸಗಳಿಗೆ ಮುಂದಿನ ವರ್ಷಗಳಲ್ಲಿ ಹೆಚ್ಚಿನ ಹಣವನ್ನು ಮೀಸಲಿಡುತ್ತೇವೆ. ಏಕೆಂದರೆ ನಾವು ಅಧಿಕಾರಕ್ಕೆ ಬಂದು ಕೇವಲ 7 ತಿಂಗಳುಗಳಾಗಿವೆ. ನಾವು ಅಧಿಕಾರಕ್ಕೆ ಬಂದ ಎರಡೇ ತಿಂಗಳಲ್ಲಿ budget ಅನ್ನು ಮಂಡನೆ ಮಾಡಬೇಕಾದಂಥ ಸಂದರ್ಭ ಬಂದುದ್ದರಿಂದ, ನಮಗೆ ಸಿಕ್ಕಂಥ ಕಾಲಾವಕಾಶದಲ್ಲಿ, ಕಾಲದ ಕೊರತೆಯಿಂದಾಗಿ ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡುವಲ್ಲಿ ಲೋಪಗಳಾಗಿವೆ ಎನ್ನುವ ಭಾವನೆಗಳಿದ್ದರೆ, ಮುಂದಿನ ವರ್ಷಗಳಲ್ಲಿ ಅದಕ್ಕೆ ನಾವು ಸಂಪೂರ್ಣವಾಗಿ ತೆರೆಯನ್ನು ಎಳೆಯುವುದರ ಮೂಲಕ ಅಸಮತೋಲನ ಎನ್ನುವ ಪದವನ್ನು ಸಂಪೂರ್ಣವಾಗಿ ತೆಗೆದುಹಾಕತಕ್ಕಂಥಾದ್ದಕ್ಕೆ ನಾವು ಬದ್ಧರಾಗಿದ್ದು, ಈ ದಿಸೆಯಲ್ಲಿ ಹಣವನ್ನು ಕೊಡುತ್ತೇವೆ ಹಾಗೂ ನಾನು ಈ ಮೊದಲೇ ಹೇಳಿದ ಹಾಗೆ ಒಂದು ಮಸೂದೆಯನ್ನೇ ತರುವುದರ ಮುಖಾಂತರ, ನಂಜುಂಡಪ್ಪನವರ ವರದಿಯಲ್ಲಿ ಉಲ್ಲೇಖಿಸಿರುವ ತಾಲ್ಲೂಕುಗಳಿಗೆ ಪ್ರತಿವರ್ಷ ಯಾವ ರೀತಿ ಹಣವನ್ನು ಎನ್ನುವುದರ ಬಗ್ಗೆ ಸದನದಲ್ಲೇ ಒಂದು ಪ್ರಸ್ತಾವವನ್ನು ತರುವುದರ ಮುಖಾಂತರ ಇದಕ್ಕೆ ಅಂತಿಮವಾದ ತೆರೆಯನ್ನು ಎಳೆಯತಕ್ಕಂಥ ಕೆಲಸವನ್ನು ಮಾಡುತ್ತೇವೆ ಎಂದು ಹೇಳುತ್ತೇನೆ. ಈಗ ನಾವು ಉತ್ತರ ಕರ್ನಾಟಕದ ಕಲಾಪವನ್ನು ನಡೆಸುತ್ತಿದ್ದೇವೆ. ಈ ಭಾಗದ ಜನರಲ್ಲಿ ಹಲವಾರು ನಿರೀಕ್ಷೆಗಳಿವೆ. ಇವತ್ತು ನಾನು ಆ ವಿಷಯಗಳನ್ನು ಸದನದಲ್ಲಿ ಪ್ರಸ್ತಾಪ ಮಾಡಲು ಹೋಗುವುದಿಲ್ಲ. ಈ ಭಾಗದಲ್ಲಿ ಯಾವ ಯಾವ ಇಲಾಖೆಗಳ ಕೆಲಸಗಳ ಕೊರತೆ ಇದೆ, ಅದಕ್ಕೆ ಹೆಚ್ಚಿನ ಗಮನವನ್ನು ಕೊಟ್ಟು ಮುಂದಿನ ದಿನಗಳಲ್ಲಿ ಈ ಜಿಲ್ಲೆಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಉತ್ತಮಪಡಿಸುತ್ತೇವೆ. ಈ ವಿಷಯದಲ್ಲಿ ದಕ್ಷಿಣ ಕರ್ನಾಟಕ ಅಥವಾ ಉತ್ತರ ಕರ್ನಾಟಕ ಎನ್ನುವ ಪ್ರಶ್ನೆ ಇಲ್ಲ. ಈ ಭಾಗದಲ್ಲಿ ಅಭಿವೃದ್ಧಿಯ ವಿಷಯದಲ್ಲಿ ಕೊರಗನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ವೈಜನಾಥ ಪಾಟೀಲರು ಈಗ ಇಲ್ಲಿ ಇದ್ದಹಾಗಿಲ್ಲ. ಅವರು ಇಲ್ಲಿನ ವಿಷಯಗಳ ಬಗ್ಗೆ ಪದೇಪದೇ ಚರ್ಚೆಯನ್ನು ಮಾಡುತ್ತಾರೆ. ಅವರಿಗೆ ಒಂದು ಮಾತನ್ನು ಈ ಸದನದ ಮುಖಾಂತರ ಹೇಳಲಿಕ್ಕೆ ಬಯಸುತ್ತೇನೆ.

(ಈ ಹಂತದಲ್ಲಿ ಎಂ.ಇ.ಎಸ್.ನ ಮತ್ತೊಬ್ಬ ಸದಸ್ಯರಾದ ಯಶವಂತರಾವ್ ದಿಗಂಬರರಾವ್ ಪಾಟೀಲ್ ರವರು ಸದನದ ಬಾವಿಗೆ ಬಂದರು)

ಮುಂದಿನ ವರ್ಷಗಳಲ್ಲಿ ಈ ರೀತಿಯ ವಿಷಯಗಳ ಬಗ್ಗೆ ಪದೇ ಪದೇ ಚರ್ಚೆಯನ್ನು ಮಾಡಲು ಅವಕಾಶವಾಗದ ರೀತಿಯಲ್ಲಿ ನಿರ್ಧಾರವನ್ನು ತೆಗೆದುಕೊಂಡು, ಸಂಪೂರ್ಣವಾದ ಗಮನವನ್ನು ಅಭಿವೃದ್ಧಿಗೆ ಕೊಡುವುದರ ಮುಖಾಂತರ ಈ ಸರ್ಕಾರ ಈ ರಾಜ್ಯದ ಸಂಪೂರ್ಣ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು, ಈ ರಾಜ್ಯ ಒಂದು ಎನ್ನುವ ಭಾವನೆಯನ್ನು ಮೂಡಿಸುವ

ನಿಟ್ಟಿನಲ್ಲಿ ಯಾವುದೇ ತಾರತಮ್ಯಕ್ಕೆ ಅವಕಾಶವನ್ನು ಕೊಡದೇ, ಇದರ ಬಗ್ಗೆ ನಾವು ಮುಂದಿನ ದಿನಗಳಲ್ಲಿ ಗಮನವನ್ನು ಹರಿಸುತ್ತೇವೆ ಎಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸದನದ ಗಮನಕ್ಕೆ ತರುತ್ತಾ, ಮೊತ್ತೊಮ್ಮೆ ಸದನದ ಎಲ್ಲಾ ಹಿರಿಯ ಹಾಗೂ ಕಿರಿಯ ಸದಸ್ಯರುಗಳಿಗೆ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ. ಹಾಗೆಯೇ ಚಾಮರಾಜನಗರದ ಕಡೆಗೂ ಗಮನ ಹರಿಸುತ್ತೇವೆ, ಚಾಮರಾಜನಗರಕ್ಕೆ ನಾನೇ ಬರುತ್ತೇನೆ.

ಶ್ರೀ ಆರ್. ಧ್ರುವನಾರಾಯಣ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಎಲ್ಲ ಜಿಲ್ಲೆಗಳಲ್ಲೂ ಪ್ರವಾಸ ಮಾಡಿದ್ದಾರೆ. ನಾನು ತಮ್ಮ ಮುಖಾಂತರ ಅವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಚಾಮರಾಜ ನಗರ ಜಿಲ್ಲೆ ಗಡಿಭಾಗದಲ್ಲಿರತಕ್ಕಂಥ ಜಿಲ್ಲೆ. ಇಲ್ಲಿಗೆ ಬಹಳ ದೂರದಲ್ಲಿರತಕ್ಕಂಥಾದ್ದು ನಮ್ಮ ಚಾಮರಾಜನಗರ ಜಿಲ್ಲೆ. ಬೆಳಗಾವಿಗೆ ಬಹಳ ದೂರದಿಂದ ಬಂದಿರುವವರೆಂದರೆ ನಾವೇ. ಅದು ಗಡಿಭಾಗದಲ್ಲಿರುವ ಜಿಲ್ಲೆ ಮತ್ತು ಹಿಂದುಳಿದಿರತಕ್ಕಂಥ ಜಿಲ್ಲೆ, ನಂಜುಂಡಪ್ಪನವರ ವರದಿಯಲ್ಲಿ ಕೂಡ ಅದು ಅತ್ಯಂತ ಹಿಂದುಳಿದಿರತಕ್ಕಂಥ ಜಿಲ್ಲೆ ಎಂದು ಸೇರಿದೆ. ನಾನು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ದಯಮಾಡಿ ಮುಖ್ಯಮಂತ್ರಿಗಳು ಚಾಮರಾಜನಗರ ಜಿಲ್ಲೆಗೆ ಬೇಗ ಬರಬೇಕು ಹಾಗೂ ನಮ್ಮ ಜಿಲ್ಲೆಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಚಾಮರಾಜನಗರ ಜಿಲ್ಲೆಗೆ ಮುಂದಿನ ತಿಂಗಳು ಪ್ರವಾಸಕ್ಕೆ ಬರುತ್ತಿದ್ದೇನೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಬಿಳಿಗಿರಿರಂಗನ ಬೆಟ್ಟ ಮತ್ತು ಮಹದೇಶ್ವರ ಬೆಟ್ಟದ ಸುತ್ತಮುತ್ತಲ 15 – 20 ಗ್ರಾಮಗಳಲ್ಲಿ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳಿಲ್ಲ ಎನ್ನುವುದು ಪತ್ರಿಕೆಗಳ ಮೂಲಕ ನನ್ನ ಗಮನಕ್ಕೆ ಬಂದಾಗ, ನಾನು ತಕ್ಷಣವೇ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ವರದಿಯನ್ನು ತರಿಸಿದ್ದೇನೆ. ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವ ಆ ಗ್ರಾಮಗಳಿಗೆ ನಾನೇ ಖುದ್ದಾಗಿ ಬಂದು ಕಾಮಗಾರಿಗಳಿಗೆ ಶಂಕುಸ್ಥಾಪನೆಯನ್ನು ಮಾಡಿ, ಕೆಲಸವನ್ನು ಪ್ರಾರಂಭ ಮಾಡಿಸಿ, ಚಾಮರಾಜನಗರಕ್ಕೆ ಬಂದರೆ ಅಧಿಕಾರ ಹೋಗುತ್ತದೆ ಎಂದು ಏನೊಂದು ದೋಷವನ್ನು ಕೊಟ್ಟಿದ್ದಾರೆ, ಅದರಿಂದ ವಿಮೋಚನೆ ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್. ಧ್ರುವನಾರಾಯಣ್ : ತಾವು ಅಲ್ಲಿ ವಾಸ್ತವ್ಯ ಮಾಡಬೇಕು. ಚಾಮರಾಜನಗರ ಜಿಲ್ಲೆಯ ಒಂದು ಹಳ್ಳಿಯಲ್ಲಿ ಅಥವಾ ಚಾಮರಾಜನಗರದಲ್ಲೇ ವಾಸ್ತವ್ಯ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನಾನು ಚಾಮರಾಜನಗರ ಜಿಲ್ಲೆಯ ಒಂದು ಹಳ್ಳಿಯಲ್ಲಿ ಮಾತ್ರವಲ್ಲ, ಬೇಕಿದ್ದರೆ ಚಾಮರಾಜನಗರದಲ್ಲೇ ಇರುತ್ತೇನೆ. ಅದೇ ರೀತಿ ಪ್ರಚಾರ ಬಾಗಲಕೋಟೆ ವಿಷಯದಲ್ಲಿಯೂ ಇತ್ತು. "ಕೊನೆಗೂ ಬಾಗಲಕೋಟೆಗೆ ಶಾಪ ವಿಮುಕ್ತಿ" ಎಂದು ಪತ್ರಿಕೆಗಳಲ್ಲಿ

ಒಂದು ವರದಿ ಬಂದಿದೆ. ನಾನು ಬಾಗಲಕೋಟೆಗೂ 10–11ನೇ ತಾರೀಖು ಭೇಟಿ ಕೊಡುತ್ತಿದ್ದೇನೆ. ನನಗೆ ಯಾವುದೇ ರೀತಿಯ ಅಂಜಿಕೆಗಳಿಲ್ಲ. ಅಧಿಕಾರ ಹೋಗುತ್ತದೆ ಎಂದು ಕೆಲವು ಜಿಲ್ಲೆಗಳಿಗೆ, ಕೆಲವು ತಾಲ್ಲೂಕುಗಳಿಗೆ ಹೋಗತಕ್ಕಂಥಾದ್ದರಿಂದ ನಾನು ಹಿಂದೆ ಸರಿಯುತ್ತೇನೆ ಎನ್ನುವ ಪ್ರಶ್ನೆಯಿಲ್ಲ. ಯಾವ ಯಾವ ತಾಲ್ಲೂಕುಗಳ ಬಗ್ಗೆ ಯಾವಯಾವ ಜಿಲ್ಲೆಗಳ ಬಗ್ಗೆ ಇಂಥ ಒಂದು ಶಾಪ ಇದೆ ಎಂದು ಹೇಳುತ್ತಾರೆ, ಆ ಶಾಪವನ್ನು ವಿಮೋಚನೆ ಮಾಡತಕ್ಕಂಥಾದ್ದಕ್ಕೆ, ನಮ್ಮ ಈ ಒಂದು ಮೈತ್ರಿ ಸರ್ಕಾರದ ಮುಖಾಂತರ ಅವುಗಳಿಗೆ ಭೇಟಿಯನ್ನು ಕೊಡುತ್ತೇನೆ ಎಂದು ಹೇಳುತ್ತೇನೆ. ಈ ಸದನದ ಸದಸ್ಯರುಗಳು ಈ ಅಧಿವೇಶನಕ್ಕೆ ಭಾಗವಹಿಸಲು ಬಂದಂಥ ಸಂದರ್ಭದಲ್ಲಿ ಏನಾದರೂ ಲೋಪದೋಷಗಳಾಗಿದ್ದರೆ, ಅದಕ್ಕೆ ಈ ಸಂದರ್ಭದಲ್ಲಿ ವಿಷಾದವನ್ನು ವ್ಯಕ್ತಪಡಿಸುತ್ತೇನೆ ಮುಂದಿನ ದಿನಗಳಲ್ಲಿ ಯಾವುದೇ ರೀತಿಯ, ಲೋಪದೋಷಗಳಿಗೆ ಅವಕಾಶವಾಗದ ರೀತಿಯಲ್ಲಿ ಸದನ ನಡೆಸತಕ್ಕಂಥಾದಕ್ಕೆ ಎಲ್ಲಾ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತೇವೆಂದು ಹೇಳಿ, ಇಲ್ಲಿ ಸದನ ನಡೆಸಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕಾರ ಕೊಟ್ಟಿರತಕ್ಕಂಥ ಎಲ್ಲರಿಗೂ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

(ಎಂ.ಇಎಸ್.ನ ಸದಸ್ಯರುಗಳಾದ ಶ್ರೀ ಮನೋಹರ್ ಕಿನೇಕರ್ ಮತ್ತು ಶ್ರೀ ಯಶವಂತರಾವ್ ದಿಗಂಬರರಾವ್ ಪಾಟೀಲ್ ರವರು ತಮ್ಮ ಸ್ಥಾನಗಳಿಗೆ ಹಿಂತಿರುಗಿದರು)

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಮಾತನಾಡುವುದಿಲ್ಲ. ಮುಖ್ಯಮಂತ್ರಿಗಳಿಂದ ಗಡಿ ಭಾಗದಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ನಿರ್ದಿಷ್ಟವಾದ ಉತ್ತರ ಬರಲಿಲ್ಲ. ಸಾರಾಸಗಟಾಗಿ ಕರ್ನಾಟಕ ರಾಜ್ಯದಲ್ಲಿ ಬೇರೆ ಬೇರೆ ಇಲಾಖೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ Budget ನಲ್ಲಿಟ್ಟಿದ್ದಂಥ ಹಣದ ಬಗ್ಗೆಯೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಬರದ ಬಗ್ಗೆ, ಪ್ರವಾಹದ ಬಗ್ಗೆ ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಕ್ಕೆ ತರುವ ರೀತಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಈಗ ಬರದ ವಿಷಯವಾಗಿ ನಾವೇನು ಹೇಳಿದ್ದೇವೆಂದರೆ, 357 ಕೋಟಿ ರೂ.ಗಳು ಕಳೆದ ಸಲ ಕೇಂದ್ರದಿಂದ ಬಂದಿದೆ. ಮಾನ್ಯ ಶಿವರಾಜ ಪಾಟೀಲ್‌ರವರು 158 ಕೋಟಿ ರೂ.ಗಳನ್ನು Deduct ಮಾಡಿದ್ದೇವೆಂದು ಹೇಳಿದರು. ನಾವೆಲ್ಲರೂ ಹೋಗಿದ್ದೆವು ಮತ್ತು ಪ್ರಕಾಶ್‌ರವರು ಕೂಡ ಬಂದಿದ್ದರು; ಮಾನ್ಯ ಶಿವರಾಜ ಪಾಟೀಲರನ್ನು ಭೇಟಿಯಾಗಿ 150 ಕೋಟಿ ರೂ.ಗಳನ್ನು ಅದರಲ್ಲಿ ವಜಾ ಮಾಡಬಾರದೆಂದು ಹೇಳಿದೆವು. ಒಟ್ಟಾರೆಯಾಗಿ 357 Crores of Rupees they have given ಮೊನ್ನೆ ಶಿವರಾಜಪಾಟೀಲ್‌ರು ಬಂದು ತಮ್ಮ ಜೊತೆ ಸಮಾಲೋಚನೆ ಮಾಡಿ 250 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಬೇರೆ ರಾಜ್ಯಕ್ಕೆ ಕೊಡುವುದು ಬೇರೆ. ಬರ ಮತ್ತು ಪ್ರವಾಹ ಮತ್ತು ಈ ಭಾಗದಲ್ಲಿರುವ ಜನರಿಗೆ 600

Crores of Rupees They have given ಇಲ್ಲಿ ನೀವು ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ? ಎಷ್ಟು ಹಣ ಮುಟ್ಟಿದೆ? ಕುಡಿಯುವ ನೀರಿನ ಬಗ್ಗೆ ಈಗಾಗಲೇ ಸಂಬಂಧಪಟ್ಟ ರಘುವಂಶಿ ಪ್ರಸಾದ್ ಸಿಂಗ್ ರಾಜ್ಯ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದಾರೆ. ಕುಡಿಯುವ ನೀರಿಗೆಂದು 78 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು, Out of that you have spent only Rs. 41 crore ಇವತ್ತು ಗಡಿ ಭಾಗದಲ್ಲಿ ಅಧಿವೇಶನ ನಡೆಯುತ್ತಿದೆ. ನಮ್ಮ ಕಾಲದಲ್ಲಿ ಇದಕ್ಕೆಂದು Committee constitute ಆಗಿತ್ತು. ನಿಮ್ಮ ಕಾಲದಲ್ಲಿ ಇವತ್ತು 5 ದಿವಸಗಳ ಕಾಲ ಅಧಿವೇಶನ ನಡೆಸಿದ್ದೀರಿ. ಚರ್ಚೆಯಾಗಿದೆ. ಈ ಭಾಗದ ಸಮಸ್ಯೆಗಳ ಬಗ್ಗೆ ನಿರ್ದಿಷ್ಟವಾದಂಥ ಉತ್ತರವೇನು? ತಾವು ಎಷ್ಟು ಹಣವನ್ನು ಬಿಡುಗಡೆ ಮಾಡುತ್ತಿದ್ದೀರಿ ಎನ್ನುವುದನ್ನೂ ಕೂಡ ಇವತ್ತು ಖಡಾಖಂಡಿತವಾಗಿ ಹೇಳಬೇಕಾಗಿದೆ. ಇವತ್ತು KLE Society ಯವರು 5 ದಿನಗಳ ಕಾಲ ಚೆನ್ನಾಗಿ ವ್ಯವಸ್ಥೆ ಮಾಡಿದ್ದಾರೆ. ಪ್ರಭಾಕರ ಕೋರೆಯವರಾಗಲಿ, ನಮ್ಮ ಪ್ರಕಾಶ್ ಹುಕ್ಕೇರಿಯವರಾಗಲಿ, ಎ.ಬಿ. ಪಾಟೀಲ್‌ರವರಾಗಲಿ, ಕುಡಚಿಯವರಾಗಲಿ ನಮ್ಮ ಕಾಕಾಸಾಹೇಬ್ ಪಾಟೀಲ್‌ರವರು, ರಮೇಶ್ ಜಾರಕಿಹೊಳಿಯವರು ಮತ್ತು ಶಿವಾನಂದ ನಾಯ್ಕ್‌ರವರು ಇವರೆಲ್ಲರೂ ಕೂಡ ಚೆನ್ನಾಗಿ ವ್ಯವಸ್ಥೆ ಮಾಡಿದ್ದಾರೆ. ಅವರಿಗೆ ನಾವೆಲ್ಲರೂ ಕೂಡ ತಮ್ಮೆಲ್ಲರ ಪರವಾಗಿ ಕೊನೆಯ ದಿನ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ. ಆದರೆ, ನಂಜುಂಡಪ್ಪನವರ ವರದಿಯ ಬಗ್ಗೆ ನಮಗೆ ನಿರ್ದಿಷ್ಟವಾದ ಉತ್ತರ ಬೇಕೆಂದು ನಾವು ನಿನ್ನೆ ಹೇಳಿದ್ದೆವು. ಏಕೋ ನಮ್ಮ CPM ನ ಗೆಳೆಯ ಸುಮ್ಮನೆ ಕುಳಿತಿದ್ದಾರೆ. ನಂಜುಂಡಪ್ಪನವರ ವರದಿ ಭಗವದ್ಗೀತೆ ಆಗಬಾರದು. ನಂಜುಂಡಪ್ಪನವರು ಏನೇನು ಆದ್ಯತೆ ಕೊಟ್ಟಿದ್ದಾರೆ ಅದಕ್ಕೆ ಹಣವನ್ನು ಬಿಡುಗಡೆ ಮಾಡುವ ಕೆಲಸವನ್ನು ತಾವು ಮಾಡಬೇಕು. ಕಳೆದ ಸಲ ಮಾನ್ಯ ಎಸ್.ಎಂ. ಕೃಷ್ಣರವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ ವರದಿ ಕೊಡಬೇಕೆಂದು ಹೇಳಿದ್ದರು. ವರದಿ ಕೊಟ್ಟ ನಂತರ ಅದೇ ವರ್ಷದ period ನಲ್ಲಿ ನಾವು ಮಹಿಳಾ ವಿಶ್ವವಿದ್ಯಾನಿಲಯವನ್ನು ಬಿಜಾಪುರದಲ್ಲಿ ಸ್ಥಾಪಿಸಿದ್ದೇವೆ. ಬೀದರ್‌ನಲ್ಲಿ ಪಶು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ್ದೇವೆ. ಹನಿ ನೀರಾವರಿ ನಿಗಮವನ್ನು ಸ್ಥಾಪಿಸಿ ಕೆಲಸ ಪ್ರಾರಂಭ ಮಾಡಿದ್ದೇವೆ. ಇವತ್ತು ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಗೊಳಿಸಲು ಹಣವೇನು ಬೇಕಾಗಿದೆ. ಅದರಲ್ಲಿ ಅರ್ಧದಷ್ಟು ಹಣವನ್ನು ಕೇಂದ್ರಸರ್ಕಾರದವರು ಕೊಡಬೇಕೆಂದು ಕೇಳಿದ್ದೇವೆ. ಇದರ ಬಗ್ಗೆ ಯೋಚನೆ ಮಾಡಿ. ಇವತ್ತು ತಾವು ನೇರವಾಗಿ ಉತ್ತರ ಕೊಟ್ಟಿಲ್ಲ. ನಮ್ಮ ಅಧ್ಯಕ್ಷರು ಶುಭ ದಿನದಲ್ಲಿ ಗಡಿಭಾಗದಲ್ಲಿ ಅಧಿವೇಶನ ನಡೆಯುವಾಗ protest ಏಕೆ ಮಾಡಬೇಕೆಂದು ಹೇಳಿದರು. ಆದರೆ, ಮುಂದೆ ಬರುವ ದಿನಗಳಲ್ಲಿ ಇದರ ಬಗ್ಗೆ ಸಮಗ್ರವಾದ ಚರ್ಚೆ ಆಗಬೇಕು. ಬರದ ಬಗ್ಗೆ ಎಲ್ಲಾ ಕ್ಷೇತ್ರಗಳ ಶಾಸಕರ ಜೊತೆ ಸಮಾಲೋಚನೆ ಮಾಡಬೇಕು. ನೀವು ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂಬ ಬಗ್ಗೆ ನಮ್ಮ ಸಮ್ಮುಖದಲ್ಲಿ ಜಿಲ್ಲಾಪಂಚಾಯಿತಿ ಅಧ್ಯಕ್ಷರು, ಜಿಲ್ಲಾಧಿಕಾರಿಗಳ ಎದುರುಗಡೆ

ಮಾತನಾಡಬೇಕು. ನಾವೂ ಕೂಡ ಮಾತನಾಡಬೇಕಾಗಿದೆ. ಒಂದೆರಡು ದಿನಗಳ ಕಾಲ ಬೆಂಗಳೂರಿನಲ್ಲಿ ಚರ್ಚೆ ನಡೆಯಲಿ ಮತ್ತು ಎಲ್ಲಾ ಕಡೆ ಸಂಕಟದಲ್ಲಿರುವ ಜನರ ಬಗ್ಗೆ ಕಳಕಳಿಯಿಂದ ಕೆಲಸ ತೆಗೆದುಕೊಳ್ಳುವುದನ್ನು ಪ್ರಾರಂಭ ಮಾಡಬೇಕು. ತಾವು ಬಹಳಷ್ಟು ವಿಷಯಗಳನ್ನು ಕಲೆಸಿ ಹೇಳಿದ್ದೀರಿ. ಅದನ್ನು clarification ನಲ್ಲಿ ಕೇಳುವುದಕ್ಕಾಗುವುದಿಲ್ಲ. But, 5 ದಿನಗಳ ಕಾಲದ ಅಧಿವೇಶನದಲ್ಲಿ ಈ ದಿನ ಬಹಳ ಅಪೂರ್ಣವಾದ ಚರ್ಚೆಯಾಗಿದೆ ಅಪೂರ್ಣವಾದ ಮೇಲೆ ಮೂರನೇ ದಿವಸವೇ ತಮ್ಮಿಂದಲೇ ಉದ್ಭವವಾದಂಥ ಸಮಸ್ಯೆಗಳು ಬಂದು ಒಂದು ದಿವಸ ಕಾಲ session ನಡೆಯಲಿಲ್ಲ. ಎರಡು ದಿನಗಳು session ನಡೆದಿದೆ. ನಿನ್ನೆ ರಾಜ್ಯಪಾಲರು ಭಾಷಣ ಮಾಡಲು ಬಂದರೆಂದು ಬರಲಿಕ್ಕೆ ತಮಗೂ ಆಗಲಿಲ್ಲ. ತಾವು ಕಾರ್ಯಕ್ರಮಗಳಲ್ಲಿ ವ್ಯಸ್ತರಾಗಿದ್ದಿರಿ. ಯಾವ್ಯಾವ ಶಾಸಕರು ಏನೇನು ಹೇಳಿದ್ದಾರೆ ಅದನ್ನೂ ಕೂಡ ಕೇಳಲಿಕ್ಕೆ ಆಗಲಿಲ್ಲ. ಆದರೂ ಕೂಡ ಸಮಾಧಾನವಾಗಿ ಇವತ್ತು ತಾವು ಉತ್ತರ ಕೊಟ್ಟಿದ್ದೀರಿ. ನಾವು ಕೇಳಿದ್ದೇವೆ. ಆದರೆ ಬರತಕ್ಕಂಥದ್ದು ಇಷ್ಟೇ ಸಾಲದು. ಈ ಭಾಗದ ಏನು ಜನರ ನಿರೀಕ್ಷೆ ಇದೆ, ಆ ಅಪೇಕ್ಷೆ ಮೇರೆಗೆ ಇನ್ನೂ ಒಳ್ಳೆಯ ಕೆಲಸ ಮಾಡುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇದರ ಬಗ್ಗೆ ಮತ್ತೊಂದು ಸಭೆಯನ್ನು ಬೆಂಗಳೂರಿನಲ್ಲಿ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸುಮಾರು ಒಂದು ಗಂಟೆ ಕಾಲ ನಂಜುಂಡಪ್ಪ ವರದಿ ಮೇಲೆ ಮತ್ತು ಬರಗಾಲ ಪರಿಸ್ಥಿತಿ, ಅಭಿವೃದ್ಧಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಉತ್ತರ ಅಷ್ಟು ಸಮರ್ಪಕವಾಗಿಲ್ಲದಿದ್ದರೂ ಕೂಡ ನಾವು walkout ಮಾಡಬೇಕೆಂದು ನಿರ್ಣಯ ಮಾಡಿದ್ದೆವು. ಆದರೆ, ನಾನು ಗಡಿ ಭಾಗದಲ್ಲಿ ಮೊದಲನೇ ಸಲ ಈ ಅಧಿವೇಶನ ನಡೆಯುತ್ತಿದೆ. ಅವರು ಹೇಳುವುದನ್ನು ಕೇಳೋಣ, ಆಮೇಲೆ ಈ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಇನ್ನೊಂದು ಸಭೆಯನ್ನು ಕರೆದು ಅವರು ಕೇಳಿ ಇದಕ್ಕೇನಾದರೂ ಒಂದು ಪರಿಹಾರ ಹುಡುಕಬೇಕು ಎಂದು ಹೇಳಿದೆ. ಇಲ್ಲದಿದ್ದರೆ ಏನಾಗುತ್ತದೆಂದರೆ, ಅದು ತಮಗೂ ಗೊತ್ತಿದೆ, ಈಗ ಅವರೂ ಹೇಳಿದರು. ನಾವು ಬರಗಾಲದ ಬಗ್ಗೆ white paper ಕೊಡಿ ಎಂದು ಹೇಳಿದೆವು. ಎಷ್ಟು ದುಡ್ಡು ಬಂದಿದೆ? ಎಷ್ಟು ಖರ್ಚು ಆಗಿದೆ? ಎಷ್ಟು ಖರ್ಚಾಗಿದೆ ಎಂಬ ಬಗ್ಗೆ ನೀವು ಕೇಂದ್ರ ಸರ್ಕಾರಕ್ಕೆ ಮಾಹಿತಿ ಕಳುಹಿಸಿದ್ದಿರಿ, ಅದರ ಬಗ್ಗೆ ಮಾಹಿತಿ ಹೇಳಿಲ್ಲ. ಅದೇ ರೀತಿಯಾಗಿ ನಂಜುಂಡಪ್ಪ ವರದಿ ಪ್ರಕಾರ ಈಗ ಎಷ್ಟು ಹಣ ಬಿಡುಗಡೆ ಮಾಡುತ್ತೀರಿ ಎನ್ನುವ ಬಗ್ಗೆಯೂ ಕೂಡ ಹೇಳಿಲ್ಲ. ಹಣವೇ ಇಲ್ಲ. ಇವರೇನು ಮಾಡುತ್ತಾರೆ? ನಮ್ಮ Finance Minister ಚಿತ್ರದುರ್ಗದ ಮುರುಘರಾಜೇಂದ್ರ ಮಠಕ್ಕೆ ಹೋದರು. ರೇವಣ್ಣನವರಾದರೂ ರಸ್ತೆಗಳನ್ನಾದರೂ announce ಮಾಡುತ್ತಾರೇನೋ ಎಂದರೆ ಅವರು ಹೊಳೆನರಸೀಪುರಕ್ಕೆ ಹೋದರು. ನಾವು ಯಾರನ್ನು ಕೇಳೋಣ? ಈಗ ಇವರು, ನಾನು ಪುನ: Finnance Department ಅನ್ನು ಕೇಳಿಯೇ ಮಾಡುತ್ತೇನೆಂದು

ಹೇಳುತ್ತಾರೆ. ಏಕೆಂದರೆ, ಇದು ಸಮ್ಮಿಶ್ರ ಸರ್ಕಾರ. ಒಬ್ಬರಿಗೊಬ್ಬರನ್ನು ಕೇಳದೆಯೇ ಮಾಡುವ ಹಾಗೆಯೇ ಇಲ್ಲ. ಏಕೆಂದರೆ , ಒಬ್ಬರೇ ಒಂದೇ ಪಕ್ಷದವರು. ಮುಖ್ಯಮಂತ್ರಿ ಇದ್ದಿದ್ದರೆ ಮಾಡುತ್ತಿದ್ದರು. ಈಗ ಅವರನ್ನು ಕೇಳದೇ ಇವರು ಮಾಡುವ ಹಾಗಿಲ್ಲ. ಇವರನ್ನು ಕೇಳದೆ ಅವರು ಮಾಡುವ ಹಾಗಿಲ್ಲ. ಅಚಾನಕ್ ಏನಾದರೂ ಮಾಡಿದರೆ, ಪುನ: cabinet ನಲ್ಲಿ ಕುಸ್ತಿ ಆಗುತ್ತದೆ. ಅದಕ್ಕಾಗಿ ಅವರು ಹೇಳುವುದಕ್ಕೇ ಹೋಗಲಿಲ್ಲ. ನಂಜುಂಡಪ್ಪ ವರದಿ ಪ್ರಕಾರ ಎಷ್ಟು ಹಣ ಬಿಡುಗಡೆ ಮಾಡುತ್ತಾರೆ ಎಂದೂ ಹೇಳಲಿಲ್ಲ. ಹಿಪ್ಪರಗಿ ಬ್ಯಾರೇಜ್ ಬಗ್ಗೆ ಹೇಳಿದ್ದಾರೆ. ಏಕೆಂದರೆ, ಈಗಾಗಲೇ ಅಲ್ಲಿ ಜನರು 21 ಹಳ್ಳಿಗಳಲ್ಲಿ ಅದರಲ್ಲೂ ವಿಶೇಷವಾಗಿ ಹಿಂದುಳಿದಂಥವರು, ಬಡವರು, ರೈತರು, Scheduled Caste ಜನರ ಮನೆಗಳು ಹೋಗಿವೆ. ಆಮೇಲೆ ಅವರು ಹೊರ್ತಿ ಬಗ್ಗೆ ಹೇಳಲಿಲ್ಲ. ಏಕೆಂದರೆ, ಅಲ್ಲಿ ಸುಮಾರು 18 ದಿವಸಗಳಿಂದ ಉಪವಾಸ ಕುಳಿತಿದ್ದಾರೆ. ಅದರ ಬಗ್ಗೆ ಅವರು ಬಹುಶ: ಗಮನಹರಿಸಲಿಲ್ಲ. ಆಮೇಲೆ backlog ಹುದ್ದೆ ಬಗ್ಗೆ ಗುಲ್ಬರ್ಗಾದಲ್ಲಿ, ಬೆಳಗಾಂನಲ್ಲಿ ಜನರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಇವು ಸಣ್ಣ ಸಮಸ್ಯೆಗಳಿರಬಹುದು. ಆದರೆ, ಇವು ಈ ಭಾಗದ ಸಮಸ್ಯೆಗಳು. ಈ ಭಾಗದ ಸಮಸ್ಯೆಗಳಿಗೆ ಸ್ಪಂದಿಸದೇ ಹೋದರೆ ಖಂಡಿತವಾಗಿಯೂ ಇವು ಬೆಳೆದುಕೊಂಡು ಹೋಗಿ ಕೊನೆಗೆ ಇದು ಎಲ್ಲರನ್ನೂ ಕೂಡ ತಿಂದು ಕೊನೆಗೆ ಕಾನೂನು ಸುವ್ಯವಸ್ಥೆ ಕೆಡುವ ಸ್ಥಿತಿಗೆ ಬರುತ್ತದೆ. ಅದಕ್ಕಾಗಿ ಇದರ ಬಗ್ಗೆ ಚಿಂತನೆ ಮಾಡಬೇಕು. ಹಿಂದಿಯಲ್ಲಿ ಒಂದು ಗಾದೆ ಇದೆ, ಏನೆಂದರೆ, ಘಡೀ ಕಿ ಪುರಸೊತ್ ನಹೀ, ಧಮಡೀ ಕಿ ಆಮ್‌ದಾನಿ ನಹೀ. ಈ session ನಲ್ಲಿ ಏನಾಯಿತೆಂದರೆ, ಒಂದು ಗಳಿಗೆಯೂ ನಮಗೆ ಪುರಸೊತ್ತು ಇಲ್ಲ. ಎಲ್ಲರೂ ಓಡಾಡಿದ್ದೇ ಓಡಾಡಿದ್ದು. ರಾತ್ರಿ ಹನ್ನೊಂದೂವರೆ ತನಕ ಭಾಷಣ ಮಾಡಿದ್ದೇ ಮಾಡಿದ್ದು. ಆದರೆ, ಧಮಡೀ ಕಿ ಆಮ್‌ದಾನಿ ಅಂದರೆ ಹತ್ತು ಪೈಸೆಯೂ ಬಿಡುಗಡೆಯಾಗಿಲ್ಲ. ಬರಗಾಲಕ್ಕೂ ಬಿಡುಗಡೆಯಾಗಿಲ್ಲ. ನಂಜುಂಡಪ್ಪ ವರದಿಗೂ ಇಲ್ಲ ಅಥವಾ ವಿಶೇಷ ಅನುದಾನ ಕೊಡುತ್ತೇವೆಂದೂ ಹೇಳಲಿಲ್ಲ. ಏನೂ ಇಲ್ಲ. ಆದರೆ, ಪುರುಸೊತ್ತು ಇರಲಾರದ ಹಾಗೆ ಕೆಲಸ ಮಾಡಿದ್ದೇವೆ. ಧಮಡೀ ಕಿ ಆಮ್‌ದಾನಿ ನಹೀ, ಘಡೀ ಕಿ ಪುರುಸೊತ್ ನಹೀ, ಏನೇ ಆಗಲಿ, ಇದು ಕೊನೆಯ ದಿನದ ಅಧಿವೇಶನ. ಗಡಿ ಭಾಗದಲ್ಲಿ ನಡೆದು 5 ದಿವಸಗಳ ಕಾಲ ಕೂಡ ಕರ್ನಾಟಕ ರಾಜ್ಯದ ಶಾಸಕರು ಬಂದಿದ್ದಾರೆ. ತಾವೂ ಕೂಡ ಬಹಳ ಸುಗಮವಾಗಿ ಕಲಾಪವನ್ನು ನಡೆಸಿಕೊಂಡು ಹೋಗುತ್ತಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು, ಎಲ್ಲಾ ಮಂತ್ರಿಗಳೂ ಕೂಡ ಬಂದಿದ್ದಾರೆ. ಇದು ಒಂದು ಸಂತೋಷದ ಸುದ್ದಿ. ಆದರೆ, ಇದಕ್ಕೆ ಮೆರುಗು ಕೊಡುವ ಕೆಲಸವನ್ನು KLE Society ಯವರು, ಅದರ ಅಧ್ಯಕ್ಷರು, ನಮ್ಮೆಲ್ಲಾ ಶಾಸಕರು ಮಾಡಿದ್ದಾರೆ. ವಿಶೇಷವಾಗಿ, ಧರ್ಮಸಿಂಗ್‌ರವರು ಹೇಳಿದ ಹಾಗೆ, ನಾನು ಎಲ್ಲಾ ಶಾಸಕರ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ, ಈಗಾಗಲೇ ಅವರು ಅವರ ಕೈಲಾದಷ್ಟು, ಹೇಗೆಂದರೆ ನಮ್ಮ ಮನೆಗೆ ಬೀಗರು ಬಂದರೆನ್ನುವ ರೀತಿಯಲ್ಲಿ ಪ್ರತಿಯೊಬ್ಬ ಬೆಳಗಾಂ ಶಾಸಕರು ಮತ್ತು ಈ ಭಾಗದ ಶಾಸಕರು

ನೆಂಟರನ್ನು ಹೇಗೆ receive ಮಾಡಿಕೊಳ್ಳುತ್ತಾರೋ, ಹಾಗೆ ಅವರು ಕರೆದುಕೊಂಡು ಹೋಗಿ ಎಲ್ಲಾ ಕಡೆ ತೋರಿಸಿದ್ದಾರೆ ಇಂಥ ಅಪರೂಪದ ಘಟನೆ ಬಹುಶ: ಆ ಕಡೆ ಆಗುತ್ತಿತ್ತೋ ಇಲ್ಲವೋ ನಮಗೆ ಗೊತ್ತಿಲ್ಲ. ಇಲ್ಲಿ ಮಾತ್ರ ಆಗಿದೆ ಎನ್ನತಕ್ಕಂಥದ್ದು ತಮಗೂ ಕೂಡ ಮನವರಿಕೆಯಾಗಿದೆ. ಅಂಥ ಒಂದು ವಾತಾವರಣದಲ್ಲಿ ಹೋಗೋಣವೆಂದು ಹೇಳಿ ನಾನು ಹೆಚ್ಚಿನ ಮಾತನಾಡದೆ, protest ಮಾಡದೆ, ಎಲ್ಲವನ್ನೂ ನುಂಗಿ ಸುಮ್ಮನೆ ಕುಳಿತುಕೊಳ್ಳುತ್ತೇನೆ. ಧನ್ಯವಾದಗಳು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮುಖ್ಯವಾಗಿ ಎರಡು ಮೂರು ಸಲಹೆಗಳನ್ನು ಕೊಡಬಯಸುತ್ತೇನೆ. ನಾನು ಡಾ.ನಂಜುಂಡಪ್ಪ ವರದಿಯ ಬಗ್ಗೆ ಮಾತನಾಡುವಾಗ ಅವರು ಇರಲಿಲ್ಲ. ನಾನು ಮೊದಲನೆಯದಾಗಿ ಹೇಳಿದ್ದೇನೆಂದರೆ, ನಂಜುಂಡಪ್ಪ ವರದಿ ಭಗವದ್ಗೀತೆಯಾಗುವುದು ಬೇಡ. ಅದರ ಬದಲಿಗೆ, ನಂಜುಂಡಪ್ಪ ವರದಿಯನ್ನು ಕಾನೂನು ಬದ್ಧವಾಗಿ Mandatory ಆಗಿ ಜಾರಿಯಾಗಬೇಕಾದರೆ, ಸದನದಲ್ಲಿ ಒಂದು ಮಸೂದೆಯನ್ನು ತರಬೇಕು. ಆ ನಂಜುಂಡಪ್ಪ ವರದಿಯಲ್ಲಿ ಎರಡು ಅಂಶಗಳನ್ನು ಗುರುತಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ದಯವಿಟ್ಟು ಗಮನ ಕೊಡಿ.

ಅಧ್ಯಕ್ಷರು : ವಿಧೇಯಕವನ್ನು ತರುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅಲ್ಲ. ಅದರಲ್ಲಿ ಎರಡು ಅಂಶಗಳು ಇವೆ. ಒಂದು ಹಿಂದುಳಿದಂಥ ಪ್ರದೇಶಗಳು, ಮತ್ತೊಂದು ಅತೀ ಹಿಂದುಳಿದಂಥ ಪ್ರದೇಶಗಳು. ಅತೀ ಹಿಂದುಳಿದಂಥ 35 ತಾಲ್ಲೂಕುಗಳನ್ನು ಗುರುತಿಸಿದ್ದಾರೆ ಮತ್ತು ಹಿಂದುಳಿದಂಥ ಪ್ರದೇಶಗಳನ್ನು ಗುರುತಿಸಿದ್ದಾರೆ. ಹಾಗಾಗಿ ಅತೀ ಹಿಂದುಳಿದಂಥ ಪ್ರದೇಶಗಳಿಗೆ ಪ್ರತ್ಯೇಕವಾದಂಥ ಅನುದಾನ ಕೊಡತಕ್ಕಂಥ ಬಿಲ್‌ಅನ್ನು ತಂದು, ಕಾನೂನನ್ನು ತರತಕ್ಕಂಥದ್ದು ಮತ್ತು ಹಿಂದುಳಿದ ಪ್ರದೇಶಗಳಿಗೆ ಬೇಕಾಗಿರತಕ್ಕಂಥ ಕಾನೂನು ತರಕ್ಕಂಥದ್ದು. ಎರಡನೇಯದಾಗಿ, ಬಹಳ ಮುಖ್ಯವಾಗಿ, ನಿರ್ದಿಷ್ಟವಾಗಿ ಯೋಜನೆಯನ್ನು ತಯಾರು ಮಾಡಿ, ಒಂದು ವರ್ಷಕ್ಕೆ ನಂಜುಂಡಪ್ಪ ವರದಿಯನ್ನು ಜಾರಿಮಾಡಲಿಕ್ಕೆ ಇಷ್ಟು ಹಣವನ್ನು ಬಿಡುಗಡೆ ಮಾಡಬೇಕು ಎನ್ನುವಂಥ ಮಸೂದೆಯನ್ನು ಜಾರಿಗೆ ತರಬೇಕೆನ್ನುವಂಥ ಅಂಶವನ್ನು ನಾನು ತಂದಿರತಕ್ಕಂಥದ್ದು. ಅದಕ್ಕೆ ಮುಖ್ಯಮಂತ್ರಿಗಳು ಒಪ್ಪಿದ್ದಾರೆ. ಅದಕ್ಕೆ ನಾನು ಅವರಿಗೆ ಧನ್ಯವಾದವನ್ನು ಅರ್ಪಿಸುತ್ತಿದ್ದೇನೆ. ಎರಡನೆಯ ಅಂಶ ನಾನು ಹೇಳಿದ್ದು, ಈ ಹೈದರಾಬಾದ್, ಮತ್ತು ಬಾಂಬೆ–ಕರ್ನಾಟಕ ಹಿಂದುಳಿಯುವುದಕ್ಕೆ ಬಹಳ ಪ್ರಮುಖವಾದ ಅಂಶವಾಗಿರತಕ್ಕಂಥ ಈ ಭೂ ಸಂಬಂಧಗಳ ಬದಲಾವಣೆ. ಏಕೆಂದರೆ ಇಲ್ಲಿ ಪಾಳೇಗಾರಿ ಮೌಲ್ಯಗಳಿವೆ. ಪಾಳೇಗಾರಿ ಮೌಲ್ಯ ಹಾಗೂ ಭೂ ಮಾಲಕ ವ್ಯವಸ್ಥೆ ಇದೆ. ಆ ಭೂ ಮಾಲಕ ವ್ಯವಸ್ಥೆ ನಾಶವಾಗದೇ ಇದ್ದಂಥ ಕಾರಣಕ್ಕೋಸ್ಕರ ಇಲ್ಲಿ ಮುಖ್ಯವಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿಯುವುದಕ್ಕೆ ಕಾರಣವಾಗಿದೆ. ದೇವರಾಜ ಅರಸುರವರು ತಂದಂಥ ಭೂ ಸುಧಾರಣಾ ಕಾನೂನು ನಮ್ಮ ಹಳೇ ಮೈಸೂರು ಭಾಗದಲ್ಲಿ ಜಾರಿಯಾದ ಹಾಗೆ ಇಲ್ಲಿ ಜಾರಿಯಾಗಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಆಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಆಗಿಲ್ಲ. ನಾನು ಲೆಕ್ಕ ಕೊಡುತ್ತೇನೆ. ಯಾರ್‍ಯಾರ ಹತ್ತಿರ ಎಷ್ಟೆಷ್ಟು ಎಕರೆ ಜಮೀನಿದೆ ಎಂದು ಲೆಕ್ಕ ಕೊಡುತ್ತೇನೆ.

ಶ್ರೀ ವಿ. ಸೋಮಣ್ಣ : ಕ್ಲಾರಿಫಿಕೇಷನ್ ಕೇಳಿ.

ಅಧ್ಯಕ್ಷರು : ಆಯಿತು ಮುಗಿಸಿ Clarification ಕೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಾಗಾಗಿ, ಭೂ ಸಂಬಂಧಗಳು ಬದಲಾವಣೆ ಆಗತಕ್ಕಂಥ ಪರಿಣಾಮಕಾರಿಯಾದಂಥ ಕಾನೂನನ್ನು ಜಾರಿ ಮಾಡಬೇಕೆನ್ನುವಂಥದ್ದು ಒಂದು ಅಂಶ. ಶೈಕ್ಷಣಿಕ ಅಭಿವೃದ್ಧಿಗೆ ಬೇಕಾಗಿರತಕ್ಕಂಥ ಮತ್ತು ಉದ್ಯೋಗಗಳನ್ನು ಸೃಷ್ಟಿ ಮಾಡತಕ್ಕಂಥದ್ದು. ಈ ಭಾಗದಲ್ಲಿ ಉದ್ಯೋಗಳನ್ನು ಸೃಷ್ಟಿ ಮಾಡತತಕ್ಕಂಥ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿ ಮತ್ತು ಶೈಕ್ಷಣಿಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸತಕ್ಕಂಥ ಈ ಎರಡು ಕೆಲಸಗಳು ಬಹಳ ಪ್ರಮುಖವಾಗಿ ಆಗಬೇಕಾದಂಥದ್ದು. ಅದಕ್ಕೆ ನನ್ನ ಸಲಹೆ ಏನೆಂದರೆ, ಆದಷ್ಟು ಹೆಚ್ಚಿನ ಕಾರ್ಖಾನೆಗಳು ಈ ಭಾಗಕ್ಕೆ ಬರುವ ರೀತಿಯಲ್ಲಿ ಪ್ರಯತ್ನ ಮಾಡಬೇಕು. ಅವರಿಗೆ ಬೇಕಾದಂಥ infrastructure facilities ಅನ್ನು ಇಲ್ಲಿ ಕೊಟ್ಟರೆ ಅವರು ಇಲ್ಲಿ ಹೆಚ್ಚು ಬರುವುದಕ್ಕೆ ಸಾಧ್ಯವಾಗುತ್ತದೆ. ನೀವು ಈಗಾಗಲೇ ಹುಬ್ಬಳ್ಳಿಯನ್ನು ಗುರುತಿಸಿದ್ದೀರಿ. ಅದೇ ರೀತಿಯಲ್ಲಿ ಬೆಳಗಾಂ ಅನ್ನು ಗುರುತಿಸಿ. ಗುಲ್ಬರ್ಗಾ, ಬಿಜಾಪುರ, ಈ ಪ್ರದೇಶಗಳನ್ನು ಗುರುತಿಸಿ ಕೈಗಾರಿಕಾಭಿವೃದ್ಧಿಯನ್ನು ಮಾಡುವುದರ ಮುಖಾಂತರ ಅಲ್ಲಿ ಅಭಿವೃದ್ಧಿಯನ್ನು ತರಲಿಕ್ಕೆ ಸಾಧ್ಯವಾಗುತ್ತದೆ.

ಇನ್ನು ಬರಗಾಲಕ್ಕೆ ಸಂಬಂಧಪಟ್ಟಂತೆ ನಿರ್ದಿಷ್ಟವಾಗಿ ಹಣವನ್ನು ಬಿಡುಗಡೆ ಮಾಡುವುದಕ್ಕೆ, ಎಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿಲ್ಲ. ನಾನು ಅವರು ಇಲ್ಲೇ ಇರತಕ್ಕಂಥ ಸಂದರ್ಭದಲ್ಲಿ ಹೇಳಿದೆ, ಕೇಂದ್ರ ಸರ್ಕಾರ 452 ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಿದೆ. ಅದರಲ್ಲಿ 109 ಕೋಟಿ ರೂಪಾಯಿಗಳು ನೀವು ಬಿಡುಗಡೆ ಮಾಡೇ ಇಲ್ಲ. ಅದು ನಿಮ್ಮ ಹತ್ತಿರವೇ ಇದೆ. ಅಂದರೆ ರಾಜ್ಯ ಸರ್ಕಾರ ಏನನ್ನೂ ಕೊಟ್ಟಿಲ್ಲವೆಂದು ಅದರ ಅರ್ಥ. ಎರಡನೆಯದು, ಪ್ರತಿಯೊಂದು ತಾಲ್ಲೂಕಿಗೆ ಒಂದೆರಡು ಕೋಟಿ ರೂಪಾಯಿಯನ್ನಾದರೂ ತಕ್ಷಣ ಬಿಡುಗಡೆ ಮಾಡಬೇಕು. ಇಲ್ಲವೆಂದರೆ ಬರಗಾಲವನ್ನು ಎದುರಿಸಲು ಸಾಧ್ಯವಿಲ್ಲ. ದನಕರುಗಳಿಗೆ ಮೇವು, ಕುಡಿಯುವುದಕ್ಕೆ ನೀರು, ಕೃಷಿ ಕಾರ್ಮಿಕರಿಗೆ ಕೆಲಸ ಸಿಗಬೇಕು. ಮತ್ತು ರೈತರಿಗೆ ಬೆಳೆಹಾನಿಯಾಗಿರತಕ್ಕಂಥದ್ದು, ರೈತರಿಗೆ ಬೆಳೆ ನಷ್ಟ ಏನು ಆಗಿದೆ. ಆಂಧ್ರ ಪ್ರದೇಶದಲ್ಲಿ ಏನು ಒಂದು ಹೆಕ್ಟೇರ್‌ಗೆ 3,000 ರೂಪಾಯಿಗಳನ್ನು ಕೊಡುತ್ತಿದ್ದಾರೆ, ಆ ರೀತಿಯಲ್ಲಿ ಕರ್ನಾಟಕ ರಾಜ್ಯದ ರೈತರಿಗೆ ಬೆಳೆನಷ್ಟವಾಗಿರುವುದಕ್ಕೆ ಒಂದು ಹೆಕ್ಟೇರ್‌ಗೆ 3,000 ರೂಪಾಯಿಗಳನ್ನು ಕೊಡಬೇಕು ಎಂದು ಹೇಳಿ ನಾನು ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಅವರು ಘೋಷಣೆ ಮಾಡಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಕಿಣೇಕರ್‌ರವರೆ, ಮಾತನಾಡಿ.

ಶ್ರೀ ಮನೋಹರ್ ಕಲ್ಲಪ್ಪ ಕಿಣೇಕರ್ : ಮಾನ್ಯ ಅಧ್ಯಕ್ಷರೆ, I want clarification.

ಶ್ರೀ ಎಂ.ಎಸ್. ಯಾದವಾಡ್ : ಕೀಣೇಕರ್‌ರವರೇ ಕನ್ನಡದಲ್ಲಿ ಮಾತನಾಡಿರಿ.

ಶ್ರೀ ನೆ.ಲ. ನರೇಂದ್ರ ಬಾಬು: ಅವರು ಕನ್ನಡದಲ್ಲಿ ಮಾತನಾಡಲಿ.

ಅಧ್ಯಕ್ಷರು : ಕುಳಿತುಕೊಳ್ಳಿ ಅವರೇನು clarification ಕೇಳುತ್ತಿದ್ದಾರೆ. ಕೊನೆಯಲ್ಲಿದ್ದೇವೆ, ಅಡ್ಡ ಮಾತನಾಡುವುದು ಬೇಡ, ಏನಾದರೂ clarification ಇದ್ದರೆ ಕೇಳಿ. He is also member of this House. ಇರಲಿ ಬಿಡಿ ನರೇಂದ್ರಬಾಬುರವರೇ.

(ಅಡಚಣೆ)

ಶ್ರೀ ವಿ. ಸೋಮಣ್ಣ : ಇಂಗ್ಲೀಷ್ ನಲ್ಲಿ ಬೇಕಾದರೆ ಅವರು ಮಾತನಾಡಲಿ, No. Marathi,.... ದಯಮಾಡಿ ಅವರು ಬೇಕಾದರೆ ಕನ್ನಡದಲ್ಲಿ ಮಾತನಾಡಲಿ, ಇಲ್ಲ ಅಂದರೆ ಯಾವುದೇ ಕಾರಣಕ್ಕೆ ಅವರು ಮಾರಾಠಿ ಯಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ಅವರು ಮರಾಠಿ ಮಾತನಾಡುತ್ತಾರೆಂದರೆ ಅವರು ಮಹಾರಾಷ್ಟ್ರಕ್ಕೆ ಹೋಗಲಿ. ನೀವು ಒಳ್ಳೆಯ ಕೆಲಸ ಮಾಡಿದಿರಿ. ಈಗ ಕೊನೆಯಲ್ಲಿ ಅವರಿಗೆ ಅವಕಾಶ ಕೊಟ್ಟುಬಿಟ್ಟಿರಿ. ಅವರಿಗೆ ಏಕೆ ಅವಕಾಶ ಕೊಟ್ಟಿರಿ?

ಶ್ರೀ ನೆ.ಲ. ನರೇಂದ್ರಬಾಬು : ಅವರಿಗೆ ಕನ್ನಡ ಬರುತ್ತದೆ, ನಾಟಕವಾಡುತ್ತಾರೆ.

ಶ್ರೀ ವಿ. ಸೋಮಣ್ಣ : ಅವರಿಗೆ ಕನ್ನಡ ಬರುತ್ತದೆ, ಕನ್ನಡ First Class ಆಗಿ ಮಾತನಾಡುತ್ತಾರೆ, ನಮ್ಮ ಜೊತೆಯಲ್ಲಿ ಮಾತನಾಡಿದ್ದಾರೆ. ನಿನ್ನೆ ಮಧ್ಯಾಹ್ನ ಸುಮಾರು ಹೊತ್ತು ಕನ್ನಡದಲ್ಲಿ ಮಾತನಾಡಿದ್ದಾರೆ. ಕನ್ನಡದಲ್ಲಿ ಮಾತನಾಡಿರಿ. ದಯವಿಟ್ಟು ಕನ್ನಡದಲ್ಲಿ ಮಾತನಾಡಿ.

(ಅಡಚಣೆ)

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ.

Sri. MANOHAR KALAPPA KINEKAR : I am having my rights, Why are you denying my rights?

ಶ್ರೀ ನೆ.ಲ. ನರೇಂದ್ರ ಬಾಬು : ಎಲ್ಲಾ ಮಾತನಾಡುತ್ತಾರೆ.

(ಅಡಚಣೆ)

ಶ್ರೀ ನೆ.ಲ. ನರೇಂದ್ರ ಬಾಬು : ಇಲ್ಲ ಇಲ್ಲ ಕನ್ನಡದಲ್ಲಿ ಮಾತನಾಡಬೇಕು.

ಶ್ರೀ ಮನೋಹರ ಕಲ್ಲಪ್ಪ ಕಿಣೇಕರ್ : ಸರ್,......

ಅಧ್ಯಕ್ಷರು : ರೀ Mr. Kinekar, ನೀವು ಕೇಳುವುದಿದ್ದರೆ English ನಲ್ಲಿ ಕೇಳಿ. ಕನ್ನಡದಲ್ಲಿ ಕೇಳುವುದಕ್ಕೆ ಇಷ್ಟವಿಲ್ಲದಿದ್ದರೆ English ನಲ್ಲಿ ಕೇಳಿ. ಈ ಮನೆಯ ಸದಸ್ಯರು ಎಂದು ಅವಕಾಶ ಕೊಟ್ಟರೆ ಏನಿದು?

Sri. MANOHAR KALAPPA KINEKAR : Sir, Last week, Mr. M.P. Prakash has made one statement in this Session saying that they will allow M.E.S. M.L.As. to speak in Marathi, Whether it is true or false?

MR. SPEAKER : No. No.

Sri. MANOHAR KALAPPA KINEKAR : He has made a statement. It has appeared in all papers.

MR. SPEAKER : No. No. How can he give permission? I have to give permission. You please speak in English and ask your clarification.

ಶ್ರೀ ಸಿ.ಸಿ. ಪಾಟೀಲ್ : ಅಧ್ಯಕ್ಷರೆ, ಅವರಿಗೆ ಕನ್ನಡದಲ್ಲಿ ಮಾತನಾಡಲಿಕ್ಕೆ ಹೇಳಿ. ಅವರಿಗೆ ಕನ್ನಡದಲ್ಲಿ ಉತ್ತರ ಕೊಡಿ.

ಶ್ರೀ ವಿ. ಸೋಮಣ್ಣ : ದಯಮಾಡಿ ಅವರು ಕನ್ನಡದಲ್ಲಿ ಮಾತನಾಡಲಿ.

Sri. MANOHAR KALAPPA KINEKAR : At present, I am talking in English only. I am asking the same clarification from Mr. M.P. Prakash because it has appeared in all Marathi papers. Let him explain.

ಶ್ರೀ ಸಿ.ಸಿ. ಪಾಟೀಲ್ : ದಯವಿಟ್ಟು ಉತ್ತರವನ್ನು ಅವರಿಗೆ ಕನ್ನಡದಲ್ಲಿ ಕೊಡಬೇಕು.

Mr. MANOHAR KALAPPA KINEKAR : Sir, if he denies, I will speak in Engilish only. But, it has appeared in all papers. People are asking me why are you talking in English, why are you not talking in Marathi? Let him explain. At present, I am talking in English only.

MR. Speaker : Alright see that this, this tha, don't ask all that. You please ask your clarifications in English.

ಶ್ರೀ ಸಿ.ಸಿ. ಪಾಟೀಲ್ : ಅಧ್ಯಕ್ಷರೆ, ಅವರಿಗೆ ಕನ್ನಡದಲ್ಲಿ ಉತ್ತರ ಕೊಡಿ. ಕನ್ನಡದಲ್ಲಿ ಹೇಳಿ. ನೀವೇಕೆ Englishನಲ್ಲಿ ಹೇಳುತ್ತೀರಿ?

Sri. MANOHAR KALAPPA KINEKAR : I am asking in English only. But, that statement has appeared in the paper. That is why I am asking.

MR. SPEAKER : ಆಯಿತು ಕುಳಿತುಕೊಳ್ಳಿ. Sit down.

ಶ್ರೀ ಸಿ.ಸಿ. ಪಾಟೀಲ್ : ಹಾಗೆ ಕನ್ನಡದಲ್ಲಿ ಹೇಳಿ.

MR. MONOHAR KALAPPA KINEKAR : No, No this is not good.

ಅಧ್ಯಕ್ಷರು : ನೀವು ಈ ರೀತಿ ಮಾಡುವುದು ಸರಿಯಿಲ್ಲ. ಏನೋ ಹೋಗಲಿ ಇಲ್ಲಿ ಮಾಡಿದ್ದಾರೆ clarification ಕೇಳಲಿ ಅವರ ಸಮಸ್ಯೆ ಇತ್ಯರ್ಥ ಪಡಿಸಿಕೊಳ್ಳಿ ಎಂದರೆ ನೀವು ತಲೆಹರಟೆ ಮಾಡುತ್ತೀದ್ದೀರಿ. No.

MR. MANOHAR KALAPPA KINEKAR : O.K. I will stop that. Our Hon'ble C.M. has told us so many times that he will win the minds of marathi people. What has he given in this session on Marathi people? Every body is telling that this is an historic session, what is historic session? What Belgaum people have got out of this session? Whether they will get drinking water daily? Whether they will get food raods? What is the benefit Belgau,m people and people surrounding Belgaum will get by this session? They have not clarified anything. One more thing, they had told that Mahajan Commission award should be implemented. But, that report has already been rejected by the Central Government. So there is no question of implementation.

MR. SPEAKER : Who has rejected?

MR. MANOHAR KALAPPA KINEKAR : Yes Sir, I will tell you. Prime Minister Mr. Rajiv Gandhi had written a letter.

SRI. A. KRISHNAPPA : Dont' talk lies here.

MR. SPEAKER : Dont' talk rubbish.

SRI MANOHAR KALAPPA KINEKAR : I am having the proof. I am having that letter. Mr. Ramesh Kudachi, MLA has told that Belgaum has not developed because of M.E.S members who were elected so many times. What about North Karnataka? We are not there. Why you have not developed North Karnataka you are only blaming M.E.s people. Why your North Karnataka has not developed? Regarding education, so many High schools were given to every M.L.As. I has requested to sanction only three High Schools. One Urdu, one Marathi plus Kannada and one Kannada. But, not even a single High school has been given to me. This a step-motherly treatment given by Karnataka Government to us. All these problems are here. So, if you think that we will be happy, here. We will never be happy here. We are trying to go to Maharastra. One day, definitely we will go.

(ಅಡಚಣೆ)

ಅಧ್ಯಕ್ಷರು : ಮನೋಹರ ಕಿಣೇಕರ್‌ರವರೆ, ತಾವು ಕುಳಿತುಕೊಳ್ಳಿ. ತಾವು ಕುಳಿತುಕೊಳ್ಳಿ, ಈಗ ತಮ್ಮ ಮಾತು ಮುಗಿಯಿತು ಈಗ ರಮೇಶ್ ಕುಡುಚಿಯವರು ಮಾತನಾಡಿ.

ಶ್ರೀ ರಮೇಶ್ ಲಕ್ಷ್ಮಣ್ ಕುಡಚಿ (ಬೆಳಗಾವಿ) : ಮಾನ್ಯ ಅಧ್ಯಕ್ಷರೆ, ನಾನು ಹೇಳಿದ್ದೇನೆಂದು ಉಚಗಾಂವ್ ಶಾಸಕರು ಹೇಳುತ್ತಿದ್ದಾರೆ. ಇಲ್ಲಿರತಕ್ಕಂಥ ಬೆಳಗಾಂ ಜನರು ಹೇಳುತ್ತಿದ್ದಾರೆ. 1956ನೇ ಇಸವಿಯಲ್ಲಿ ಭಾಷಾವಾರು ಪ್ರಾಂತ್ಯ ರಚನೆ ಆಗಿರುತ್ತದೆ. 1999 ರಿಂದ ಎಂಇಎಸ್ ಶಾಸಕರು ಬಂದಿದ್ದಾರೆ. ಈ ಬೆಳಗಾವಿಯಲ್ಲದೆ ಉಳಿದ ಭಾಗದ ಅಭಿವೃದ್ಧಿ ಗೋಸ್ಕರ ಇವರೇನೂ ಮಾಡಿಲ್ಲ. ಮತ್ತೆ ಮಹಾಜನ್ ವರದಿ ಪ್ರಕಾರ ಮನೋಹರ್ ಕಿಣೇಕರ್‌ರವರು ಪ್ರತಿನಿಧಿಸತಕ್ಕಂಥ ಉಚಗಾಂವ್ ಪ್ರದೇಶ ಮಹಾರಾಷ್ಟ್ರಕ್ಕೆ ಹೋಗಬೇಕು. ನಾವೂ ಕೂಡ ಮಹಾಜನ್ ವರದಿಯನ್ನೇ ಬೇಡುತ್ತಿದ್ದೇವೆ. ನಾನು ಕೇಳುವುದೇನೆಂದರೆ ಮಹಾಜನ್ ವರದಿಯನ್ನು ಈ ವಿಧಾನಮಂಡಲ ಅಂಗೀಕರಿಸಿದೆ. ಖಾನಾಪುರ ಮತ್ತು ಉಚಗಾಂವ್ ಕೂಡ ಮಹಾಜನ್ ವರದಿ ಪ್ರಕಾರ ಮಹಾರಾಷ್ಟ್ರಕ್ಕೆ ಹೋಗುತ್ತದೆ. ಆದ್ದರಿಂದ ಮಾನ್ಯ ಮನೋಹರ್ ಕಿಣೇಕರ್‌ರವರು ಮತ್ತು ಮಾನ್ಯ ದಿಗಂಬರ್ ಪಾಟೀಲ್‌ರವರು ಬೆಳಗಾಂ ಬಗ್ಗೆ ಮಾತನಾಡತಕ್ಕಂಥ ಹಕ್ಕು ಏನಿದೆ ಹೇಳಿ? ಆದ್ದರಿಂದ ನಾನು ಹೇಳುವುದೇನೆಂದರೆ, 1956 ರಿಂದ ಇಲ್ಲಿಯವರೆಗೆ ಬೆಳಗಾವಿ ನಗರಕ್ಕೆ ಸಿಗಬೇಕಾಗಿರತಕ್ಕಂಥ ಮೂಲಭೂತ ಸೌಕರ್ಯಗಳಿಗೆ ಎಂಇಎಸ್‌ನವರೇ ಕಾರಣಕರ್ತರಾಗಿದ್ದಾರೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಈ ಬೆಳಗಾವಿಯ ಬಗ್ಗೆ ಇವತ್ತಿನ ದಿವಸ ಇಷ್ಟೊಂದು ಕನಿಕರ ಏಕೆ? ಇವರುಗಳು ಪ್ರತಿನಿಧಿಸುತ್ತಿರುವ ಕ್ಷೇತ್ರಗಳು ಮಹಾಜನ್ ವರದಿ ಪ್ರಕಾರ ಇವತ್ತು ಮಹಾರಾಷ್ಟ್ರಕ್ಕೆ ಹೋಗಿದೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಈ ಸರ್ಕಾರದ ಬಗ್ಗೆ ಮತ್ತು ರಾಜ್ಯ ಬಗ್ಗೆ ಮಾತನಾಡತಕ್ಕಂಥ ನೈತಿಕ ಹಕ್ಕು ಇವರಿಗೆ ಇಲ್ಲ. ಮತ್ತೆ ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಈ ಬೆಳಗಾವಿ ನಗರದಲ್ಲಿ ನಡೆಯುತ್ತಿರುವ ಈ ಅಧಿವೇಶನದಿಂದ ಬೆಳಗಾವಿ ನಗರ ಮತ್ತು ಇಡೀ ಬೆಳಗಾವಿ ಜಿಲ್ಲೆ ಅಭಿವೃದ್ಧಿ ಯಾಗುವುದಿದೆ. ಆದ್ದರಿಂದ ನಾನು ಅವರಿಗೆ ಹೇಳುವುದೇನೆಂದರೆ, ಮಹಾಜನ್ ವರದಿಯನ್ನು ಈ ವಿಧಾನಮಂಡಲದಲ್ಲಿ ಅಂಗೀಕರಿಸಿದ ಹಾಗೆ ನೀವು ಪ್ರತಿನಿಧಿಸತಕ್ಕಂಥ ಕ್ಷೇತ್ರ ಮಹಾಜನ್ ವರದಿ ಪ್ರಕಾರ ಇವತ್ತು ಮಹಾರಾಷ್ಟ್ರಕ್ಕೆ ಹೋಗಬೇಕಾಗಿದೆ. ಆದ್ದರಿಂದ, ಬೆಳಗಾವಿ ಬಗ್ಗೆ ಮಾತನಾಡತಕ್ಕಂಥ ನೈತಿಕ ಹಕ್ಕು ಇವರಿಗೆ ಇಲ್ಲ.

ಅಧ್ಯಕ್ಷರು : ಆಯಿತು, ತಾವು ಕುಳಿತುಕೊಳ್ಳಿ

ಶ್ರೀ ಎ. ಕೃಷ್ಣಪ್ಪ (ವರ್ತೂರು) : ಮಾನ್ಯ ಅಧ್ಯಕ್ಷರೆ, ಒಂದೆರೆಡು ವಿಷಯಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ

ಮುಖ್ಯ ಮಂತ್ರಿಗಳು ಮಾತನಾಡತಕ್ಕಂಥ ಸಂದರ್ಭದಲ್ಲಿ, ಶುಗರ್‌ಗೆ ಸಂಬಂಧಪಟ್ಟಂಥ ಸಮಸ್ಯೆಗಳ ವಿಚಾರದಲ್ಲಿ ಮ್ಯಾನೇಜ್‌ಮೆಂಟ್ ಜೊತೆ ಸಭೆಗಳು ನಡೆದಿಲ್ಲವೆಂದು ಹೇಳಿದರು. ಆದರೆ, ನಾನು ಈ ಇಲಾಖೆಗಳನ್ನು ನೋಡಿಕೊಳ್ಳುವಾಗ ಮುಖ್ಯಮಂತ್ರಿಯವರೇ ಪ್ರಿಸೈಡ್ ಮಾಡಿದಂಥ ಎಂಟು ಸಭೆಗಳನ್ನು ನಡೆಸಿ ರೇಟ್‌ಗಳನ್ನು ಸೆಟ್ಲ್ ಮಾಡಿದ್ದೇವೆ. ಮತ್ತೆ ಎರಡನೇ ವಿಚಾರ, ಏನೆಂದರೆ, ಬರಗಾಲ ಬಂದಾಗ ರೈತರ ಮತ್ತು ಆಡಳಿತ ವರ್ಗದ ಹಿತದೃಷ್ಟಿಯಿಂದ ಸರ್ಕಾರ ಟ್ಯಾಕ್ಸ್ Excemption ಮಾಡಿರತಕ್ಕಂಥ ಮಾಹಿತಿಗಳ ಸುತ್ತೋಲೆಗಳು ಕಡತದಲ್ಲಿವೆ ಎಂದು ನಾನು ಭಾವಿಸುತ್ತೇನೆ. ಹಾಗೆಯೇ, ಶುಗರ್ ಸೆಕ್ಟೆರ್‌ಗೆ ಸಂಬಂಧಪಟ್ಟಂತೆ ಭಾರತ ಸರ್ಕಾರದ ಗಮನ ಸೆಳೆಯುವುದಕ್ಕೆ ನಾವು ಮೂರು ಸೆಮಿನಾರ್ ಗಳನ್ನು ಮಾಡಿದ್ದೇವೆ. ಈ ಸೆಮಿನಾರ್‌ಗಳನ್ನು ದೆಹಲಿ, ಮೈಸೂರು ಮತ್ತು ಬೆಂಗಳೂರಿನಲ್ಲಿ ನಡೆಸಲಾಗಿದೆ. ಈ ಮೂರು ಸೆಮಿನಾರ್‌ಗಳಲ್ಲಿ ರೈತರು ಮತ್ತು ಎಲ್ಲಾ ಸಂಘಗಳು ಹಾಗೂ ಎಲ್ಲಾ ಮ್ಯಾನೇಜ್‌ಮೆಂಟ್‌ರವರನ್ನು ಸೇರಿ ಮಾಡಿದ ಮೇಲೆ ಮತ್ತೆ ಎಕ್ಸ್ ಪರ್ಟ್ಸ್ ಒಪೀನಿಯನ್ ತೆಗೆದುಕೊಂಡು ಯಾವ ರೀತಿಯಾಗಿ ಶುಗರ್ ಡೆವಲಪ್‌ಮೆಂಟ್ ಫಂಡ್‌ನಿಂದ ರೈತರಿಗೆ ಮತ್ತು ಕಾರ್ಖಾನೆಗಳಿಗೆ ಸಹಾಯ ಮಾಡಬಹುದೆಂಬ ಸಲಹೆ ಒಳಗೊಂಡ ಒಂದು ವರದಿಯನ್ನೂ ಸಹ ಕೊಟ್ಟಿದ್ದೇವೆ. ಒಂದು ವಿಷಯ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾಚಿಕೆ ಮತ್ತು ಸಂದರ್ಭದಲ್ಲಿ ಸರಿ ಇಲ್ಲವೇನೋ ಎಂದು ಅನ್ನಿಸುತ್ತದೆ. ಅದೇನೆಂದರೆ, ಬೆಂಗಳೂರಿನ ಸಮಸ್ಯೆಗಳು ಬೆಳಗಾಂನಲ್ಲಿ ಕೇಳುವುದು ಬೇಡವೆಂದು ಕಳೆದ ಐದು ದಿನಗಳ ಕಾಲ ಸುಮ್ಮನೇ ಇದ್ದೆವು. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಬೆಂಗಳೂರಿನ ಪೂರ್ವ ತಾಲ್ಲೂಕಿಗೆ ಸಂಬಂಧಪಟ್ಟಂತೆ ಸ್ಕೇರ್‌ಸಿಟಿ ಗ್ರ್ಯಾಂಟ್ಸ್‌ನ್ನು ಬಿಟ್ಟುಬಿಟ್ಟಿದ್ದಾರೆಂದು ಸರ್ಕಾರದ ಗಮನಕ್ಕೆ ತರು ತ್ತಿದ್ದೇನೆ. ಅಲ್ಲಿ ಜನರು ಇದ್ದಾರೆ, ಮತ್ತೆ ಅವರಿಗೆ ನೀರು ಮತ್ತು ರಸ್ತೆ ಕೂಡ ಬೇಕಾಗಿದೆ. ಹಾಗೆಯೇ, ಆನೇಕಲ್ ಬಿದರಹಳ್ಳಿ ಮತ್ತು ಯಲಹಂಕ ಕ್ಷೇತ್ರಗಳಲ್ಲಿ ಇವತ್ತೂ ಕೂಡ ರೈತಾಪಿ ಜನರು ಇದ್ದಾರೆ. ಆದ್ದರಿಂದ ಅದೇನಾದರೂ ಬಿಟ್ಟುಹೋಗಿದ್ದರೆ, ದಯವಿಟ್ಟು ಸೇರಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಐಟಿ, ಬಿಟಿಯಿಂದ ಸುಮಾರು 20 ಸಾವಿರ ಕೋಟಿ ರೂಪಾಯಿಗಳಷ್ಟು ಆದಾಯವನ್ನು ಭಾರತ ಮತ್ತು ಕರ್ನಾಟಕ ಸರ್ಕಾರಕ್ಕೆ ಬರುತ್ತಿದೆ. ಆದ್ದರಿಂದ ಇಲ್ಲಿ ಸಮತೋಲನಕ್ಕೋಸ್ಕರ ಏನು ಹೋರಾಟ ನಡೆಯುತ್ತಿದೆ ಅದಕ್ಕಿಂತ ಅದ್ವಾನದ ಪರಿಸ್ಥಿತಿ ಅಲ್ಲಿ ಸೃಷ್ಟಿಯಾಗಿದೆ. ಇದರ ಬಗೆ ಹಲವಾರು ಬಾರಿ ಮಾನ. ಮುಖ.ಮಂತಿ.ಯವರಲಿ ಪಾರ್ಥನೆ

ಮಾಡಿದ್ದೇವೆ. ಆದರೆ, ಅವರು ಅದರ ಬಗ್ಗೆ ಗಮನ ಹರಿಸುತ್ತಿಲ್ಲ, ಆದ್ದರಿಂದ ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದೇನೆಂದರೆ, ನೀರು ಮತ್ತು ರಸ್ತೆಗಾಗಿ ಪ್ರತ್ಯೇಕವಾಗಿ ಆರ್ಥಿಕ ಸಹಾಯವನ್ನು ನೀಡುವ ಬಗ್ಗೆ ಇಲ್ಲಿ ಘೋಷಣೆ ಮಾಡಿ ಬೆಂಗಳೂರಿನ ಜನರಿಗೆ ಸಂತೋಷವನ್ನು ಉಂಟುಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್.ಎಸ್. ಬೋಸರಾಜ್ : ಮಾನ್ಯ ಅಧ್ಯಕ್ಷರೆ, ರಾಯಚೂರು ಜಿಲ್ಲೆಯವರಿಗೆ ತಾವು ಅವಕಾಶವನ್ನೇ ಕೊಟ್ಟಿಲ್ಲ. ಇವತ್ತು ಕೊನೆಯ ದಿವಸ ದಯವಿಟ್ಟು ಅವಕಾಶ ಕೊಡಿ. ನಮಗೆ ಅವಕಾಶ ಕೊಡಿ ಎಂದು ಮೂರು ದಿವಸದಿಂದ ನಾವು ವಿನಂತಿ ಮಾಡುತ್ತಿದ್ದೇವೆ.

ಅಧ್ಯಕ್ಷರು : ನಿಮ್ಮ ನಾಯಕರಾಗಿರತಕ್ಕಂಥ ರಾಯರೆಡ್ಡಿಯವರು ಮಾತನಾಡಿದ್ದಾರೆ.

ಶ್ರೀ ಎನ್.ಎಸ್. ಬೋಸರಾಜ್ : ರಾಯರೆಡ್ಡಿಯವರು ಕೊಪ್ಪಳ ಜಿಲ್ಲೆಯವರು. ತಮಗೆ ಗೊತ್ತಿಲ್ಲವೆಂದೆನಿಸುತ್ತದೆ. ನಮಗೆ ಅವಕಾಶ ಕೊಡಿ ಎಂದು ಮೂರು ದಿವಸದಿಂದ ಕೇಳುತ್ತಿದ್ದೇವೆ.

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ ಕ್ಲಾರಿಫಿಕೇಶನ್ ಮುಗಿಯಲಿ.

ಶ್ರೀ ಎನ್.ಎಸ್. ಬೋಸರಾಜ್ : ನಾವೂ ಕೂಡ ಕ್ಲಾರಿಫಿಕೇಶನ್ ಕೇಳುತ್ತಿದ್ದೆವೆ ನಮಗು ಅವಕಾಶ ಕೊಡಿ.

ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಅಧ್ಯಕ್ಷರೆ, ಬೆಳಗಾವಿಯ ಈ ಒಂದು ಐತಿಹಾಸಿಕ ಅಧಿವೇಶನ ಚರಿತ್ರೆಯಲ್ಲಿ ಸೇರಿ ಹೋಗಿದೆ. ಈ ಸಭೆಯ ಮುಖಾಂತರ ಮಾನ್ಯ ಮುಖ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಭಾಗದಲ್ಲಿ ಯಾವ ರೀತಿಯಾಗಿ ಅಭಿವೃದ್ಧಿಪಡಿಸುತ್ತಿದ್ದೀರೋ ಅದೇ ರೀತಿಯಗಿ ತಮಿಳುನಾಡಿನ ಭಾಗದಲ್ಲಿರುವ ನನ್ನ ಸ್ವಂತ ತಾಲ್ಲೂಕು ಕೂಡ ಒಂದು ಕಡೆ ಗಡಿ ಭಾಗವಾಗಿದೆ . ಹಾಗೆಯೇ ಮಾನ್ಯ ಕೃಷ್ಣಪ್ಪನವರು ಹೇಳಿದ ಹಾಗೆ ಬೆಂಗಳೂರು ಸುತ್ತಮುತ್ತಲು ಇರತಕ್ಕಂಥ ಬಹುತೇಕ ಪ್ರದೇಶಗಳಿಗೆ ತಾವು ಕೂಡ ಭೇಟಿ ನೀಡುತ್ತಿರುತ್ತೀರಿ, ಆದರೆ ಕೆಲವು ಕಡೆಗೆ ಭೇಟಿ ನೀಡುವುದಕ್ಕೆ ಸಾಧ್ಯವಾಗಿಲ್ಲ. ಈ ಮೂಲಕ ನಾನು ವಿನಂತಿ ಮಾಡುವುದೇನೆಂದರೆ. ಈ ಒಂದು ಐತಿಹಾಸಿಕ ಸಭೆಯಲ್ಲಿ ರಾಜ್ಯದ ರಾಜಧಾನಿಯಾಗಿರುವ ಬೆಂಗಳೂರು ನಗರಕ್ಕೆ ತಾವು ಏನೊಂದು ಬಳುವಳಿಯನ್ನು ಕೊಡದಿದ್ದರೆ ಅಷ್ಟೊಂದು ಸಮಂಜಸವಾಗುವುದಿಲ್ಲ. ಈಗ ಏನು ಗಡಿ ಭಾಗಕ್ಕೆ ಅನುಕೂಲ ಮಾಡಿ ಕೊಡುತ್ತಿದ್ದೀರಿ, ಅದೇ ರೀತಿಯಾಗಿ

ತಮಿಳುನಾಡಿನ ಗಡಿ ಭಾಗದಲ್ಲಿರತಕ್ಕಂಥ ಬಹುತೇಕ ಗಡಿ ಭಾಗಗಳು ಮತ್ತು ಚಾಮರಾಜನಗರ ಜಿಲ್ಲೆಯ ಭಾಗಗಳು ಹಾಗೆಯೇ ಬೆಂಗಳೂರು ನಗರದಲ್ಲಿರತಕ್ಕಂಥ ಬಹುತೇಕ ಭಾಗಗಳಿಗೂ ಕೂಡ ತಾವು ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ವಿಶೇಷವಾಗಿ ಶಾಲಾ ಕಾಲೇಜುಗಳನ್ನು ಮತ್ತು ಇನ್ನಿತರ ಸವಲತ್ತುಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ ತಾವು ಆದ್ಯತೆ ಮೇರೆಗೆ ಕೊಡುವುದರ ಬಗ್ಗೆ ಮನದಟ್ಟು ಮಾಡಿಕೊಂಡು ವಿಶೇಷವಾಗಿ ನಂಜುಂಡಪ್ಪನವರ ವರದಿಯ ಪ್ರಕಾರ ಕನಕಪುರ ತಾಲ್ಲೂಕೂ ಕೂಡ ಹಿಂದುಳಿದ ಪ್ರದೇಶವಾಗಿದೆ ಎಂಬುದನ್ನು ತಾವು ಬಲ್ಲವರಾಗಿರುವುದರಿಂದ ಆ ತಾಲ್ಲೂಕಿಗೆ ಮತ್ತು ಬೆಂಗಳೂರು ನಗರದ ಸುತ್ತಮುತ್ತಲಿನ ಪ್ರದೇಶಗಳಿಗೆ ತಾವು ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಈ ಸಭೆಯ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್.ಎಸ್. ಬೋಸರಾಜ್ (ಮಾನ್ವಿ) : ಸನ್ಮಾನ್ಯ ಅಧ್ಯಕ್ಷರೆ, ಹೈದರಾಬಾದ್ ಕರ್ನಾಟಕದ ಪ್ರದೇಶದಲ್ಲಿ ರಾಯಚೂರು ಜಿಲ್ಲೆಯಲ್ಲಿ ಬರತಕ್ಕಂಥ ಐದು ತಾಲ್ಲೂಕುಗಳು ಡಾ; ನಂಜುಂಡಪ್ಪನವರ ವರದಿಯಲ್ಲಿ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಲಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಮುಖ್ಯಮಂತ್ರಿಯಾದ ಮೇಲೆ ನಮ್ಮ ರಾಯಚೂರು ಜಿಲ್ಲೆಗೆ ಐದು ಬಾರಿ ಬಂದಿದ್ದಾರೆ. ಅವರು ಅಲ್ಲಿಗೆ ಬಂದಿರತಕ್ಕಂಥ ಸಂದರ್ಭದಲ್ಲಿ ಅಲ್ಲಿರತಕ್ಕಂಥ ಮುಖಂಡರು ಮತ್ತು ನಾವೆಲ್ಲಾ ಸೇರಿ ನಮ್ಮಲ್ಲಿ ಅಗ್ರಿಕಲ್ಚರ್ ಯೂನಿವರ್ಸಿಟಿ ಸ್ಥಾಪನೆ ಮಾಡಬೇಕೆಂದು ಮನವಿ ಕೂಡ ಮಾಡಿಕೊಂಡಿದ್ದೇವೆ. ಅಗ್ರಿಕಲ್ಚರ್ ಯೂನಿವರ್ಸಿಟಿ ಮಾಡುವುದಕ್ಕೆ ಬೇಕಾಗಿರತಕ್ಕಂಥ ಮೂಲಭೂತ ಸೌಲಭ್ಯಗಳಾದ ಸೆಂಟ್ರಲ್ ಸ್ಟೇಟ್ ಫಾರ್ಮ್ ಇದೆ. ಮತ್ತೆ ಇದಕ್ಕೆ ಕಟ್ಟಡ ಕೂಡ ಇದೆ. ಹಾಗೆಯೇ, ಕೃಷ್ಣ, ಭೀಮಾ ಮತ್ತು ತುಂಗಭದ್ರ ನದಿಗಳಿಗೆ ಮಹಾರಾಷ್ಟ್ರದಿಂದ ನೀರನ್ನು ಬಿಟ್ಟಾಗ ಬೆಳಗಾಂ, ಬಾಗಲಕೋಟೆ ಬಿಜಾಪುರ ಜಿಲ್ಲೆಯವರಿಗೆ ಎಷ್ಟು ತೊಂದರೆಯಾಗುತ್ತದೆಯೋ, ಇವೆಲ್ಲಕ್ಕಿಂತ ಹೆಚ್ಚಗಿ ಭೀಮಾ ಮತ್ತು ಕೃಷ್ಣ ನದಿ ನೀರು ಸರಿ ಸುಮಾರು 7 ಲಕ್ಷ ಕ್ಯೂಸೆಕ್ಸ್ ನೀರು ಜುರಾಲ ಪ್ರಾಜೆಕ್ಟ್ ಸೇರಿ ನಮ್ಮ ರಾಯಚೂರು ಜಿಲ್ಲೆಗೆ ತೊಂದರೆಯಾಗಿದೆ. ಅದೇ ರೀತಿಯಾಗಿ ತುಂಗಾ ಮತ್ತು ಭದ್ರ ನದಿಗಳೆರಡು ಓವರ್ ಫ್ಲೋ ಆಗಿ ಬಂದಾಗ 2.5 ರಿಂದ 3.00 ಲಕ್ಷ ಕ್ಯೂಸೆಕ್ಸ್ ನೀರು ಬಿಡುವುದರಿಂದ, ಹೆಚ್ಚಿನ ತೊಂದರೆಯಾಗುತ್ತಿದೆ. ಮತ್ತೆ ಇಡೀ ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಹೆಚ್ಚು ತೊಂದರೆಯಾಗಿದ್ದರೆ ಅದು ರಾಯಚೂರು ಜಿಲ್ಲೆಯೆಂದು ಈಗಾಗಲೇ ತಾವು ಗುರುತಿಸಿದ್ದೀರಿ. ಕಳೆದ ವರ್ಷ

ಮತ್ತು ಈ ವರ್ಷ ಕೂಡ ಇದರಿಂದ ಸಾಕಷ್ಟು ತೊಂದರೆಯನ್ನು ಅನುಭವಿಸಿದ್ದೇವೆ. ಇವತ್ತಿನ ದಿವಸ ಅಲ್ಲಿ ಮಳೆ ಕೂಡ ಆಗಿಲ್ಲ. ತುಂಗಭದ್ರ ಲೆಫ್ಟ್ ಬ್ಯಾಂಕ್ ಕೆನಾಲ್ 226 ಕಿ.ಮೀ. ಉದ್ದವಿದೆ. ಆದರೆ, ಈ ಪ್ರದೇಶದಲ್ಲಿ ಸುಮಾರು 60 ಪರ್ಸೆಂಟ್‌ನಷ್ಟು ನಾಟಿ ಮಾಡುವುದಕ್ಕೆ ಆಗಿಲ್ಲ. ಸಾಕಷ್ಟು ಪ್ರಯತ್ನ ಕೂಡ ಮಾಡಿದ್ದೇವೆ. ಆದರೆ, ಆಗಿಲ್ಲ. 1953 ರಲ್ಲಿ 226 ಕಿ.ಮೀ ಉದ್ದದ ಕೆನಾಲ್‌ನ್ನು ನಿರ್ಮಾಣ ಮಾಡಿ ನೀರು ಬಿಡಲಾಗುತ್ತಿದೆ. ಕಳೆದ 54 ವರ್ಷಗಳಿಂದ ಕೇವಲ ಈ ಕೆನಾಲ್‌ನ ರಿಪೇರಿ ಕೆಲಸ ಮಾಡಿಕೊಂಡು ಮುಂದುವರಿದಿದ್ದೇವೆ. ಇಲ್ಲಿರತಕ್ಕಂಥ ಸುಮಾರು 10 ಲಕ್ಷ ಹೆಕ್ಟೇರ್ ಪ್ರದೇಶಗಳಿಗೆ ಕೃಷ್ಣ ಮತ್ತು ಭೀಮಾ ಹಾಗೂ ತುಂಗಭದ್ರ ನದಿ ನೀರಿನಿಂದ ನೀರಾವರಿ ಹೊಂದಿರತಕ್ಕಂಥ ಈ ಭಾಗದಲ್ಲಿ ಅಗ್ರಿಕಲ್ಚರ್ ಯೂನಿವರ್ಸಿಟಿ ಕೇಳುತ್ತಿದ್ದೆವೆ. ಹಿಂದೆ ಇದ್ದಂಥ ಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ಕಮಿಟಿಯನ್ನು ರಚನೆ ಮಾಡಿದ್ದರು. ಸದರಿ ಕಮಿಟಿ ಕೊಟ್ಟಿರತಕ್ಕಂಥ ವರದಿ ಸರ್ಕಾರ ಮುಂದೆ ಇದೆ. ಸದರಿ ರಿಪೋರ್ಟ್ ನ ಆಧಾರವಾಗಿ ತಕ್ಷಣ ಕೊಡುತ್ತೇನೆ. ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಇವತ್ತಿನದಿವಸ ಇಲ್ಲಿ ಅದನ್ನು ಪ್ರಕಟಣೆ ಮಾಡಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಅನುಕೂಲ ಮಾಡಿಕೊಡುತ್ತಾರೆಂದು ನಾವು ಆಸೆ ಪಟ್ಟಿದ್ದೇವೆ. ರಾಯಚೂರಿನಲ್ಲಿ ಅಗ್ರಿಕಲ್ಚರ್ ಯೂನಿವರ್ಸಿಟಿ ಪ್ರಾರಂಭ ಮಾಡುವುದಕ್ಕೆ ಬೇಕಾಗಿರತಕ್ಕಂಥ ಎಲ್ಲಾ ರೀತಿಯಾದ ಮೂಲಭೂತ ಸೌಲಭ್ಯಗಳು ಇರುವುದರಿಂದ ಇದನ್ನು ಅವರು ಮಾಡಿಕೊಡಬೇಕೆಂಬ ಮಾತನ್ನು ಹೇಳುತ್ತಾ, ಇದೇ ರೀತಿಯಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡುವಾಗ ನಾರಾಯಣಪುರ ರೈಟ್ ಬ್ಯಾಂಕ್ ಕೆನಾಲ್ ಬಗ್ಗೆ ಹೇಳಿದ್ದಾರೆ. ಈಗ 95 ಕಿ.ಮೀ. ವರೆಗೆ ಕೆಲಸ ಆಗಿದೆ, 95 ರಿಂದ 152 ಕಿ.ಮೀ.ನ ವರೆಗೆ ಅಂದರೆ, ದೇವದುರ್ಗಾ, ಕಲ್ಮಲ ಹಾಗೂ ರಾಯಚೂರು ತಾಲ್ಲೂಕುಗಳಿಗೆ ಇದು ಸಂಬಂಧಪಟ್ಟಿರುತ್ತದೆ. ಇದರ ಬಗ್ಗೆ ಹಿಂದಿನ ಸರ್ಕಾರ ಇದ್ದಾಗಲೂ ಸಾಕಷ್ಟು ಒತ್ತಡವನ್ನು ಮಾಡಿದ್ದೇವೆ. ಆಗ ನೀರಾವರಿ ಮಂತ್ರಿಗಳಾಗಿದ್ದಂತಹ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಆ ಭಾಗದ ಶಾಸಕರುಗಳನ್ನು ನಾಲ್ಕಾರು ಬಾರಿ ಸಭೆಯನ್ನು ಮಾಡಿದ್ದರು. ಮತ್ತೆ ಆ ಪ್ರದೇಶಕ್ಕೆ ಕೂಡ ಬಂದು ಇದಕ್ಕೆ ಸಂಬಂಧಪಟ್ಟಂತೆ ಸಬೆ ಮಾಡಿ ಇದರ ಅಂದಾಜನ್ನು ಕೂಡ ಮಾಡಿ ಸಾಕಷ್ಟು ಪ್ರಯತ್ನವನ್ನು ಮಾಡಿದ್ದಾರೆ. ಇದೂ ಸಹ ತಮ್ಮ ಮುಂದೆ ಇದೆ. ಈಗೇನು ಆಂಧ್ರಪ್ರದೇಶದಲ್ಲಿ ತೆಲಗುಗಂಗಾ ಮತ್ತು ಇನ್ನು ಅನೇಕ ರೀತಿಯ ಪ್ರಾಜೆಕ್ಟ್‌ಗಳು ಮಾಡಿರುತ್ತಾರೆ. ನಾವು ಮಾಡಿದರೆ ಅವರು

ನೋಡುತ್ತಾರೆ ಮತ್ತೆ ಅವರೂ ಕೂಡ ಕ್ಲೈಂ ಮಾಡುತ್ತಾರೆಂದು ನಾವು ಮಾಡತಕ್ಕಂಥದ್ದಕ್ಕೆ ನಮ್ಮ ಅಧಿಕಾರಿಗಳೇ ಅಡ್ಡ ಹಾಕುತ್ತಾರೆ. ಇವತ್ತು ತಾವು 92 ನೇ ಕಿ.ಮೀ. ದಿಂದ 157 ನೇ ಕಿ.ಮೀ ವರೆಗೆ ತರಬೇಕು. ಅದೇ ರೀತಿಯಾಗಿ ಒಂದು 9A ಕೆನಾಲ್ ಹಾಗೂ ಲಿಂಕ್ ಕೆನಾಲ್ ರಾಯಚೂರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು. 45 ಗ್ರಾಮಗಳು ನನ್ನ ಹಾಗೂ ಮಾನ್ಯ ಆಲ್ಕೋಡ್ ಹನುಮಂತಪ್ಪನವರ ಕ್ಷೇತ್ರದಲ್ಲಿ ಬರುತ್ತವೆ. ಅದಕ್ಕೆ estimate ಆಗಿ ಈಗಾಗಲೇ ಟೆಕ್ನಿಕಲ್ ಕಮಿಟಿಯಲ್ಲಿ ಕ್ಲಿಯರ್ ಆಗಿ ನೀರಾವರಿ ಇಲಾಖೆಯವರ ಸಮ್ಮುಖದಲ್ಲಿ ಅವು ಎರಡು ಪರಿಶಿಲನೆಯಲ್ಲಿದೆ. ಈಗಾಗಲೇ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಘೋಷಣೆ ಮಾಡಿದ್ದಾರೆ 38 ಕೋಟಿ ರೂ.ಗಳದ್ದು ಒಂದು 158 ಕೋಟಿ ರೂ. ಗಳದ್ದು ಒಂದು ಈ ಎರಡನ್ನು ತಾವು ಆದಷ್ಟು ತೀವ್ರದಲ್ಲಿ ರಾಯಚೂರು ಜಿಲ್ಲಾ ಅನುಕೂಲಕ್ಕಾಗಿ ಮಂಜೂರಾತಿ ಮಾಡಿ ಅ ಕಾರ್ಯಕ್ರಮವನ್ನು ಪ್ರಾರಂಭಿಸಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಹುಕ್ಕೇರಿಯವರೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಡಿ.ಆರ್. ಪಾಟೀಲ್ : ಸುವರ್ಣ ಗ್ರಾಮೋದಯ ಯೋಜನೆಯೊಳಗೆ ಮೊದಲ ನೆಯ ಹಂತದಲ್ಲಿ ನೀವು ಹಳ್ಳಿಗಳನ್ನು select ಮಾಡಿದ್ದೀರಿ, ಹೋಬಳಿ ಆಧಾರದ ಮೇಲೆ select ಮಾಡಿದ್ದೀರಿ. ನಮ್ಮ ಬಾಂಬೆ ಕರ್ನಾಟಕದಲ್ಲಿ ಹೋಬಳಿಗಳು ಬಹಳ ಕಡಿಮೆ. ಈ ಬೆಳಗಾಂ division ಗೆ 91 ಹಳ್ಳಿಗಳು select ಆಗಿವೆ. ಬೆಂಗಳೂರು division ಗೆ 183 ಹಳ್ಳಿಗಳು ಆಗಿವೆ ಅದಕ್ಕೆ ದಯವಿಟ್ಟು ಹೋಬಳಿ ಆಧಾರದ ಮೇಲೆ ಗ್ರಾಮಗಳನ್ನು select ಮಾಡುವುದಕ್ಕೆ ಹೋಗಬೇಡಿ. ನೀವು ತಾಲ್ಲೂಕಿನ ಆಧಾರದ ಮೇಲೆ ಆದರೂ ಮಾಡಿ ಜಿಲ್ಲಾ ಮೇಲೆಯಾದರೂ ಮಾಡಿ, ಅಂದರೆ ಎಲ್ಲ ಪ್ರದೇಶಕ್ಕೆ equal ಆಗಿ distribute ಆಗುತ್ತದೆ.

ಶ್ರೀ ಬಿ.ಆರ್. ಪಾಟೀಲ್ : ಶಾಸಕರನ್ನು ಕೇಳಿ ಎಲ್ಲೆಲ್ಲಿ ಅವಶ್ಯಕತೆ ಇದೆ ಎಂದು ಮಾಡಿ.

ಶ್ರೀ ಡಿ.ಆರ್. ಪಾಟೀಲ್ : ಸೆಲೆಕ್ಷನ್ ಬಗ್ಗೆ ಅವರು guidelines ಕೊಡಲಿ ಮಾನ್ಯ ಮುಖ್ಯ ಮಂತ್ರಿಗಳೇ, ದಯವಿಟ್ಟು ನೀವು ಅದನ್ನು ತಾಲ್ಲೂಕು ವೈಸ್ ಮಾಡಬೇಕು. ನಮ್ಮ ಕಡೆ ಮುಂಗಾರು ಮಳೆ ಬೀಳಲಿಲ್ಲ. ಆಗಸ್ಟ್ ಕೊನೆಯವಾರ ಸೆಪ್ಟೆಂಬರ್ ಕೊನೆಯವಾರ ಸ್ವಲ್ಪ ಮಳೆ ಬಿದ್ದಾಗ ಎಲ್ಲರೂ ಹಿಂಗಾರಿ

ಬಿತ್ತನೆಯನ್ನು ಪ್ರಾರಂಭ ಮಾಡಿದರು. ಆದರೆ ಬೀಜದ ಸಬ್ಸಿಡಿ ಬರಲೇ ಇಲ್ಲ. ಇವತ್ತಿನವರೆಗೂ ಬೀಜದ ಸಬ್ಸಿಡಿ ಬರಲಿಲ್ಲ.

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) : ಬೀಜದ ಸಬ್ಸಿಡಿ ಇವತ್ತಿನಿಂದ ಎಲ್ಲಾ ಕಡೆ start ಆಗಿದೆ. ನಮ್ಮ ಬೀದರ್ ಜಿಲ್ಲೆಯ ಕಡೆ ಇನ್ನೂ ಬೀಜ ಬಿತ್ತಿಲ್ಲ, ಬಿತ್ತುವುದಕ್ಕೆ ಇನ್ನು 8 ದಿವಸ ಇದೆ.

ಶ್ರೀ ಡಿ.ಆರ್. ಪಾಟೀಲ್ : ಅಲ್ಲಾ ನಿಮ್ಮ ಕಡೆ ಹಾಗೆ ಇರಬಹುದು.

ಶ್ರೀ ಬಂಡೆಪ್ಪ ಕಾಶಂಪೂರ : 75 % ಸಬ್ಸಿಡಿಯಂತೆ 5 ಬೆಳೆಗಳಿಗೆ ನಾವು ಬೀಜವನ್ನು already programming ಮಾಡಿ ಇಡಿ ರಾಜ್ಯದಲ್ಲಿ ನಾವು ಎಲ್ಲೆಲ್ಲಿ ಬೇಕು ಅಲ್ಲಿ start ಮಾಡಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್ : ಅದು ಆಗಲಿಲ್ಲ. ತಾವು ದಯವಿಟ್ಟು ನೀರಾವರಿಗೆ ಹೇಗೆ ಕಳಕಳಿಯಿಂದ ಒತ್ತನ್ನು ಕೊಡುತ್ತೀರಿ, ಅದೇ ಒತ್ತು ಮಳೆಯಾಧಾರಿತ ಕೃಷಿಗೂ ಬೇಕು. ನೀವು soil conservation ಹಾಗೂ water conservation ಗೆ ಹೆಚ್ಚಿನ ಒತ್ತನ್ನು ಕೊಟ್ಟು ಇನ್ನು 65 % land ಮಳೆಯಾಶ್ರಿತ ಇದೆ. ಅದಕ್ಕಾಗಿ. ನೀವು ನೀರಾವರಿಗೆ ಕೊಡುವ ಆದ್ಯತೆಯನ್ನು ಬಜೆಟ್‌ನಲ್ಲಿ equal ಆಗಿ ಇಡುತ್ತೀರಿ ಅಷ್ಟು ಹಣವನ್ನು ಈ ಭಾಗಕ್ಕೂ ಇಟ್ಟರೆ ಒಂದೆರಡು ವರ್ಷದಲ್ಲಿ ನಮಗೆ ಅನುಕೂಲವಾಗುತ್ತದೆ. ದಯವಿಟ್ಟು ಇದಕ್ಕೆ ಹೆಚ್ಚು ಒತ್ತು ಕೊಟ್ಟು ಈ ಕೆಲಸವನ್ನು ಪ್ರಾರಂಭ ಮಾಡಬೇಕು. ನಮ್ಮ ಕಡೆ ಎಲ್ಲೆಲ್ಲಿ D.P.A.P. ತಾಲ್ಲೂಕುಗಳು ಎಂದು declare ಆಗಿವೆ ಮೊದಲಿನಿಂದ Planning Department ನಿಂದ ಅಲ್ಲಿ ಎಲ್ಲಾ ಹಳ್ಳಿಗಳಿಗೆ ಬಾಂದಾರ ಕಟ್ಟಿಸುವಂಥ ಕೆಲಸವನ್ನು ಆದ್ಯತೆ ಮೇಲೆ ನೀವು ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಒಂದು ವಿಷಯವನ್ನು ಸ್ವಾಗತ ಮಾಡಬೇಕಾಗಿದೆ. ಡಾ:ನಂಜುಂಡಪ್ಪನವರ ವರದಿಯನ್ನು ಬಿಲ್ ಮೂಲಕ ತರುತ್ತೇವೆಂದು ಹೇಳಿದಿರಿ, ಬಹಳ ಸಂತೋಷ. ಅದರಲ್ಲಿ ಹಿಂದುಳಿದ ತಾಲ್ಲೂಕು ಅತೀ ಹಿಂದಳಿದ ತಾಲ್ಲೂಕು ಇದರ ಬಗ್ಗೆ ತಾವು ಗಮನವನ್ನು ಹರಿಸಬೇಕಾಗುತ್ತದೆ. ಇದರ ಬಗ್ಗೆ ಕೂಡ ಹೇಳಬೇಕಾಗುತ್ತದೆ. ಕಡಪಟ್ಟಿ ವರದಿಯನ್ನು ತಾವು ನೋಡಿರಬಹುದು. ಅದು ಎಲ್ಲಿ ಬಿದ್ದಿದೆಯೋ ಗೊತ್ತಿಲ್ಲ. division-wise ಅದರಲ್ಲಿ ಮಾಡಿದರೆ ನಮ್ಮ ಮಕ್ಕಳಿಗೆ ಅನುಕೂಲವಾಗುವುದಿಲ್ಲ ಹಾಗೂ education ಕೂಡ ಸಿಗುವುದಿಲ್ಲ. division-wise selection ಆಗಬೇಕು. ನೌಕರಿಯಾಗಲಿ ಅಥವ ವಿದ್ಯಾಭ್ಯಾಸವಾಗಲಿ ಬೀದರ್ ಜಿಲ್ಲೆಯಲ್ಲಿ ನಿಮಗೆ ಗೊತ್ತು 20% result,

ಎಲ್ಲದ್ದಕ್ಕೂ ಕೆಳಗಡೆ ಅಂದರೆ ಬೀದರ್ result ಏಕೆಂದರೆ education ಚೆನ್ನಾಗಿ ಇಲ್ಲ. ಶಾಲೆಗಳು ಕೊಟ್ಟಿಲ್ಲ ಮೊನ್ನೆ ಕಾಲೇಜುಗಳನ್ನು ಕೊಟ್ಟಿರಿ ನಮ್ಮ ತಾಲ್ಲೂಕಿಗೆ ಇಲ್ಲ. ಬೇರೆ ಬೇರೆ ತಾಲ್ಲೂಕಿಗೆ ಕೊಟ್ಟಿರಿ, ಹೈಸ್ಕೂಲ್‌ಗಳನ್ನು ಕೊಟ್ಟಿರಿ ಅದರಲ್ಲಿಯೂ ತಾರತಮ್ಯ. ಅದರಲ್ಲಿಯೂ ಕೊಡುವುದಕ್ಕಾಗಲಿಲ್ಲ.ಅದಕ್ಕಾಗಿ ತಾರತಮ್ಯವನ್ನು ಬೇಡ. ಅತೀ ಹಿಂದುಳಿದ ತಾಲ್ಲೂಕುಗಳು ಯಾವ್ಯಾವು ಇವೆ, ಅದರ ಬಗ್ಗೆ ಹಾಗೂ ಹಿಂದುಳಿದ ತಾಲ್ಲೂಕು ಗಮನವನ್ನು ಹರಿಸಿ ನಾವು ತಾರತಮ್ಯ ಇಲ್ಲದಂಥ ವ್ಯವಸ್ಥೆ ತಾವು ಮಾಡಬೇಕು. division-wise selection ಮಾಡುವ ಸಲುವಾಗಿ ತಾವು ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ತಾರತಮ್ಯ ಎನ್ನುವುದರ ಬಗ್ಗೆ ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದರು. ನೀವು ಬಂದಾಗ ನೀವು ಮಾಡಿಕೊಂಡಿರಿ ನಾವು ಬಂದಾಗ ನಾವು ಮಾಡಿಕೊಳ್ಳುತ್ತೇವೆಂದು ಹೇಳಿದರಲ್ಲಾ, ಆಗ ನೀವು ಸುಮ್ಮನೆ ಕುಳಿತುಕೊಂಡಿರಿ; ಅದು ತಾರತಮ್ಯ ಅಲ್ಲ ಬಿಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸುಮ್ಮನೆ ಕುಳಿತುಕೊಂಡಿರಿ ಅಂದರೆ ನೀವು ಮಾತನಾಡಲಿಕ್ಕೆ time ಕೊಟ್ಟಿಲ್ಲ. ನಾನು ಜಗಳವಾಡುವುದು ಬೇಡವೆಂದು ಬಿಟ್ಟು ಬಿಟ್ಟಿದ್ದೇನೆ.

ಅಧ್ಯಕ್ಷರು : ನೀವು ಬಂದಾಗ ನೀವು ಮಾಡಿಕೊಳ್ಳಿ ಅವರು ಬಂದರೆ ಅವರು ಮಾಡಿಕೊಳ್ಳಲಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾವು ಬಂದಾಗ ಏನು ಮಾಡಬೇಕು ಅದನ್ನು ಮಾಡುತ್ತೇವೆ. ಹಿಂದೆ ಏನು ಮಾಡಬೇಕು ಮಾಡಿದ್ದೇವೆ. ಈಗ ಅವರು ಅಧಿಕಾರದಲ್ಲಿ ಇದ್ದಾರೆ. ನಾವು ಮಾಡಿಲ್ಲವೆಂದು ಇಲ್ಲಿ ಕುಳಿತಿದ್ದೇವೆ. ಇದ್ದಾಗ ಅವರು ಮಾಡಬೇಕಲ್ಲವೆ? ಈಗ ಅಧಿಕಾರದಲ್ಲಿದ್ದವರು ಮಾಡಲಿ ಸಂತೋಷ. ಮಾಡಿದ್ದಕ್ಕೆ ಶಹಬಾಷ್‌ಗಿರಿಯನ್ನು ಕೊಡುತ್ತಿ ದ್ದೇವಲ್ಲಾ? ಒಳ್ಳೆ ಯದಾದರೆ ಒಳ್ಳೆಯದು ಎಂದು ಹೇಳುತ್ತೇವೆ. ಈ ಭಾಗದಲ್ಲಿ ಬೆನ್ನಾಗಿ ಮಾಡಿದಿರಿ, ಒಳ್ಳೆಯದು ಎಂದು ಹೇಳುತ್ತೇವೆ. ಒಳ್ಳೆಯ ಕೆಲಸವನ್ನು ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇವೆ. ಅಧಿಕಾರದಲ್ಲಿದ್ದಾಗ ನಾವು ಏನು ಆಗಿದ್ದೇವೆಂದು ಯಾರೂ ಕೇಳುವುದಿಲ್ಲ. ಏನು ಮಾಡಿದ್ದೇವೆಂದು ಕೇಳುತ್ತಾರೆ. ಅದಕ್ಕಾಗಿ ಏನಾದರೂ ಮಾಡಿ ಎಂದು. ಅದಕ್ಕಾಗಿ ನೀರಾವರಿ ಬಗ್ಗೆ ಹೇಳುತ್ತೇನೆ. ನಮ್ಮಲ್ಲಿ ಏನಾಗಿದೆ, 4 ಬ್ಯಾರೇಜೆಸ್ ಮಾಡಿದ್ದೀರಿ. ಅದು ನಿಂತು ಬಿಟ್ಟಿದೆ. ಬ್ಯಾರೇಜಸ್‌ಗಳನ್ನು immediately ಮಾಡಿ, ನಮ್ಮದು ಕಾವೇರಿ ಮತ್ತು ಕೃಷ್ಣಾ ಬೇಸಿನ್ ಗೆ ಬರುವುದಿಲ್ಲ. ಗೋದಾವರಿ ಸಣ್ಣ ಪ್ರಮಾಣ ಬಚಾವತ್ ಅವಾರ್ಡ್ ಪ್ರಕಾರ

ಬಹಳ ಕಡಿಮೆ, ಔರಾದ್ ತಾಲ್ಲೂಕಿನಲ್ಲಿ ನಿಜಾಂಸಾಗರ್ ಒಳಗೆ ಮತ್ತು ಹೊರಗೆ ಹರಿಯುತ್ತಿರುವಂಥ ನೀರು. ಅದನ್ನು ತಾವು ಬಚಾವತ್ ಅವಾರ್ಡ್ ಪ್ರಕಾರ ಬೇಗ ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ನೀರಾವರಿ ಕುಡಿಯುವ ನೀರು ಇದನ್ನು ತಾವು ಮಾಡಿದರೆ ಬಹಳ ಅನುಕೂಲವಾಗುತ್ತದೆ ಮಾನ್ಯ ಡಿ.ಆರ್. ಪಾಟೀಲ್ ಅವರು ಹೇಳಿರುವುದನ್ನು ನಾನು ಒಪ್ಪುತ್ತೇನೆ. ತಾಲ್ಲೂಕು ವೈಸ್, ಹೋಬಳಿ ವೈಸ್ ಮಾಡಿದರೆ ನಮಗೆ ಅನುಕೂಲವಾಗುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ಭಾಷಣ ಮಾಡಬೇಕೆಂದರೆ ನನಗೆ ಅವಕಾಶವನ್ನು ಮಾಡಿಕೊಡಲಿಲ್ಲ. ಒಟ್ಟಾರೆ ನಮ್ಮ ರಾಜ್ಯದಲ್ಲಿ ಎರಡು ರೀತಿಯ ಅತಿಯಾದಂಥ ಬರ ಮತ್ತು ನೆರೆ ಪೀಡಿಸುತ್ತಿದೆ. ಹಾಗಾಗಿ ನಾವು ನೆರೆಪೀಡಿತ ಪ್ರದೇಶದ ಮಲೆನಾಡು ಭಾಗದ ತಾಲ್ಲೂಕಿನವರು ಇದ್ದೇವೆ. ನಮ್ಮ ಭಾಗದಲ್ಲಿ ಆಗಸ್ಟ್ 11 ಮತ್ತು 12ನೇ ತಾರೀಖು ಕರಾಳದಿನ. ಒಂದೆ ಸಮನೆ 48 ಗಂಟೆ ಮಳೆಯಾಗಿ ಸಣ್ಣ ಸಣ್ಣ ಹಳ್ಳದ ಬದುಗಳು ತೀರ್ಥಹಳ್ಳಿ ಒಂದು ತಾಲ್ಲೂಕಿನಲ್ಲಿ 1000 ಕುಟುಂಬಗಳು ಬೀದಿಪಾಲಾಗಿವೆ. ಹಾಗೆಯೇ ಮಲೆನಾಡಿನ ಎಲ್ಲಾ ತಾಲ್ಲೂಕುಗಳು ಆ ರೀತಿಯಾಗಿದೆ. ಅತಿವೃಷ್ಟಿಯಿಂದಾಗಿರುವುದಕ್ಕೆ ಸ್ವಲ್ಪ ಸ್ವಲ್ಪ ಹಣವನ್ನು ಕಳುಹಿಸಿರುತ್ತೀರಿ. ಬೆಳೆ ಪರಿಹಾರವಾಗಿ ಸ್ವಲ್ಪ ಸ್ವಲ್ಪ 800 ದಿಂದ 1000 ರೂ.ಗಳವರೆಗೆ Central Government guidelines ಏನಿದೆ, ಅದರ ಪ್ರಕಾರ ಕೊಟ್ಟಿದ್ದೇವೆ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಕೆಲವು ಜಮೀನುಗಳನ್ನು ಮೊದಲಿನಂತೆ ಮಾಡಬೇಕಾದರೆ 5–6 ವರ್ಷ ಬೇಕು. ಎಷ್ಟು ಮರಳು ಹೋಗಿ ಬಿದ್ದಿದೆ. 15 ರಿಂದ 20 ಅಡಿ ಆಳ ಹೊಂಡ ಬಿದ್ದು ಹೋಗಿರುವ ಪರಿಸ್ಥಿತಿ ಇದೆ. ನೀವು ಕೊಡುವಾಗ ಅತಿವೃಷ್ಟಿಗೆ ಹೆಚ್ಚಿನ ಅನುದಾನವನ್ನು ಈ ಮಲೆನಾಡಿನ ತಾಲ್ಲೂಕುಗಳಿಗೆ ಕೊಟ್ಟಿಲ್ಲ. ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಮಳೆಯಿಂದ ವಿಶೇಷವಾಗಿ ಈ ರಸ್ತೆಗಳು ಹಾಳಾಗಿವೆ. ಬೆಳಗಾಂನಲ್ಲಿ ಒಂದು ವಿಶೇಷ ಅಧಿವೇಶನ ನಡೆಯುತ್ತಿದೆ. ಇಲ್ಲಿ ನಮಗೆ ಹಣಕಾಸನ್ನು ಪ್ರಕಟ ಮಾಡುತ್ತಾರೆಂದು ಹೇಳಿ ಬಹಳ ಆಸೆಯಿಂದ ನೋಡುತ್ತಿದ್ದಾರೆ ಈ ಉತ್ತರ ಕರ್ನಾಟಕದವರು ಹೇಗೆ ನೋಡುತ್ತಿದ್ದಾರೊ ಹಾಗೆ ನೋಡುತ್ತಿದ್ದಾರೆ. ಉತ್ತರ ಕರ್ನಾಟಕಕ್ಕೆ ಈ ಒಂದು ಅಧಿವೇಶನದಿಂದ ಒಂದು ರಿಲೀಫ್ ಸಿಗುತ್ತಿದೆ ನಮ್ಮ ಮಲೆನಾಡಿನ ತಾಲ್ಲೂಕುಗಳಿಗೆ ಹೆಚ್ಚಿನ ಅನುದಾನವನ್ನು ಈ ರಸ್ತೆಗಳಿಗೆ ಬಿಡುಗಡೆ ಮಾಡಬೇಕೆಂದು ಹೇಳಿ ನಾನು ಮುಖ್ಯಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಯಾರು ಮಾತನಾಡಿಲ್ಲ, ಅವರು ಮಾತನಾಡಬೇಕು.

ಶ್ರೀ ವೀರಣ್ಣ ಚರಂತಿಮಠ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಿರುವುದಿಲ್ಲ.

ಶ್ರೀ ಕೆ. ಅಭಯ ಪಾಟೀಲ್ (ಬಾಗೇವಾಡಿ) : ನಮ್ಮ ಭಾಗದಲ್ಲಿ ಅಧಿವೇಶನ ನಡೆದಿರುವುದಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ನಾನು ನಿಮ್ಮ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಮ್ಮ ಧಾರವಾಡ ಭಾಗಕ್ಕೆ ಈ ಸಲ ಸಾಕಷ್ಟು ಪ್ರಮಾಣದಲ್ಲಿ ಮಳೆಯಾಗಿ ಸಂಪೂರ್ಣವಾಗಿ ರೋಡ್‌ಗಳು ಕೆಟ್ಟಿವೆ. ಆ ವಿಚಾರದಲ್ಲಿ ದಯವಿಟ್ಟು ಸರ್ಕಾರ ಗಮನ ಹರಿಸಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅದರ ಜೊತೆಯಲ್ಲಿ ಎರಡನೇಯ ವಿಷಯವೇನೆಂದರೆ, ನಮ್ಮಲ್ಲಿರುವ ಹಾಸ್ಪಿಟಲ್‌ಗಳಲ್ಲಿ ಡಾಕ್ಟರ್‌ಗಳ ತುಂಬಾ ಕೊರತೆ ಇದೆ. ನಮ್ಮಲ್ಲಿರುವ ರೋಗಿಗಳ ಚಿಕಿತ್ಸೆ ಮಾಡುವುದಕ್ಕೆ ಸಂಪೂರ್ಣವಾಗಿ ನಿರ್ಲಕ್ಷ್ಯ ವಾಗಿದೆ. ಅದಕ್ಕೂ ಕೂಡ ಗಮನ ಹರಿಸಬೇಕೆಂದು ನಾನು ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ 2004–05ನೇ ಸಾಲಿನ ಮಳೆ ವಿಮೆ ಬರಬೇಕಾಗಿತ್ತು ಅದು ಇನ್ನುವರೆಗೆ ಬಂದಿಲ್ಲ. ಅದರ ಬಗ್ಗೆ ಕೂಡ ನಾನು ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಷಯವೇನೆಂದರೆ ಬೀಜದ ರಿಯಾಯಿತಿ ಏನು ಕೊಡುತ್ತಾರೆ, ಅದರಲ್ಲಿ ಅಧಿಕಾರಿಗಳು ಮಾರಿಕೊಳ್ಳುವಂಥದ್ದು ಬಹಳವಾಗುತ್ತಿದೆ. ಇದನ್ನು ಕೃಷಿ ಮಂತ್ರಿಗಳು ಹತೋಟಿಗೆ ತರಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅದು ಅಲ್ಲದೆ ಈ ಭಾಗದಲ್ಲಿ ಸಂಪೂರ್ಣವಾಗಿ ಪಶು ಚಿಕಿತ್ಸಾಲಯಗಳನ್ನು ಆಫ್ ಗ್ರೇಡ್ ಮಾಡುವುದಕ್ಕೆ ಯಾವ ಒತ್ತನ್ನೂ ಕೊಟ್ಟಿಲ್ಲ. 10 ರಿಂದ 15 ವರ್ಷದ್ದು ಮಾತ್ರ ಇರುವುದರಿಂದ ಹೊಸದಾಗಿ ಪಶು ಚಿಕಿತ್ಸಾಲಯವನ್ನು ತೆಗೆಯಬೇಕಾಗಿದೆ. ಹೊಸದಕ್ಕೆ ಯಾವ ಅಪ್ರೂವಲ್ ಕೊಟ್ಟಿಲ್ಲ ನಮ್ಮ ಕ್ಷೇತ್ರಕ್ಕೆ 7–8 ಪಶು ಚಿಕಿತ್ಸಾಲಯ ಕೊಡಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ನಮಗೆ ಈಗ ಬರಗಾಲ ಪರಿಹಾರ ಕಾಮಗಾರಿಯನ್ನು ತೆಗೆದುಕೊಳ್ಳುವ ಬಗ್ಗೆ 17 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದಾರೆ. ನಮ್ಮಲ್ಲಿ 25 ಪಂಚಾಯಿತಿ, 300 ಗ್ರಾಮಗಳು ಇವೆ. ನಿಮ್ಮ ಸರ್ಕಾರಿ minimum wages ಪ್ರಕಾರ 70 ರೂ.ಗಳಂತೆ ಮಾಡಿದರೆ ಒಂದು ದಿವಸಕ್ಕೆ ಎಲ್ಲಾ average ಹಳ್ಳಿಗಳಲ್ಲಿ 90 ಜನರಿಗೆ ಕೆಲಸವನ್ನು ಕೊಡಬಹುದು. ನೀವು ಈಗ ಎಲ್ಲಾ ಕಡೆಗಳಲ್ಲಿ ವಾಸ್ತವ್ಯವನ್ನು ಹೂಡುತ್ತಿದ್ದೀರಿ. ನಮ್ಮ ಗ್ರಹಚಾರಕ್ಕೆ ಎಲ್ಲಾದರೂ ನಮ್ಮ ಹಳ್ಳಿಗಳಿಗೆ ವಾಸ್ತವ್ಯಕ್ಕೆ

ಬಂದು, ಅವರು ಉಪವಾಸ ಇದ್ದರೆ ಪಾಪ ನಿಮಗೆ ಹೇಗೆ ಊಟ ಇಡುತ್ತಾರೆ? ಅದಕ್ಕೋಸ್ಕರ ನಿಮಗೆ ಊಟ ಕೊಡುವುದಕ್ಕಾದರೂ ರೆಗ್ಯುಲರ್ ಆಗಿ ವಾರದ ಪೂರ್ತಿ ಕೆಲಸವನ್ನು ಕೊಟ್ಟರೆ ಒಳ್ಳೆಯದಾಗುತ್ತದೆ. ಸರ್ಕಾರದವರು ಒಂದು ಸುತ್ತೋಲೆಯನ್ನು ಕಳುಹಿಸಿದ್ದಾರೆ. ರಸ್ತೆಯ ಕೆಲಸ, ಕೆರೆ ಹೂಳೆತ್ತುವುದು, ಜಲಾನಯನ, ಇದನ್ನು ಯಾರು ಹೇಳಿಕೊಟ್ಟಿರೋ ಗೊತ್ತಿಲ್ಲ. ಈ ಮೂರು ಕೆಲಸಗಳನ್ನು ನೀವು ಇದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರೆ, ಅನಂತರ ಇದರ ಸುಳಿವು ಕೂಡ ಏನೂ ಇರುವುದಿಲ್ಲ. ಯಾವ ಆಸ್ತಿಯೂ ನಿರ್ಮಾಣವಾಗಿರುವುದಿಲ್ಲ. ಜನಗಳು ಬಂದು ಕೆರೆಯ ಹೂಳೆತ್ತುವ ಕಾಲ ಹೊರಟುಹೋಯಿತು. ನಿಮ್ಮ machineryಯೇ ಬರಬೇಕು ಅದರ ಮುಖಾಂತರವೇ ಹೂಳನ್ನು ಎತ್ತಬೇಕು, ಎನ್‌ಆರ್ಸ್ ಬರೆದುಕೊಳ್ಳಬೇಕು. ಅದರ ಪ್ರಕಾರವೇ ದುಡ್ಡು ಬಟವಾಡೆ ಆಗಬೇಕು. ರಸ್ತೆಯ ಕೆಲಸವೆಂದರೆ ಮಣ್ಣು ತೆಗೆಯುವುದು, ಅಲ್ಲಿ ಹಾಕುವುದು, ಅದು ಹೇಗೆ ನಡೆಯುತ್ತದೆಂದು ನಮಗೆ ಗೊತ್ತಿದೆ. ಇದರಿಂದ ಆಸ್ತಿ ನಿರ್ಮಾಣವಾಗುವುದಿಲ್ಲ. ಮೊದಲಿನಿಂದಲೂ ಪದ್ಧಿತಿ ಏನೆಂದರೆ, ಬರಗಾಲ ಬಂದಾಗ ನಾವುಗಳು ಪರಿಹಾರದ ಹೆಸರಿನಲ್ಲಿ ಖರ್ಚು ಮಾಡತಕ್ಕಂತಹ ಹಣ ಆ ಸನ್ನಿವೇಶ ಕಳೆದು ಹೋದ ಮೇಲೆ ಶಾಶ್ವತವಾದ ಆಸ್ತಿ ನಿರ್ಮಾಣಕ್ಕೂ ಕೂಡ ಪ್ರಯೋಜನವಾಗಬೇಕೆಂಬ ಪಾಲಿಸಿ ಇದೆ. ಅದನ್ನು ಏನಾದರೂ ಪುನರಾಲೋಚನೆ ಮಾಡಿ ಸ್ವಲ್ಪ scope ನ್ನು widenಮಾಡುತ್ತೀರಾ? ಅದು ತಮ್ಮ ವಿವೇಚನೆಗೆ ಬಿಟ್ಟಿರುವುದು.

ಶ್ರೀ ಚರಂತಿಮಠ ವೀರಣ್ಣ ಚಂದ್ರಶೇಖರಯ್ಯ : ಮಾನ್ಯ ಅಧ್ಯಕ್ಷರೆ......

ಅಧ್ಯಕ್ಷರು : ಮಾನ್ಯ ಚರಂತಿಮಠ್ ರವರೆ, ಎರಡೇ ಎರಡು clarificationನ್ನು ಕೇಳಿ.

ಶ್ರೀ ಚರಂತಿಮಠ ವೀರಣ್ಣ ಚಂದ್ರಶೇಖರಯ್ಯ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಡಾ: ನಂಜುಂಡಪ್ಪನವರ ವರದಿಯ ಬಗ್ಗೆ mdiscussion ಆಯಿತು. ಅ ವರದಿಯ ಬಗ್ಗೆ ಮುಂದುವರಿದ ತಾಲ್ಲೂಕು ಹಾಗೂ ಹಿಂದುಳಿದ ತಾಲ್ಲೂಕುಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ನಮ್ಮ ಬಾಗಲಕೋಟೆ ತಾಲ್ಲೂಕು ಮುಂದುವರೆದ ಪ್ರದೇಶ ಅಲ್ಲ ಹಾಗು ಹಿಂದುಳಿದಿರುವಂತಹ ತಾಲ್ಲೂಕು ಸಹ ಅಲ್ಲ, ಅದು ಸರ್ವನಾಶವಾಗಿರುವಂತಹ ತಾಲ್ಲೂಕು ಆಗಿದೆ. ಇದರ ಬಗ್ಗೆ ಈಗಾಗಲೇ ಒಂದು package announce ಆಯಿತು. ಇದರ ಬಗ್ಗೆ ಸರ್ಕಾರಿ ಆಜ್ಞೆಯೂ ಆಗಿದೆ. ಅಧಿಕಾರಕ್ಕೆ ಬಂದವರೆಲ್ಲರೂ ಪಾಳೆಗಾರಿಕೆ ಮಾಡುತ್ತಾರೆಂಬ ಶಬ್ದವನ್ನು ಪ್ರಯೋಗ ಮಾಡಿದಿರಿ. ನಮ್ಮಲ್ಲಿ ಸರ್ಕಾರದ ಕಡೆಯಿಂದ ಪಾಳೆಗಾರಿಕೆ

ಇಲ್ಲ.ಯಾವ ಸರ್ಕಾರ ಬಂದರೂ ಕೂಡ 12 ವರ್ಷದಿಂದ ನಮ್ಮ ಬಾಗಲಕೋಟೆಯಲ್ಲಿ ಅಧಿಕಾರಿಗಳ ಪಾಳೇಗಾರಿಕೆ ನಡೆಯುತ್ತಿದೆ. ಈ ಪಾಳೆಗಾರಿಕೆಯನ್ನು ತಪ್ಪಿಸಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಬಾಗಲಕೋಟೆ ಏನು ಸರ್ವನಾಶವಾಗಿದೆ........

ಅಧ್ಯಕ್ಷರು ; ಮಾನ್ಯ ಚರಂತಿಮಠ್ ರವರೆ, ಅಧಿಕಾರಿಗಳ ಜೊತೆಗೆ ಪಾಳೆಗಾರಿಕೆ ಮಾಡುವ ಬಗ್ಗೆ ಜನಪ್ರತಿನಿಧಿಗಳ ಸಹ ಸೇರಿಕೊಂಡುಬಿಟ್ಟಿರುತ್ತಾರೆ. partnership......

ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ : ಹಾಗೆಯೇ ಆಗಿದೆ. ನನ್ನ ಮೊದಲನೆಯ ವಿನಂತಿ ಏನೆಂದರೆ ನಮ್ಮನ್ನು ಅಧಿಕಾರಿಗಳ ಪಾಳೇಗಾರಿಕೆಯಿಂದ ಮುಕ್ತರನ್ನಾಗಿ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ನನಗೆ ಬೆಳಗಾವಿ ಎಂದರೆ ವಿಶೇಷ ಪ್ರೇಮ, 7 ತಿಂಗಳಲ್ಲಿ ನಾನು 8 ಸಾರಿ ಮಾಡಿದ್ದೇನೆ ಎಂದು ಒಂದು statement ಮಾಡಿದ್ದಾರೆ. ಅದನ್ನು ನೋಡಿ ನಮಗೆ, ಬೇರೆಯ ಜಿಲ್ಲೆಯವರಿಗೆ. ನಮ್ಮ ಗತಿ ಏನಪ್ಪಾ ಎಂದು ಭಯವಾಗಿದೆ. ನಮ್ಮ ಜಿಲ್ಲೆಯ ಮುಳುಗಡೆಯಿಂದ ಒದ್ದಾಡುವಂತಹ ಜಿಲ್ಲೆಯಾಗಿದೆ, ಮುಳುಗಡೆಯಿಂದ ತತ್ತರಿಸುವಂತಹ ನಾವು ಜಿಲ್ಲಾ ಮುಖ್ಯಕೇಂದ್ರದವರು, ನಮ್ಮ ಕಡೆ ಅವರಿಗೆ ವಿಶೇಷವಾದ ಒಲವು ಇರಬೇಕೆಂದು ನಾನು ಕೇಳಿಕೋಳ್ಳುತ್ತೇನೆ. ಅಲ್ಲಿ ನಾವು ಅಭಿವೃದ್ಧಿಯಿಂದ ಏನು ವಂಚಿತರಾಗಿದ್ದೇವೆ, ಅದನ್ನು ಅತೀ ಬೇಗನೆ ಒದಗಿಸಿಕೊಡಬೇಕೆಂದು ನಾನು ನಿಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಜಿ.ಎಸ್. ಗಡ್ಡದೇವರಮಠ (ಶಿರಹಟ್ಟಿ) : ಮಾನ್ಯ ಅಧ್ಯಕ್ಷರೆ, ನಮ್ಮ ಭಾಗದಲ್ಲಿ ಪ್ರಪ್ರಥಮವಾಗಿ ನಡೆದಂತಹ ಈ ಐತಿಹಾಸಿಕ ಅಧಿವೇಶನದಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಬಹಳ ಹಿಂದುಳಿದ ಪ್ರದೇಶವಾದ ಶಿರಹಟ್ಟಿಯ ತಾಲ್ಲೂಕಿನಿಂದ ಆರಿಸಿಬಂದಿರುವ ಶಾಸಕನಾಗಿದ್ದೇನೆ. ನಮಗೆ ಅತಿವೃಷ್ಟಿ ಮತ್ತು ಅನಾವೃಷ್ಟಿ ಅದರ ಕೈಗೆ ಸಿಕ್ಕಿ ನಾವು ವಿಲಿವಿಲಿ ಎಂದು ಒದ್ದಾಡುವಂತಹ ಪರಿಸ್ಥಿತಿ ಬಂದಿದೆ. ಈ ವರ್ಷದೊಳಗೆ ಮುಂಗಾರು ಮಳೆ ಸ್ವಲ್ಪ ಜಾಸ್ತಿಯಾಗಿರುವುದಕ್ಕೆ ಕೆಲವೊಂದು ಪ್ರದೇಶದಲ್ಲಿ ಜಾಸ್ತಿಯಾಗಿರುವುದಕ್ಕೆ ಅದು ಹಳ್ಳದಿಂದ ಹರಿದು ಅನೇಕ ಸಾರಿ ನಾನು ಹೋದ ಸಾರಿ floorನಲ್ಲಿ ಮಾತನಾಡುವಂತಹ ಸಂದರ್ಭವನ್ನು ಈ ಸಾರಿ ನೆನಪಿಸುತ್ತೇನೆ. ಹಳ್ಳದಲ್ಲಿರುವಂತಹ ಎಲ್ಲಾ ಗ್ರಾಮಗಳನ್ನು ಅಲ್ಪಸ್ವಲ್ಪ ಬೆಳೆದಂತಹ ಮೇವು ಮತ್ತು

ಗುಡಿಸಲಿನಲ್ಲಿ ವಾಸವಾಗಿರುವಂತಹ ಜನರೆಲ್ಲರೂ ತೇಲಿಹೋಗುವಂತಹ ಪ್ರಸಂಗ ಮತ್ತು ದನಕ್ಕೆ ಕೂಡಿಟ್ಟಿರುವಂತಹ ಹೊಟ್ಟು ಮತ್ತು ಸೊಪ್ಪು ತೇಲಿಹೋಗುವಂತಹ ಪ್ರಸಂಗ ತಮ್ಮ ಮುಖಾಂತರವಾಗಿ ಸರ್ಕಾರಕ್ಕೆ ಗಮನಕ್ಕೆ ತಂದಿದ್ದೇವೆ. ಆದರೆ ಇದುವರೆವಿಗೂ ಸಹ ಅದಕ್ಕೆ ಪರಿಹಾರ ಸಿಗದೇ ಇರುವುದು ಬಹಳ ದುರ್ದೈವದ ಸಂಗತಿ, ಆ ನೋವನ್ನು ಆ ಜನರು ಉಣ್ಣುತ್ತಿದ್ದಾರೆ. ಆವತ್ತು ಮಳೆಯಾಗಿದ್ದು ಇವತ್ತಿನವರೆವಿಗೂ ಸಹ ಅಲ್ಲಿ ಮಳೆಯಾಗಿರುವುದಿಲ್ಲ. ಆ ತರಹವಾದ ಭೀಕರವಾದ ಬರಗಾಲವನ್ನು ಎದುರಿಸುವಂತಹ ನಮಗೆ ಇದೆ. ಬರಗಾಲ ಕಾಮಗಾರಿ ಆಗುವ ಬಗ್ಗೆ ನಮ್ಮ ತಾಲ್ಲೂಕಿಗೆ ವಿಶೇಷವಾದಂತಹ ಅನುಕೂಲತೆಗಳನ್ನು ಮಾಡಿ ಕೊಡಬೇಕು. ಅದರ ಜೊತೆಗೆ ನಮ್ಮ ತಾಲ್ಲೂಕಿನಲ್ಲಿ ವಿಶೇಷವಾದ ಕುಡಿಯುವ ನೀರಿನ ಸಮಸ್ಯೆ ಇದೆ. ಸುಮಾರು 45 ಹಳ್ಳಿಗಳು flowride contents village ಎಂದು ಗುರುತಿಸಲ್ಪಟ್ಟಿದೆ. ಅದರಲ್ಲಿ ಇದುವರೆವಿಗೂ 12–13 ಹಳ್ಳಿಗಳಿಗೆ ಮಾತ್ರ ಒಳ್ಳೆಯ ನೀರನ್ನು ಕೊಡುವಂತಹ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಈಗ 35 ವರ್ಷದ ಹುಡುಗ ಬಹುತೇಕ 75–80 ವರ್ಷದ ಮುದುಕನ ಹಾಗೆ ಕಾಣುವಂತಹ ವ್ಯವಸ್ಥೆ ಅಲ್ಲಿ ಇದೆ. ಅದಕ್ಕೆ ಅದಷ್ಟು ಬೇಗ ಗ್ರಾಮೀಣ ಕುಡಿಯುವ ನೀರಿನ ಯೋಜನೆಯಡಿಯಿಂದ ಮಾಡಿಕೊಡಬೇಕು. ಬಹಳ ಶೋಚನೀಯವಾದ ವಿಷಯವೆಂದರೆ, ನಮ್ಮ ಶಿರಹಟ್ಟಿ ತಾಲ್ಲೂಕಿನಿಂದ ಪಕ್ಕದ ಹುಬ್ಬಳಿಯ ದೊಡ್ಡ ನಗರಕ್ಕೆ ಅಲ್ಪಸ್ವಲ್ಪ ಮರಳು ತುಂಬಿದ ಗಾಡಿಗಳು ಬರು ವುದರಿಂದ ನಾವು ಸರ್ಕಾರದ ಸಹಾಯದಿನಂದ ಮಾಡಿರುವಂತಹ ರಸ್ತೆಗಳ ಮೇಲೆ ಈ 10 ವೀಲರ್ಸ್ ಗಾಡಿ ಓಡಾಡುವುದರಿಂದ ರಸ್ತೆಯೂ ಏನೇನಕ್ಕೂ ಬಾರದಂತಹ ಸ್ಥಿತಿ ಅಲ್ಲಿ ಉದ್ಭವವಾಗಿದೆ.

ಅಧ್ಯಕ್ಷರು : ಯಾವ ಮಂತ್ರಿಗಳನ್ನು ನೀವು ಎಷ್ಟು ಕೇಳುತ್ತೀರಿ?

ಶ್ರೀ ಜಿ.ಎಸ್. ಗಡ್ಡದೇವರಮಠ : ನಮಗೆ ಏನೋ ಒಂದು ಟೈಮ್ ಕೊಟ್ಟಿರುತ್ತಾರೆ. ಸಾಕಷ್ಟು ಮಾನ್ಯ ಸಚಿವರುಗಳನ್ನು ಬೇರೆ ಬೇರೆ ಕಾರ್ಯಕ್ರಮಗಳಿಗಾಗಿ ಅಲ್ಲಿಗೆ ಕರೆದುಕೊಂಡು ಹೋಗಿ ನಾವು ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ನಾವು ಅವರನ್ನು ಅಲ್ಲಿ ಅಡ್ಡಾಡಿಸುವಂಥ ಸಂದರ್ಭದಲ್ಲಿ ಇದೇನಪ್ಪಾ ನಿಮ್ಮ ರಸ್ತೆಯ ಪರಿಸ್ಥಿತಿ ಎಂದು ನಮ್ಮನ್ನು ಕೇಳುತ್ತಾರೆ. ಆದರೆ ನಮ್ಮ ದುರ್ದೈವವೆಂದರೆ ಈ ಬೆಂಗಳೂರಿಗೆ ಬಂದ ತಕ್ಷಣ ನಮ್ಮನ್ನು ಯಾರೂ ಕೂಡ ಮಾತನಾಡಿಸುವುದಿಲ್ಲ. ಈ ಪರಿಸ್ಥಿತಿ ನಿರ್ಮಾಣವಾಗಿದೆ. ಹೆಚ್ಚು ರಸ್ತೆಗಳ ನಿರ್ಮಾಣಕ್ಕಾಗಿ ನೆಮ್ಮ ತಾಲ್ಲೂಕಿಗೆ ಅನುಕೂಲ ಮಾಡಿಕೊಡಬೇಕೆಂದು ಇವತ್ತು ನಾವು ಮಾನ್ಯ ಮುಖ್ಯಮಂತ್ರಿಗಳಿಗೆ

ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ನಾನು 5 ದಿವಸಗಳಿಂದ ಇಲ್ಲಿ ಕುಳಿತುಕೊಂಡಿದ್ದೇನೆ. ಏನಾದರೂ ಮಾತನಾಡೋಣವೆಂದು ಅಂದುಕೊಂಡಿದ್ದೇನೆ. ನಾನು ಯಾವ ವಿಷಯವನ್ನು ಮಾತನಾಡಲಿಲ್ಲ. ಬೆಂಗಳೂರಿನಿಂದ ಇಲ್ಲಿಗೆ ಒಂದು ಸುವರ್ಣ ಕರ್ನಾಟಕ ಸುವರ್ಣ ಸಂಭ್ರಮದಿಂದ ಈ ಅಧೀವೇಶನ ನಡೆಯುತ್ತಿದೆ. ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಇದೊಂದು ಐತಿಹಾಸಿಕವಾದ ಕಾರ್ಯಕ್ರಮವಾಗಿದೆ. ಈ ಅಧಿವೇಶನ, ಬೆಳಗಾವಿ ಕನ್ನಡ ತಾಯಿಯ ಭುವನೇಶ್ವರಿಯ ಮುಕುಟಮಣಿ ಉತ್ತರ ಕರ್ನಾಟಕದ ಭದ್ರಕೋಟೆ, ಬೆಳಗಾವಿ ನೆಲದಲ್ಲಿ ಕನ್ನಡ ರಾಜರುಗಳು ಆಡಳಿತ ನಡೆಸಿರುವ ಬಗ್ಗೆ ಇತಿಹಾಸದಲ್ಲಿ ಓದಿದ್ದೇವೆ, ಕೇಳಿದ್ದೇವೆ, ಕಿತ್ತೂರು ರಾಣಿ ಚೆನ್ನಮ್ಮ ಹುಟ್ಟಿದಂಥ ಜಿಲ್ಲೆ ಎಂದು ಕುಳಿತ್ತಿದ್ದೇವೆ ಸಂಗೋಳ್ಳಿ ರಾಯಣ್ಣಾ ಹುಟ್ಟಿದಂಥ ಜಿಲ್ಲೆ ಎಂದು ಕೇಳಿದ್ದೆವು. ಇಂತಹ ಒಂದು ಅಧಿವೇಶನದಲ್ಲಿ ಬರ, ಡಾ: ನಂಜುಂಡಪ್ಪ ವರದಿ, ಇದರ ಬಗ್ಗೆ ಚರ್ಚೆ ಮಾಡುತ್ತಾ ಐತಿಹಾಸಿಕವಾದ ನಿರ್ಧಾರ ತೆಗೆದುಕೊಳ್ಳುತ್ತಿರೆಂದು ಒಂದು ಕನಸ್ಸನ್ನು ನಾವು ಇಟ್ಟುಕೊಂಡಿದ್ದೇವು ಆದರೆ ಒಂದು ವಿಷಯವನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ನಾನು ಸುತ್ತಿಬಳಸಿ ಮಾತನಾಡದೇ ಬೆಂಗಳೂರು ನಗರದಿಂದ ಬರುವಂಥ ಶಾಸಕರಾದ ನಮಗೆ ಸಮುದ್ರಕ್ಕೆ ನೆಂಟು ಉಪ್ಪಿಗೆ ಬರ ಅಂದಹಾಗೆ ಹೆಸರಿಗೆ ಮಾತ್ರ ಬಹುತೇಕ ಎಲ್ಲಾ ರೆವಿನ್ಯೂವನ್ನು ಕೊಡುವುದು ಬೆಂಗಳೂರು ನಗರ ಜಿಲ್ಲೆ. ಈ ಸದನದಲ್ಲಿ ಮಾನ್ಯ ಗೋವಿಂದ ಕಾರಜೋಳರವರು ಇದ್ದರೆ ಅವರನ್ನು ಕೇಳಬಯಸುತ್ತೇನೆ. ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಇವತ್ತು ಬಿಪಿಎಲ್ ಕಾರ್ಡ್‌ಗಳನ್ನು ಕೊಡುತ್ತಿದ್ದೀರಿ. ಇದರ ಬಗ್ಗೆ ಎರಡು ಸಲ ಅಧಿವೇಶನದಲ್ಲಿ ಹೇಳಿದ್ದೀರಿ. ಇನ್ನೂ ಏಕೆ ಕೊಟ್ಟಿಲ್ಲ ? ಗುಳೆಹೋದರೆ, ಬರ ಬಂದರೆ ಎಲ್ಲರೂ ಕೂಡ ಬೆಂಗಳೂರು ನಗರಕ್ಕೆ ಬರುತ್ತಾರೆ. ಕನ್ನಡ ಶಾಲೆಗಳಲ್ಲಿ ಕಲಿಯತಕ್ಕಂಥ ಜನ ಕರ್ನಾಟಕದ ಜನ, ಕನ್ನಡ ಮಾಧ್ಯಮದ ಪ್ರೌಢಶಾಲೆಗಳನ್ನು ಕೊಡಿ ಎಂದು ನಾವು ಬೇಡಿಕೊಂಡರೂ 8ನೇ ತರಗತಿ ಹಾಗೂ ಪಿಯುಸಿ ತರಗತಿಗಳನ್ನು ಕೊಡಲಿಲ್ಲ. ಏಕೆ ಕೊಡಲಿಲ್ಲವೆಂದು ನಾನು ಶಿಕ್ಷಣ ಸಚಿವರನ್ನು ಕೇಳುತ್ತೇನೆ. ಇದೇ ಅಧಿವೇಶನದಲ್ಲಿ ಮಾನ್ಯ ಪ್ರಕಾಶ್‌ರವರು ಭರವಸೆಯನ್ನು ಕೊಟ್ಟಿದ್ದರು. ಇದುವರೆವಿಗೂ ಕೊಡಲಿಲ್ಲ. ರಾಜ್ಯದಲ್ಲಿ ಅತಿವೃಷ್ಟಿ ಹಾಗು ಅನಾವೃಷ್ಟಿ ಆಗುತ್ತದೆ.

ಒಂದು ಕಡೆ ಮಳೆ ಬಂದಾಗ ಪ್ರವಾಹ ಬರುತ್ತದೆ. ಮತ್ತೊಂದು ಕಡೆ ಬರಗಾಲ ಬಂದಿದೆ. ಸಮಗ್ರವಾದ ನೀರಾವರಿಗೆ ಸಂಬಂಧಪಟ್ಟ ಹಾಗೆ ಪರಮಶಿವಯ್ಯನವರ ವರದಿಯನ್ನು ಅನುಷ್ಠಾನಕ್ಕೆ ತರಬೇಕು. ಮತ್ತು ನೇತ್ರಾವತಿ ನದಿಯನ್ನು ಈ ಕಡೆ ಭಾಗಕ್ಕೆ ತರಬೇಕು. ಇದುವರೆಗೂ ಡಾ: ನಂಜುಂಡಪ್ಪ ವರದಿ ಆಗಲೀ ನಮ್ಮ ಬೆಂಗಳೂರು, ಕೋಲಾರ, ಚಿತ್ರದುರ್ಗ, ತುಮಕೂರು, ಬಹುಶಃ ಕೇಳದೆ ಇರುವಂಥ ಜಿಲ್ಲೆಯಾಗಿದೆ. ದಯಮಾಡಿ ಇದರ ಬಗ್ಗೆ ಈ ಸದನದಲ್ಲಿ ತೀರ್ಮಾನ ತೆಗೆದುಕೊಳ್ಳಿ ಸಮುದ್ರಕ್ಕೆ ಪೋಲಾಗುತ್ತಿರುವಂಥ ನೀರನ್ನು ಹೇಗೆ ಇದನ್ನು ಉಪಯೋಗಿಸಿಕೊಂಡು ಈ ಜಿಲ್ಲೆಗಳಿಗೆ ಬೇಕಾಗಿರುವಂಥ ಕುಡಿಯುವ ನೀರಿನ ಕೊರತೆಯನ್ನು ಮತ್ತು ರೈತರಿಗೆ ಬೇಕಾಗಿರುವಂಥ ಕೊರತೆಯನ್ನು ನೀಗಿಸುವುದಕ್ಕೆ ಸಾಧ್ಯವೆನ್ನುವುದರ ಬಗ್ಗೆ ಚಿಂತನೆಯನ್ನು ಮಾಡಬೇಕೆನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೊಮ್ಮೆ ನಾನ್ನು ನಿಮಗೆಲ್ಲರಿಗೂ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈ ಚರ್ಚೆಯಲ್ಲಿ ಮುಕ್ತಾಯ ಮಾಡಲಾಗಿದೆ. ಈಗ ಒಂದು ಪ್ರಕಟಣೆ ಇದೆ.

10 ಪ್ರಕಟಣೆ

ಅಧ್ಯಕ್ಷರು ; ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಒಂದು ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2005ನೇ ಸಾಲಿನ ಕರ್ನಾಟಕ ಭೂ ಕಂದಾಯ 2ನೇ ತಿದ್ದುಪಡಿ ವಿಧೇಯಕವನ್ನು ಈ ದಿನ ದಿನಾಂಕ:29ನೇ ಸೆಪ್ಟೆಂಬರ್ 2006 ರಂದು ಯಾವುದೇ ತಿದ್ದುಪಡಿಗಳು ಇಲ್ಲದೆ ಅನುಮೋದಿಸಿದೆ ಎಂದು ತಿಳಿಸಿರುತ್ತಾರೆ.

11 ಶಾಸನ ರಚನೆ

ಆ. ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ, 2005.

ಪರ್ಯಾಲೋಚನಾ ಪ್ರಸ್ತಾವ

ಡಾ: ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗು ಘನತೆವೆತ್ತ ರಾಜ್ಯಪಾಲರ ಪರವಾಗಿ ಸಂದೇಶದೊಡನೆ ಪುನರ್ ಪರಿಗಣನೆಗಾಗಿ